ಕರ್ನಾಟಕದ ಸಂಸ್ಕೃತ ಶಾಸನಗಳ ಸ್ವರೂಪ
ಮತ್ತು
ಕನ್ನಡ ಶಾಸನಗಳ ಮೇಲೆ ಅದರ ಪ್ರಭಾವ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾಸನ ಶಾಸ್ತ್ರ ವಿಭಾಗಕ್ಕೆ
ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

ಸಂಶೋಧಕರು
ಸರ್ವೋತ್ತಮ ಆಚಾರ್ಯ ಎಂ.

ಮಾರ್ಗದರ್ಶಕರು
ಡಾ। ದೇವರಕೊಂಡಾರೆಡ್ಡಿ

ಮಾಜ ವಿಜ್ಞಾನಗಳ ನಿಕಾಯ
ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬
೨೦೦೮

ಕರ್ನಾಟಕದ ಸಂಸ್ಕೃತ ಶಾಸನಗಳ ಸ್ವರೂಪ

ಮತ್ತು

ಕನ್ನಡ ಶಾಸನಗಳ ಮೇಲೆ ಅದರ ಪ್ರಭಾವ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾಸನ ಶಾಸ್ತ್ರ ವಿಭಾಗಕ್ಕೆ

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

ಸಂಶೋಧಕರು

ಸರ್ವೋತ್ತಮ ಆಚಾರ್ಯ ಎಂ.

ಮಾರ್ಗದರ್ಶಕರು

ಡಾ। ದೇವರಕೊಂಡಾರೆಡ್ಡಿ

ಸಮಾಜ ವಿಜ್ಞಾನಗಳ ನಿಕಾಯ

ಶಾಸನ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩೨೭೬

೨೦೦೮

ಮಾರ್ಗದರ್ಶಕರ ಪ್ರಮಾಣ ಪತ್ರ

ಕರ್ನಾಟಕದ ಸಂಸ್ಕೃತ ಶಾಸನಗಳ ಸ್ವರೂಪ ಮತ್ತು ಪ್ರಭಾವ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ **ಸರ್ವೋತ್ತಮ ಆಚಾರ್ಯ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 15-10-2008

ಡಾ. ದೇವರಕೊಂಡಾ ರೆಡ್ಡಿ.
ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ.

ಪ್ರಮಾಣ ಪತ್ರ

ಕರ್ನಾಟಕ ಸಂಸ್ಕೃತ ಶಾಸನಗಳ ಸ್ವರೂಪ ಮತ್ತು ಪ್ರಭಾವ ಎಂಬ ನಿಬಂಧವನ್ನು ಡಾ.ದೇವರಕೊಂಡಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಶಾಸನ ಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Sarvothama

ಸರ್ವೋತ್ತಮ ಆಚಾರ್ಯ

ಸಂಶೋಧಕ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಸ್ಥಳ : ವಿದ್ಯಾರಣ್ಯ

ದಿನಾಂಕ : 15-10-2008

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧. ಪೀಠಿಕೆ

ಒಂದು ನಾಡಿನ ಐತಿಹಾಸಿಕ ದಾಖಲೆಗಳೆಂದು ಕರೆಯಬೇಕಾದರೆ ಅದು ಆ ನಾಡಿನ ಐತಿಹಾಸಿಕ, ಸಾಂಸ್ಕೃತಿಕ ಮೊದಲಾದ ಪರಂಪರೆಗಳನ್ನು ನಿರ್ದೇಶಿಸಿರಬೇಕು. ಇತಿಹಾಸವು ಒಂದು ನಾಡಿನ ಪ್ರಾಚೀನ ಪರಂಪರೆಯನ್ನು ತೋರಿಸುತ್ತದೆ. ಇಂತಹ ಇತಿಹಾಸವು ದೃಢವಾಗಿ ನಿಲ್ಲಬೇಕಾದರೆ ಆಧಾರಗಳು ಬಹುಮುಖ್ಯ. ಇಂತಹ ಆಧಾರಗಳು ಇಲ್ಲದೇ ಹೋದರೆ ಇತಿಹಾಸವನ್ನು ತಿಳಿಯುವುದು ಕಷ್ಟ. ಹಾಗಾಗಿ ಯಾವುದೇ ದೇಶದ, ರಾಜ್ಯದ ಮತ್ತು ಪ್ರಾಂತ್ಯಗಳ ಇತಿಹಾಸ ಸೃಷ್ಠಿಗೆ ಆಧಾರಗಳು ಬಹು ಮುಖ್ಯ. ಇದರಲ್ಲಿ ಸಾಹಿತ್ಯದ ಆಧಾರಗಳಿಗಿಂತ ಶಾಸನಾಧಾರಗಳು ಅತ್ಯಂತ ನಂಬಿಕೆಯುಳ್ಳ ಆಧಾರಗಳಾಗಿವೆ. ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡುವವರಿಗೆ ಸಂಸ್ಕೃತ ಸಾಹಿತ್ಯದಂತೆಯೇ ಶಾಸನ ಸಾಹಿತ್ಯವು ಅತ್ಯಂತ ಅಮೂಲ್ಯವಾಗಿದೆ. ಹಾಗಾಗಿ ಇತಿಹಾಸವನ್ನು ಅರಿತುಕೊಳ್ಳಲು ಯಾವುದೇ ಆಧಾರಗಳಿದ್ದರೂ ಅವುಗಳಲ್ಲಿ ಪ್ರಧಾನವಾದುದು ಶಾಸನವಾಗಿದೆ. ಹಾಗಾಗಿ ಶಾಸನಗಳು ಪ್ರಮುಖ ಚಾರಿತ್ರಿಕ ಸಾಮಗ್ರಿಯಾಗಿದೆ. ಇತಿಹಾಸಕ್ಕೆ ಆಕರಗಳಾಗಿವೆ. ಪುರಾತತ್ವ ಶೋಧನೆಯೂ ಕೂಡಾ ಅಂತಹಾ ಒಂದು ಐತಿಹಾಸಿಕ ಆಕಾರವಾಗಿದೆ. ಮಾನವ ಉದ್ದೇಶ ಪೂರ್ವಕವಾಗಿ ಏನೇನು ಮಾಡಿದ್ದಾನೋ ಅದೆಲ್ಲಾ ಪುರಾತತ್ವ ಶೋಧನೆಯ ವ್ಯಾಪ್ತಿಗೆ ಒಳಪಡುತ್ತದೆ. ಮಾನವ ತನ್ನ ದಿನ ಬಳಕೆಯ ಉಪಯೋಗಕ್ಕಾಗಿ ಆವಿಷ್ಕರಿಸಿದಂತಹ ಮಾನವನಿರ್ಮಿತ ವಸ್ತುಗಳು ಐತಿಹಾಸಿಕವಾಗಿ ಅಥವಾ ಪುರಾತತ್ವ ಸಂಶೋಧನೆಯ ದೃಷ್ಟಿಯಿಂದ ನೋಡಿದಾಗ ಅವುಗಳನ್ನು ಅವಶೇಷಗಳೆನ್ನುತ್ತಾರೆ. ಇಂತಹ ಮಹತ್ವ ಪೂರ್ಣವಾದ ಪುರಾತತ್ವ ಶಾಸ್ತ್ರದ ಒಂದು ಅಂಗ "ಶಾಸನ ಶಾಸ್ತ್ರ"ವಾಗಿದೆ.

ಶಾಸನಗಳೆಂದರೆ 'ಆಜ್ಞೆ' ಎಂಬ ಅರ್ಥವಿದೆ. 'ರಾಜಾಜ್ಞೆ' ಇದರ ಪರಿಪೂರ್ಣ ಅರ್ಥವಾಗಿದೆ. ಕಲ್ಲು, ತಾಮ್ರ, ಬೆಳ್ಳಿ ಮುಂತಾದ ಲೋಹಗಳ ಮೇಲೆ ಕೊರೆಯಲ್ಪಟ್ಟ ಬರಹಗಳೇ ಶಾಸನಗಳಾಗಿವೆ. ಯಾವುದಾದರೊಂದು ಪದಾರ್ಥದ ಮೇಲೆ ಕೊರೆದ ಯಾವುದೇ ಬರಹವನ್ನು ಶಾಸನವೆಂದು ಕರೆಯಬಹುದು. ಇಂತಹ ಶಾಸನಗಳನ್ನು ಪ್ರದೇಶ, ಭಾಷೆ, ವಸ್ತು, ರಾಜವಂಶ ಮತ್ತು ವಿಷಯಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ವಿಧಾನಗಳಿವೆ. ಅವುಗಳಲ್ಲಿ ಪ್ರಾದೇಶಿಕ ವಿಧಾನದಲ್ಲಿ ಒಂದು ನಿರ್ದಿಷ್ಟ ಪ್ರದೇಶದಲ್ಲಿರುವ ಶಾಸನಗಳನ್ನು ಒಂದೊಂದು ಗುಂಪಾಗಿ ಮಾಡಿ ತನ್ಮೂಲಕ ಪ್ರದೇಶದ ಇತಿಹಾಸವನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ ಕನ್ನಡ ನಾಡಿನ ಶಾಸನಗಳು ಆಂಧ್ರ, ತಮಿಳುನಾಡಿನ ಶಾಸನಗಳು ಇಂತಹ ವಿಂಗಡನಾ ಕ್ರಮದಲ್ಲಿ ಆ ಪ್ರದೇಶದಲ್ಲಿ ದೊರೆಯುವ ಎಲ್ಲಾ ಲಿಪಿಯ ಎಲ್ಲಾ

ಭಾಷೆಗಳ, ಅರಸು ಮನೆತನಗಳ ಶಾಸನಗಳೂ ಸೇರುತ್ತವೆ. ಭರತಖಂಡದ ಶಾಸನಗಳಲ್ಲಿ ಪ್ರಯುಕ್ತವಾಗಿರುವ ಭಾಷೆಗಳನ್ನು ವಿದೇಶೀಯ ಮತ್ತು ದೇಶೀಯ ಭಾಷೆಗಳೆಂದು ಎರಡು ವರ್ಗಗಳನ್ನಾಗಿ ಮಾಡಿದ್ದಾರೆ. ದೇಶೀಯ ಭಾಷೆಗಳಲ್ಲಿ ಕನ್ನಡ, ತಮಿಳು, ತೆಲುಗು ಮೊದಲಾದವುಗಳು ಸೇರುತ್ತವೆ. ಭಾರತದ ಮೂಲದ ರಾಜರ ಪ್ರಾಚೀನತಮ ಶಾಸನಗಳಿರುವುದು ಪ್ರಾಕೃತದಲ್ಲಿ ವಾಸ್ತವವಾಗಿ ಭರತಖಂಡದ ಶಾಸನ ಭಾಷೆ ಪ್ರಾಕೃತವಾಗಿತ್ತು. ಕರ್ನಾಟಕದಲ್ಲಿ ಪ್ರಧಾನವಾಗಿ ಕನ್ನಡ, ಸಂಸ್ಕೃತ, ತಮಿಳು, ತೆಲುಗು ಭಾಷೆಯ ಶಾಸನಗಳು ದೊರಕುತ್ತವೆ. ಇಂತಹ ಸಂಸ್ಕೃತ ಶಾಸನಗಳ ಸ್ವರೂಪವನ್ನು ತಿಳಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಸಂಸ್ಕೃತ ಭಾಷೆಯು ಎಷ್ಟು ವೈಶಿಷ್ಯತೆಯಿಂದ ಕೂಡಿದೆಯೋ ಅಷ್ಟೇ ಸಂಸ್ಕೃತ ಸಾಹಿತ್ಯವೂ ಗಹನವಾದುದು. ಸಂಸ್ಕೃತ ಸಾಹಿತ್ಯದಲ್ಲಿರುವಷ್ಟು ವಿಶೇಷತೆ, ಪ್ರೌಢತೆ ಬೇರೆ ಯಾವ ಭಾಷೆಯ ಸಾಹಿತ್ಯದಲ್ಲೂ ದೊರಕದು. ಈ ಸಂಸ್ಕೃತವು ವೇದ ಪುರಾಣಗಳಂತಹ ಪವಿತ್ರ ರಚನೆಗಳನ್ನು, ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳನ್ನು, ಅಭಿಜ್ಞಾನ ಶಾಕುಂತಲ, ವಿಕ್ರಮೋರ್ವಶೀಯದಂತಹ ನಾಟಕಗಳನ್ನು, ಮನುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿಗಳಂತಹ ಮಾನವ ಧರ್ಮಶಾಸ್ತ್ರಗಳನ್ನು, ಅರ್ಥಶಾಸ್ತ್ರ, ಶುಕ್ರನೀತಿಗಳಂತಹ ರಾಜನೀತಿ ಶಾಸ್ತ್ರಗ್ರಂಥಗಳನ್ನು, ವಿಜ್ಞಾನ, ತಂತ್ರಜ್ಞಾನ, ಗಣಿತ, ಜ್ಯೋತಿಷ್ಯ ಮೊದಲಾದ ಶಾಸ್ತ್ರಗಳಿಗೆ ಹತ್ತು ಹಲವಾರು ಗ್ರಂಥಗಳನ್ನು ಪ್ರಪಂಚಕ್ಕೆ ನೀಡಿದೆ. ಭಗವದ್ಗೀತೆಯು ಕೇವಲ ಭಾರತೀಯರಿಗೆ ಮಾತ್ರವಲ್ಲದೆ, ಪ್ರಪಂಚಕ್ಕೆ ಧಾರ್ಮಿಕ ಪಾಠವನ್ನು ನೀಡಿದೆ. ಇಂತಹ ಸಂಸ್ಕೃತ ಸಾಹಿತ್ಯವು ವೇದ ಕಾಲದಲ್ಲಿ ಋಷಿ ಮುನಿಗಳಿಂದ ಪೋಷಿಸಲ್ಪಟ್ಟು, ಲೌಕಿಕ ಸಾಹಿತ್ಯದ ಕಾಲದಲ್ಲಿ ಕವಿಗಳಿಂದ ವಿಕಸಿಸಲ್ಪಟ್ಟು, ಇತಿಹಾಸ ಕಾಲದಲ್ಲಿ ರಾಜಾಶ್ರಯವನ್ನು ಪಡೆದು ಪ್ರೌಢವಾಗಿ ಬೆಳೆದು ನಿಂತಿದೆ. ಭಾರತದ ಎಲ್ಲಾ ಭಾಷೆಗಳಿಗೂ ಸಂಸ್ಕೃತ ಭಾಷೆಯ ಪ್ರಭಾವ ಇದ್ದೇ ಇದೆ. ಇಂತಹ ಸಂಸ್ಕೃತ ಸಾಹಿತ್ಯವನ್ನು ಮೂರು ವಿಭಾಗ ಮಾಡಬಹುದು.

೧. ಶೃತಿಗಳ ಕಾಲ	ಸಂಹಿತೆ, ಬ್ರಾಹ್ಮಣಗಳು, ಆರಣ್ಯಕಗಳ ರಚನೆಗಳ ಕಾಲ
೨. ಸ್ಮೃತಿಗಳ ಕಾಲ	ರಾಮಾಯಣ, ಮಹಾಭಾರತ ಮೊದಲಾದ ರಚನೆಗಳ ಕಾಲ.
೩. ಲೌಕಿಕ ಸಂಸ್ಕೃತದ ಕಾಲ	ಪಾಣಿನಿಯಂತಹ ವ್ಯಾಕರಣ ಶಾಸ್ತ್ರಜ್ಞರ ಕಾಲ ಮತ್ತು ನಂತರದ ಕಾಲ.

ವೇದಗಳೆಂಬ ಹೆಮ್ಮರವನ್ನು ಆಶ್ರಯಿಸಿಕೊಂಡು ಅದರ ಅರ್ಥವನ್ನು ಸಾರವನ್ನು ತಿಳಿಸುವುದಕ್ಕಾಗಿ ಬ್ರಾಹ್ಮಣ, ಆರಣ್ಯಕಗಳು ಜನಿಸಿದವು. ಇಂತಹ ರಚನೆಗಳ ಸಾರವನ್ನು ಸ್ವೀಕರಿಸಿಕೊಂಡು ಕಥಾರೂಪವಾಗಿ ರಾಮಾಯಣ, ಮಹಾಭಾರತಗಳು ರಚನೆಯಾದವು. ಇಲ್ಲಿ ಬರುವಂತಹ ಕಥೆ, ಉಪಕಥೆ, ಉಪಾಖ್ಯಾನಗಳನ್ನು ಆಧಾರವಾಗಿಟ್ಟುಕೊಂಡು ಲೌಕಿಕ ಸಾಹಿತ್ಯವು ಬೆಳೆಯಿತು. ಈ

ಲೌಕಿಕ ಸಾಹಿತ್ಯವು ಹಲವಾರು ಅಮೂಲ್ಯ ಸಾಹಿತ್ಯ ರಚನೆಗಳಿಗೆ ಕಾರಣವಾಯಿತು. ಕೇವಲ ಕಾವ್ಯಗುಣಗಳುಳ್ಳ ಗ್ರಂಥಗಳು ಮಾತ್ರವಲ್ಲದೆ, ಜ್ಯೋತಿಷ್ಯ, ವ್ಯಾಕರಣ, ಗಣಿತ ಇತ್ಯಾದಿ ಶಾಸ್ತ್ರಗಳ ಮಹತ್ತರವಾದ ಗ್ರಂಥಗಳು ಆವಿರ್ಭಾವವಾದವು. ಈ ಎಲ್ಲಾ ಶಾಸ್ತ್ರಗ್ರಂಥಗಳ ರಚನೆಗೆ ರಾಜಾಶ್ರಯವು ದೊರಕಿದುದರಿಂದ ಅವು ಉನ್ನತ ಸ್ಥಾನವನ್ನು ಪಡೆದವು. ಕವಿಗಳಿಗೆ ಶಾಸ್ತ್ರಜ್ಞರಿಗೆ, ಪಂಡಿತರಿಗೆ ಪ್ರೋತ್ಸಾಹ, ಮನ್ನಣೆ ದೊರಕಿದವು. ಈ ಕಾಲದಲ್ಲಿ ರಾಜರು ತಾವು ಮಾಡಿದಂತಹ ಧಾರ್ಮಿಕ ಕಾರ್ಯಗಳ, ದಿಗ್ವಿಜಯ ಯಾತ್ರೆಗಳ ಮತ್ತು ಸಾಮಾಜಿಕ ಕಳಕಳಿಯಿಂದ ಮಾಡಿದಂತಹ ಕಾರ್ಯಗಳನ್ನು ಪ್ರಚುರ ಪಡಿಸಲು ಮತ್ತು ಮುಂದಿನ ಪೀಳಿಗೆಯವರಿಗೆ ತಿಳಿಯುವಂತಾಗಲು ಒಂದು ಮಾಧ್ಯಮವನ್ನು ಆಶ್ರಯಿಸಿದರು. ಅವುಗಳೇ 'ಶಾಸನ'ಗಳಾಗಿವೆ.

ಇಂತಹ ಶಾಸನಗಳ ರಚನೆಯ ಕಾಲದಲ್ಲಿ ಸಂಸ್ಕೃತ ಸಾಹಿತ್ಯವು ಕೂಡಾ ವಿಕಾಸ ಹೊಂದುತ್ತಾ ಪ್ರಬುದ್ಧ ಸ್ಥಿತಿಗೆ ತಲುಪಿತ್ತು. ಈ ಸಂದರ್ಭದಲ್ಲಿ ವಿಕಾಸದ ಹಂತದಲ್ಲಿದ್ದಂತಹ 'ಶಾಸನಗಳಲ್ಲಿಯೂ ಕೂಡಾ ಒಂದು ಮಾಧ್ಯಮವಾಗಿ ಬೆಳವಣಿಗೆಯಾಯಿತು. ಇದರ ಪ್ರಭಾವ ಕರ್ನಾಟಕದ ಸಂಸ್ಕೃತ ಶಾಸನಗಳ ಮೇಲೂ ಬೀರಿದೆ. ಸಂಸ್ಕೃತ ಸಾಹಿತ್ಯದಲ್ಲಿರುವಂತಹ ಕಾವ್ಯ ಮಾಧುರ್ಯ, ಪ್ರಕೃತಿಯ ವರ್ಣನೆ, ರಾಷ್ಟ್ರೀಯ ಭಾವನೆ ಮತ್ತು ಸಾಮಾಜಿಕ ಕಳಕಳಿಯಂತಹ ವಿಷಯಗಳ ಶಾಸನ ಸಾಹಿತ್ಯದಲ್ಲೂ ಕಂಡುಬರುತ್ತದೆ. ಅಂತಹ ವಿಷಯಗಳನ್ನು ಕ್ರೋಢೀಕರಿಸುವುದು. ಈ ಅಧ್ಯಯನದ ಉದ್ದೇಶವಾಗಿದೆ. ಶಾಸನಗಳು ಕೇವಲ ಒಂದು ನಾಡಿನ ಇತಿಹಾಸದ ಮೇಲೆ ಬೆಳಕು ಚೆಲ್ಲುವುದಲ್ಲದೆ ಧರ್ಮ, ಭಾಷೆ, ಲಿಪಿ ಮತ್ತು ಸಾಹಿತ್ಯ ಇತ್ಯಾದಿಗಳ ಇತಿಹಾಸದ ಮೇಲೂ ಬೆಳಕು ಬೀರುತ್ತದೆ. ಇಂತಹ ಚರಿತ್ರೆಯಲ್ಲಿ ಭಾಷೆಯ ಇತಿಹಾಸದ ಮೇಲೆ ಅಧ್ಯಯನ ಕೈಗೊಳ್ಳುವುದು ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ.

೨. ವ್ಯಾಪ್ತಿ

ಈ ಅಧ್ಯಯನದಲ್ಲಿ ಕರ್ನಾಟಕವನ್ನೇ ವ್ಯಾಪ್ತಿಯನ್ನಾಗಿ ಇಟ್ಟುಕೊಳ್ಳಲಾಗಿದೆ. ವಸ್ತುತಃ ಇದು ವಿಶಾಲವಾದ ವ್ಯಾಪ್ತಿಯಾಗಿದೆ. ಆದರು ಶಾಸನಗಳ ದೃಷ್ಟಿಯಿಂದ ಸಾಂಸ್ಕೃತಿಕ ರೂಪದಲ್ಲಿ ಅಧ್ಯಯನ ನಡೆಸದೇ ಕೇವಲ ಶಾಸನಗಳ ಸ್ವರೂಪ ಮತ್ತು ಕನ್ನಡ ಶಾಸನಗಳ ಮೇಲೆ ಪ್ರಭಾವವನ್ನು ತಿಳಿಯಪಡಿಸುವ ಉದ್ದೇಶವಾಗಿದೆ. ಅಧ್ಯಯನದ ವ್ಯಾಪ್ತಿಯಲ್ಲಿ ಕರ್ನಾಟಕದ ಪ್ರಸಿದ್ಧ ರಾಜ ಮನೆತನಗಳ ಸಂಸ್ಕೃತ ಶಾಸನದ ಸ್ವರೂಪವನ್ನು ತಿಳಿಯಪಡಿಸಲಾಗಿದೆ. ಕರ್ನಾಟಕದಲ್ಲಿ ೫೦೦ ಕ್ಕಿಂತಲೂ ಅಧಿಕ ಸಂಸ್ಕೃತ ಶಾಸನಗಳು ದೊರಕುತ್ತವೆ. ಇದರಲ್ಲಿ ವಿಜಯನಗರ ಸಾಮ್ರಾಜ್ಯದ ಮತ್ತು ಮೈಸೂರು ಒಡೆಯರ ಕಾಲದ ಶಾಸನಗಳು ಒಂದೇ ರೀತಿಯಾಗಿದೆ. ಅಂದರೆ ಒಂದು ಸಾಮ್ರಾಜ್ಯದ ಶಾಸನಗಳು ಒಂದೇ ರೀತಿಯಾಗಿದೆ. ರಾಷ್ಟ್ರಕೂಟ, ಚಾಲುಕ್ಯ, ಗಂಗರು, ಹೊಯ್ಸಳರು, ಕದಂಬರು ಇವರ

ಕಾಲದ ಶಾಸನಗಳಲ್ಲಿ ಬೇರೆ ಬೇರೆ ರಾಜರುಗಳ ಕಾಲದ ಶಾಸನಗಳು ಅಲ್ಪಸ್ವಲ್ಪ ಬದಲಾವಣೆಗಳನ್ನು ಹೊಂದಿವೆ. ಇಂತಹ ಬದಲಾವಣೆಗಳನ್ನು ಗುರುತಿಸುವುದು ಮುಖ್ಯ ಉದ್ದೇಶವಾಗಿದೆ. ನನ್ನ ಅಧ್ಯಯನದ ವ್ಯಾಪ್ತಿಯನ್ನು ಕ್ರಿ.ಶ. ೩ ರಿಂದ ೧೮ನೆಯ ಶತಮಾನದವರೆಗೆ ವಿಸ್ತರಿಸಲಾಗಿದೆ.

೩. ಉದ್ದೇಶಗಳು

ಕರ್ನಾಟಕದ ಸಂಸ್ಕೃತ ಶಾಸನಗಳ ಸ್ವರೂಪವನ್ನು ಕೇಂದ್ರವಾಗಿರಿಸಿಕೊಂಡ ಈ ಅಧ್ಯಯನವು ಈ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

೧. ಕರ್ನಾಟಕದ ಸಂಸ್ಕೃತ ಶಾಸನಗಳ ಪ್ರಾರಂಭ ಮತ್ತು ಬೆಳವಣಿಗೆಗಳ ಸ್ತರವನ್ನು ತಿಳಿಯುವುದು.

೨. ಕರ್ನಾಟಕದ ಪ್ರತಿಯೊಂದು ರಾಜಮನೆತನಗಳ ಕಾಲದಲ್ಲಿ ಸಂಸ್ಕೃತ ಶಾಸನಗಳ ಸ್ವರೂಪವನ್ನು ತಿಳಿಯುವುದು.

೩. ಕರ್ನಾಟಕದ ಸಂಸ್ಕೃತ ಶಾಸನಗಳ ವೈಶಿಷ್ಟ್ಯತೆಯನ್ನು ಕಂಡು ಹಿಡಿದು ಸಂಸ್ಕೃತ ಸಾಹಿತ್ಯಕ್ಕೆ ಅದರ ಕೊಡುಗೆಯನ್ನು ಮತ್ತು ಮಹತ್ವವನ್ನು ತಿಳಿಯಪಡಿಸುವುದು.

೪. ಸಂಸ್ಕೃತ ಶಾಸನಗಳು ಕನ್ನಡ ಶಾಸನಗಳ ಮೇಲೆ ಯಾವ ರೀತಿಯ ಪ್ರಭಾವವನ್ನು ಬೀರಿದೆಯೆಂದು ಗುರುತಿಸುವುದು.

೪. ಅಧ್ಯಯನದ ಸ್ವರೂಪ

ಈ ಅಧ್ಯಯನವು ಸಂಸ್ಕೃತ ಶಾಸನಗಳ ಸ್ವರೂಪದ ಮಾಹಿತಿ ಮತ್ತು ಪ್ರಭಾವವನ್ನು ತಿಳಿಯಪಡಿಸುವುದರಿಂದ ಅಧ್ಯಯನದ ಸೌಲಭ್ಯಕ್ಕಾಗಿ ೫ ಅಧ್ಯಾಯಗಳನ್ನಾಗಿ ವಿಭಜಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಈ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಪ್ರಾಮುಖ್ಯತೆಗಳನ್ನು ತಿಳಿಸಲಾಗುವುದು.

ಎರಡನೆಯ ಅಧ್ಯಾಯದಲ್ಲಿ ಭಾರತದಲ್ಲಿ ಶಾಸನಗಳ ಪ್ರಾಚೀನತೆ, ಶಾಸನಗಳ ಉಗಮವನ್ನು, ದಕ್ಷಿಣ ಭಾರತದಲ್ಲಿ ಶಾಸನಗಳ ಪ್ರಾಚೀನತೆ, ಕರ್ನಾಟಕದಲ್ಲಿ ಸಂಸ್ಕೃತ ಶಾಸನಗಳ ಉಗಮವನ್ನು ಹೊಂದಿ, ಈ ಕ್ಷೇತ್ರವು ಹೇಗೆ ವಿಕಾಸವನ್ನು ಹೊಂದಿತೆಂದು ಸವಿಸ್ತಾರವಾಗಿ ತಿಳಿಸಲಾಗುವುದು.

ಮೂರನೆಯ ಅಧ್ಯಾಯದಲ್ಲಿ ಕರ್ನಾಟಕದ ಸಂಸ್ಕೃತ ಶಾಸನಗಳ ಸಾಮಾನ್ಯ ಸ್ವರೂಪ, ಶಾಸನಗಳಲ್ಲಿ ವಿಷಯಾನು ಪೂರ್ವಿ, ಸಂಸ್ಕೃತ ಶಾಸನಗಳ ಮಹತ್ವ ಮತ್ತು ಇಂತಹ ಶಾಸನಗಳಲ್ಲಿ ಉಪಯುಕ್ತವಾದ ಲಿಪಿಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಲಾಗಿದೆ.

ನಾಲ್ಕನೆಯ ಅಧ್ಯಾಯವು ಈ ಅಧ್ಯಯನಕ್ಕೆ ಅತ್ಯಂತ ಪ್ರಮುಖವಾದ ಅಧ್ಯಾಯವಾಗಿದೆ. ಕರ್ನಾಟಕದ ಪ್ರತಿಯೊಂದು ರಾಜಮನೆತನದವರು ಸಂಸ್ಕೃತ ಶಾಸನಗಳನ್ನು ಹೇಗೆ ಪೋಷಿಸಿಕೊಂಡು ಬಂದರು ಎಂದು ಚರ್ಚಿಸಲಾಗುವುದು. ಅದಕ್ಕಾಗಿ ಈ ಅಧ್ಯಾಯದಲ್ಲಿ ನಾಲ್ಕು ಸ್ತರಗಳನ್ನಾಗಿ ಮಾಡಲಾಗಿದೆ. ಇದು ಕಾಲಾನುಕ್ರಮವಾಗಿ ಕರ್ನಾಟಕದಲ್ಲಿ ಸಂಸ್ಕೃತ ಶಾಸನಗಳು ಉಗಮವಾದ ಕಾಲದಿಂದ ಮೈಸೂರು ಅರಸರ ಕಾಲದ ತನಕದ ವ್ಯಾಪ್ತಿಯನ್ನು ಇಟ್ಟುಕೊಳ್ಳಲಾಗಿದೆ.

ಇದಲ್ಲದೆ ಈ ಅಧ್ಯಾಯದಲ್ಲಿ ಸಾಮಂತರು, ಮಹಾಮಂಡಲೇಶ್ವರರು, ಅಧೀನ ರಾಜರುಗಳ ಕಾಲದಲ್ಲಿದಂತಹ ಸಂಸ್ಕೃತ ಶಾಸನಗಳ ಸ್ವರೂಪವನ್ನು ತಿಳಿಸಲಾಗುವುದು. ಇದೇ ಸಂದರ್ಭದಲ್ಲಿ ಕರ್ನಾಟಕದ ಜೈನ ಸಂಸ್ಕೃತ ಶಾಸನಗಳ ಸ್ವರೂಪ ಮತ್ತು ಮಹತ್ವವನ್ನು ತಿಳಿಸಲಾಗುವುದು.

ಐದನೆಯ ಅಧ್ಯಾಯವು ಸಂಸ್ಕೃತ ಶಾಸನಗಳಲ್ಲಿರುವಂತಹ ಕಾವ್ಯ ವಿಶೇಷತೆಯನ್ನು, ಉತ್ತಮ ಕಾವ್ಯಗುಣವನ್ನು ಹೊಂದಿರುವ ಶ್ಲೋಕಗಳನ್ನು ಉಲ್ಲೇಖಿಸಲಾಗುವುದು. ಕನ್ನಡ ಶಾಸನಗಳ ಮೇಲೆ ಸಂಸ್ಕೃತ ಶಾಸನಗಳ ಪ್ರಭಾವವನ್ನು ಈ ಸಂದರ್ಭದಲ್ಲಿ ವಿವೇಚಿಸಲಾಗುವುದು.

ಅಧ್ಯಯನದ ಕೊನೆಯಲ್ಲಿ ಕೆಲವು ಶಾಸನಗಳ ಪಠ್ಯವನ್ನೂ, ಶಾಸನಗಳ ಛಾಯಾಚಿತ್ರವನ್ನೂ ನೀಡಲಾಗಿದೆ.

೫. ಅಧ್ಯಯನದ ಮಹತ್ವ

ಪ್ರಸ್ತುತ ಈ ಅಧ್ಯಯನದಿಂದ ಕರ್ನಾಟಕದ ಸಂಸ್ಕೃತ ಶಾಸನಗಳ ಸಂಪೂರ್ಣ ಸ್ವರೂಪವನ್ನು ತಿಳಿದಂತಾಗುತ್ತದೆ. ಒಂದು ಕಾಲದಲ್ಲಿ ಭಾರತ ದೇಶದಲೆಲ್ಲಾ ರಾಜರ ಆಸ್ಥಾನದಲ್ಲಿದ್ದ ಪಂಡಿತರು ಸಂಸ್ಕೃತ ಭಾಷೆಯನ್ನು ಮಾತನಾಡುತ್ತಿದ್ದರು. ಪ್ರತಿ ವರ್ಗದ ವಿದ್ಯಾವಂತ ಜನರು ಸಂಸ್ಕೃತ ಭಾಷೆಯನ್ನು ತಿಳಿದವರಾಗಿದ್ದರು. ಈ ಕಾಲವನ್ನು ಸಂಸ್ಕೃತ ಭಾಷೆಯ ಸುವರ್ಣ ಯುಗವೆಂಬ ಕರೆಯುತ್ತಾರೆ ಅದೇ ಸಂದರ್ಭದಲ್ಲಿ ಬಹುತೇಕ ಶಾಸನಗಳು ಬ್ರಾಹ್ಮಣರಿಗೆ, ಶ್ರವಣರಿಗೆ ನೀಡಿದ ದಾನದ ವಿಷಯ ತಿಳಿಸುವುದರಿಂದ ಅವುಗಳನ್ನು ಕೂಡಾ ಸಂಸ್ಕೃತ ಭಾಷೆಯಲ್ಲಿ ಬರೆಯುತ್ತಿದ್ದರು. ಹಾಗಾಗಿ ಆ ಕಾಲವನ್ನು ಸಂಸ್ಕೃತ ಶಾಸನಗಳ ಸುವರ್ಣಯುಗವೆಂದು ಕರೆಯಬಹುದು. ಅಂತಹ ಸುವರ್ಣ ಯುಗವನ್ನು ಪರಿಚಯಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಭಾರತದ ಎಲ್ಲಾ ಭಾಷೆಗಳಲ್ಲೂ ಸಂಸ್ಕೃತ ಭಾಷಾ ಪ್ರಭಾವವನ್ನು ಕಾಣಬಹುದು. ಕನ್ನಡ ಭಾಷೆಗೆ ಸಂಸ್ಕೃತ ಭಾಷೆ ಹಲವಾರು ಕಾಣಿಕೆಗಳನ್ನು ನೀಡಿದೆ. ಅಂತಹ ಕಾಣಿಕೆಗಳನ್ನು ಸಂಸ್ಕೃತ ಶಾಸನಗಳಲ್ಲೂ ಕಾಣಬಹುದು.

ಸಂಸ್ಕೃತ ಶಾಸನಗಳು ಹಲವಾರು ರೀತಿಯಿಂದ ಕನ್ನಡ ನಾಡಿಗೆ, ಸಂಸ್ಕೃತ ಸಾಹಿತ್ಯಕ್ಕೆ, ಕನ್ನಡ ಭಾಷೆಗೆ ಮಹತ್ವವಾದ ಕೊಡುಗೆಯನ್ನು ನೀಡಿದೆ. ಕರ್ನಾಟಕದ ಸಂಸ್ಕೃತ ಶಾಸನಗಳು

ಸಂಸ್ಕೃತದ ಪ್ರಸಿದ್ಧ ಕವಿ 'ಕಾಳಿದಾಸ' 'ಭಾರವಿ' ಮೊದಲಾದ ಕವಿಗಳ ಕಾಲವನ್ನು ದೃಢಪಡಿಸುತ್ತವೆ. 'ಕಿರಾತಾರ್ಜುನೀಯ' 'ಮಹಾಕಾವ್ಯ'ದ ಟೀಕಾಕಾರರನ್ನು ಸೂಚಿಸುತ್ತದೆ. ಆ ನಿಟ್ಟಿನಲ್ಲಿ ಐಹೊಳೆ ರವಿಕೀರ್ತಿ ಪ್ರಶಸ್ತಿ ಶಾಸನ, 'ತಾಳಗುಂದ ಶಾಸನ' ಮಹತ್ವವಾಗಿದೆ. ಕುಕ್ಕೆ ಸುಬ್ರಮ್ಹಣ್ಯ ದೇವಸ್ಥಾನಕ್ಕೆ ಸಂಬಂಧ ಪಟ್ಟ ಒಂದು ಶಾಸನವು ತುಳು ಮಂಡಲವು ಯಾರ ಅಧಿಪತ್ಯಕ್ಕೆ ಒಳಗಾಗಿತ್ತು, ಎಷ್ಟು ಗ್ರಾಮಗಳಿದ್ದವು, ಆಗಿನ ಪ್ರಮಾಣಗಳೇನು ಎಂಬಂತಹ ವಿಷಯವನ್ನು ತಿಳಿಸಿದರೆ, ಹಲವಾರು ಶಾಸನಗಳು ಕರ್ನಾಟಕ ರಾಜಮನೆತನಗಳ ಇತಿಹಾಸವನ್ನು ತಿಳಿಸಿದೆ. ಮೈಸೂರು ರಾಜರ ಕಾಲಕ್ಕೆ ಸಂಬಂಧ ಪಟ್ಟಂತಹ ಶಾಸನಗಳಲ್ಲಿ ಅಗ್ರಹಾರ ಸ್ವರೂಪವನ್ನು ನೀಡಿದ್ದಾರೆ. ಕೆಲವು ಶಾಸನಗಳಲ್ಲಿ ದಾನ ಕೊಟ್ಟಂತಹ ಪ್ರದೇಶಗಳ ಸೀಮೆಯನ್ನು ಸಂಸ್ಕೃತ ಭಾಷೆಯಲ್ಲಿಯೇ ನೀಡಿದ್ದಾರೆ. ಹಲವಾರು ಶಾಸನಗಳಲ್ಲಿ ರಾಜರ ವಂಶಾವಳಿಗಳು ಚಿತ್ರಿತವಾಗಿದೆ. ಅಮೂಲ್ಯವಾದಂತಹ ಸುಭಾಷಿತಗಳೂ ಕೂಡಾ ದೊರೆಯುತ್ತವೆ. ಇವೆಲ್ಲವುಗಳ ಅರಿವಾಗಬೇಕಾದರೆ ಸಂಸ್ಕೃತ ಭಾಷೆಯ ತಿಳುವಳಿಕೆ ಇರಲೇಬೇಕು.

೫. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವನ್ನು ಶಾಸನಗಳ ಸಂಪಾದನೆ ಮತ್ತು ಶಾಸನಗಳ ವಿಶ್ಲೇಷಣೆ ಎಂಬಂತಹ ಪ್ರಾಥಮಿಕ ಮತ್ತು ಆನುಷಂಗಿಕ ವಿಧಾನಗಳನ್ನು ಬಳಸಿಕೊಂಡು ಅಧ್ಯಯನವನ್ನು ಮುಂದುವರಿಸಲಾಗಿದೆ. ಕರ್ನಾಟಕದಲ್ಲಿ ೫೦೦ಕ್ಕೂ ಹೆಚ್ಚು ಸಂಸ್ಕೃತ ಶಾಸನಗಳಿರಬಹುದೆಂದು ಅಂದಾಜಿಸಬಹುದು. ಇವುಗಳನ್ನು ಪರಾಮರ್ಶನ ಗ್ರಂಥಗಳಲ್ಲಿ ಸೂಚಿಸಿದಂತೆ ಎಪಿಗ್ರಾಫಿಯಾ ಇಂಡಿಕಾ, ಎಪಿಗ್ರಾಫಿಯಾ ಕರ್ನಾಟಿಕಾ ಮೊದಲಾದ ಶಾಸನ ಸಂಪುಟಗಳಿಂದ ಸಂಸ್ಕೃತ ಶಾಸನಗಳನ್ನು ಗುರುತಿಸಿ, ಅವುಗಳಲ್ಲಿ ಕಾಲದ ಉಲ್ಲೇಖ, ರಾಜಮನೆತನ, ಸ್ಥಳ ಮೊದಲಾದವುಗಳನ್ನು ಒಂದೆಡೆ ಗುರುತಿಸಲಾಗಿದೆ. ನಂತರ ಆನುಷಂಗಿಕ ವಿಧಾನದಲ್ಲಿ ಆ ಶಾಸನಗಳಲ್ಲಿನ ಸಾಮ್ಯತೆ, ವಿಶೇಷತೆಗಳನ್ನು ಗುರುತು ಪಡಿಸಿ ಅಧ್ಯಯನದ ಪ್ರಬಂಧವನ್ನು ಬರೆಯಲಾಗಿದೆ. ಇಂತಹ ಮಾಹಿತಿಗಳನ್ನು ಗ್ರಂಥಾಲಯದಿಂದ ಸಂಗ್ರಹಿಸಲಾಗಿದೆ.

೬. ಈವರೆಗಿನ ಅಧ್ಯಯನಗಳು

ಕರ್ನಾಟಕದಲ್ಲಿ ಸಂಸ್ಕೃತ ಶಾಸನಗಳ ಅಧ್ಯಯನವು ಅಷ್ಟಾಗಿ ಕಂಡು ಬರುವುದಿಲ್ಲ. ಸಂಸ್ಕೃತ ಶಾಸನಗಳ ಸಂಗ್ರಹಗಳು ದೊರಕುತ್ತವೆ. ಇತ್ತೀಚೆಗೆ **'Uttankitha Sanskrit Vidyaranya Epigraphs'** ಎಂಬಂತಹ ಪುಸ್ತಕವನ್ನು ಉತ್ತಂಕಿತ ವಿದ್ಯಾರಣ್ಯ ಟ್ರಸ್ಟ್ ಅವರು ಹೊರ ತಂದಿದ್ದಾರೆ. ಇದು ನಾಲ್ಕು ಸಂಪುಟಗಳಲ್ಲಿ ಇದ್ದು ಇದರಲ್ಲಿ ಪ್ರಾಕೃತ ಮತ್ತು ಸಂಸ್ಕೃತ ಶಾಸನಗಳ ಸಂಗ್ರಹ ಮತ್ತು ಇಂಗ್ಲೀಷ್ ಭಾಷಾಂತರವನ್ನು ನೀಡಿದ್ದಾರೆ. ಬಾ.ರಾ. ಗೋಪಾಲ ಅವರು ಕದಂಬರ

ಶಾಸನಗಳು ಎಂಬ ಪುಸ್ತಕದಲ್ಲಿ ಕದಂಬರ ಕಾಲದ ಶಾಸನಗಳನ್ನು ಸಂಗ್ರಹಿಸಿದ್ದಾರೆ. ಡಾ। ಕೆ. ವಿ. ರಮೇಶ್ ಅವರ **'The Inscriptions of Western Gangas'** ಎಂಬ ಪುಸ್ತಕದಲ್ಲಿ ಗಂಗರ ಕಾಲದ ಬಹಳಷ್ಟು ಸಂಸ್ಕೃತ ಶಾಸನಗಳನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಸಂಸ್ಕೃತ ಶಾಸನಗಳೆ ಅಧಿಕವಾಗಿದೆ.

೭. ಅಧ್ಯಯನದ ಆಕರಗಳು

ಈ ನನ್ನ ಅಧ್ಯಯನಕ್ಕೆ ಎಪಿಗ್ರಾಫಿಯಾ ಕರ್ನಾಟಿಕ, ಎಪಿಗ್ರಾಫಿಯಾ ಇಂಡಿಕಾ, ಇಂಡಿಯನ್ ಆಂಟಿಕ್ವೈರಿ ಮತ್ತು ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳೇ ಪ್ರಧಾನ ಆಕರಗಳು. ಇಲ್ಲಿ ಬರುವಂತಹಾ ಎಲ್ಲಾ ಸಂಸ್ಕೃತ ಶಾಸನಗಳನ್ನು ಸಂಗ್ರಹಿಸಿ ಪರಿಷ್ಕರಿಸಲಾಗಿದೆ. ಅಧ್ಯಯನಕ್ಕೆ ಸಂಬಂಧ ಪಟ್ಟಂತೆ ಇತರ ಪುಸ್ತಕಗಳನ್ನು ಪರಾಮರ್ಶಿಸಲಾಗಿದೆ..

ಅಧ್ಯಾಯ ೨

ಸಂಸ್ಕೃತ ಶಾಸನಗಳ ಉಗಮ
ಮತ್ತು
ವಿಕಾಸದ ವಿವಿಧ ಹಂತಗಳು.

ಅಧ್ಯಾಯ ೨

ಸಂಸ್ಕೃತ ಶಾಸನಗಳ ಉಗಮ ಮತ್ತು ವಿಕಾಸದ ವಿವಿಧ ಹಂತಗಳು.

ಪೀಠಿಕೆ

ಶಾಸನಗಳು ಹೇಗೆ ಭಾರತದ ಇತಿಹಾಸ ರಚನೆಗೆ ಪ್ರಧಾನ ಆಕರಗಳಾಗಿವೆಯೋ ಅದೇ ರೀತಿಯಾಗಿ ಕರ್ನಾಟಕದ ಇತಿಹಾಸವನ್ನು ರೂಪುಗೊಳಿಸುವಲ್ಲಿ ಇತರ ಇತಿಹಾಸದ ಆಕರಗಳಂತೆ ಶಾಸನಗಳೂ ಪ್ರಧಾನವಾಗಿವೆ. ಶಾಸನಗಳು ಕೇವಲ ಒಂದು ಕಾಲದ ಘಟನೆ,ಪರಂಪರೆಯನ್ನು ತಿಳಿಸುವುದಲ್ಲದೆ ಸಾಹಿತ್ಯಕವಾಗಿಯೂ ಮಹತ್ವವನ್ನು ಪಡೆದಿದೆ. ಸಂಪೂರ್ಣ ಭಾರತವನ್ನು ಗಮನಿಸುವಾಗ ಬಹುಶ: ವಾಕ್ಯಗಳ ರಚನೆ,ಬರವಣಿಗೆ,ಲಿಪಿ ಇತ್ಯಾದಿ ಭಾಷಾಶಾಸ್ತ್ರೀಯ ಅಂಶಗಳು ಪ್ರಸಿದ್ಧವಾದ ಸಾಹಿತಿಗಳ, ಕವಿಗಳ ಕಾವ್ಯ ರಚನೆಗಳ ಮೊದಲೇ ರೂಪುಗೊಂಡಿದೆ. ಹರಪ್ಪ ಮೋಹಂಜದಾರೋ ನಾಗರೀಕತೆಯಲ್ಲೂ ಲಿಪಿಯ ಬಳಕೆ ಇದ್ದುದನ್ನು ಇತಿಹಾಸಕಾರರು ಗುರುತಿಸಿದ್ದಾರೆ.ಯಾವಾಗ ಮನುಷ್ಯನು ತನಗೆ ಗೋಚರಕ್ಕೆ ಬಂದಂತಹ ಚಿತ್ರಗಳನ್ನು ಕಲ್ಲುಗಳ ಮೇಲೋ, ಗುಹೆಗಳಲ್ಲೋ ಬರೆಯಲು ಪ್ರಾರಂಭಿಸಿದಾಗಿನಿಂದ ಲಿಪಿಯ ಉಗಮವಾಯಿತು, ಅದೇ ಮುಂದೆ ಬೆಳವಣಿಗೆ ಹೊಂದಿ ಅಕ್ಷರಗಳ ರೂಪವನ್ನು ಪಡೆಯಿತು. ಇಂತಹ ಅಕ್ಷರಗಳು ಮುಂದೆ ಕಾವ್ಯಾತ್ಮಕವಾಗಿ ಪ್ರಸಿದ್ಧ ಕಾವ್ಯ, ಗ್ರಂಥಗಳಾಗಿ ರೂಪುಗೊಂಡಿದೆ. ಇಂತಹ ಕಾವ್ಯಾತ್ಮಕ ಸ್ವರೂಪಗಳು ರಾಜಾಶ್ರಯವನ್ನು ಪಡೆದು, ರಾಜ ತನ್ನ ವಿಷಯಕ್ಕಾಗಿ, ಅಥವಾ ತನ್ನ ವಿಶೇಷವಾದ ದಿಗ್ವಿಜಯವನ್ನೋ, ಧಾರ್ಮಿಕ ಕಾರ್ಯವನ್ನೋ ತಿಳಿಸಲು ಬಳಸಿದಾಗ ಅದು ಇನ್ನೊಂದು ರೂಪವನ್ನು ಪಡೆಯಿತು. ಅವನ್ನೇ '**ಶಾಸನ**'ಗಳೆಂದು ಕರೆಯುತ್ತಾರೆ. ಹಾಗಾಗಿ ಸಾಹಿತ್ಯ ಗ್ರಂಥಗಳಲ್ಲಿ ಕಾವ್ಯಾತ್ಮಕತೆ ಇರುವಂತೆ ಶಾಸನಗಳಲ್ಲೂ ಕಾವ್ಯದ ಅಂಶಗಳು ಇದ್ದೇ ಇದೆ. ಆದರೆ ಶಾಸನಗಳಲ್ಲಿ ಕಾವ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡದೆ, ರಾಜನ ಸಾಧನೆಯನ್ನು ತಿಳಿಯಲು, ತಿಳಿಸಲು ಹೆಚ್ಚು ಒತ್ತು ಕೊಡಲಾಗಿದೆ.

ಲಿಪಿಗಳಂತೆ ಭಾಷೆಯೂ ಕೂಡಾ ಮಾನವನ ಜೀವನದಲ್ಲಿ ಪ್ರಧಾನ ಸ್ಥಾನವನ್ನ ಪಡೆದಿದೆ. ಪ್ರಾಚೀನ ಕಾಲದಲ್ಲಿ ಮನುಷ್ಯನು ಕೇವಲ ಸಂಜ್ಞೆಗಳ ಮೂಲಕ ವ್ಯವಹಾರವನ್ನು ಪ್ರಾರಂಭಿಸಿ ಕ್ರಮೇಣ ಪ್ರಕೃತಿಯಲ್ಲಿ ಕಂಡುಬರುವಂತಹ ಪ್ರಾಣಿ ಪಕ್ಷಿಗಳ ಕೂಗನ್ನು ಅನುಸರಿಸಿ ಆತನೂ ಕೂಡ ಭಾಷೆಯನ್ನು ಆಡಲು ಪ್ರಾರಂಭಿಸಿದನೆಂಬ ವಿಷಯವನ್ನು ನಾವು ಭಾಷಾಶಾಸ್ತ್ರದಲ್ಲಿ ಗಮನಿಸಬಹುದು.ಲಿಪಿಯಂತೆ ಭಾಷೆಯೂ ಕೂಡ ವಿಕಾಸದ ವಿವಿಧ ಹಂತಗಳನ್ನು ಹೊಂದಿದೆ.

ಇವುಗಳೆರಡೂ ಕಾಲಕಾಲಕ್ಕೆ ಬದಲಾವಣೆಗಳನ್ನು, ವಿಕಾಸವನ್ನು ಹೊಂದುತ್ತಾ ಬಂದಿದೆ. ಪ್ರಸ್ತುತ ಶಾಸನಗಳಲ್ಲೂ ಲಿಪಿ ಮತ್ತು ಭಾಷೆ ಇವೆರಡೂ ವಿಕಾಸ ಹೊಂದಿರುವುದನ್ನು ನೋಡಬಹುದು. ಪ್ರಸ್ತುತ ಈ ಅಧ್ಯಾಯದಲ್ಲಿ ಸಂಸ್ಕೃತ ಶಾಸನಗಳ ಪ್ರಾರಂಭ ಮತ್ತು ವಿವಿಧ ಹಂತಗಳನ್ನು ಗಮನಿಸಲಾಗುವುದು.

ಭಾರತದಲ್ಲಿ ಭಾಷೆಯ ಪ್ರಾಚೀನತೆ :

ಇಂಡೋ-ಯುರೋಪಿಯನ್ ಭಾಷಾ ಕುಟುಂಬಕ್ಕೆ ಸೇರಿದಂತಹ ಸಂಸ್ಕೃತ ಭಾಷೆಯೇ ಭಾರತದ ಅತ್ಯಂತ ಪ್ರಾಚೀನ ಭಾಷೆಯೆಂದು ಹೇಳಬಹುದು. ಏಕೆಂದರೆ ವೇದ, ಪುರಾಣ ಗ್ರಂಥಗಳು, ಮಹಾ ಕಾವ್ಯಗಳೇ ಸಂಸ್ಕೃತ ಭಾಷೆಯ ಪ್ರಾಚೀನತೆಯನ್ನು ದೃಢ ಪಡಿಸುತ್ತದೆ. ವೇದಗಳಲ್ಲಿರುವಂತಹ ಸಂಸ್ಕೃತ ಭಾಷೆಯನ್ನು ವೈದಿಕ ಸಂಸ್ಕೃತವೆಂದು, ನಂತರದ ರಚನೆಗಳ (ಬ್ರಾಹ್ಮಣ, ಅರಣ್ಯಕ ಇತ್ಯಾದಿ) ಳಲ್ಲಿ ಕಂಡು ಬರುವಂತಹ ಸಂಸ್ಕೃತ ಭಾಷೆಯನ್ನು ಕಾವ್ಯಾತ್ಮಕ ಸಂಸ್ಕೃತ ಭಾಷೆಯೆಂದು ಕರೆಯಬಹುದು. ಪ್ರಸ್ತುತ ಅಧ್ಯಾಯದಲ್ಲಿ ಭಾಷೆಯ ಬಗ್ಗೆ ಹೆಚ್ಚಿನ ವಿಷಯ ಹೇಳದೆ ಶಾಸನಗಳಲ್ಲಿ ಸಂಸ್ಕೃತ ಭಾಷೆಯನ್ನು ತಿಳಿಯಬೇಕಾಗಿರುವುದರಿಂದ ಸಂಸ್ಕೃತ ಭಾಷೆಯ ಪ್ರಾಚೀನತೆಯನ್ನು ಹೇಳಬೇಕಾಗಿದೆ. ಸಂಸ್ಕೃತ ಭಾಷೆಗಿಂತಲೂ ಪ್ರಾಚೀನದಲ್ಲಿ ಬೇರೆಯ ಭಾಷೆ ಇತ್ತೆಂದು ಹೇಳಲಾಗಿದೆ. ಆದರೆ ಅದನ್ನು ದೃಢ ಪಡಿಸುವಂತಹ ಯಾವುದೇ ದಾಖಲೆಗಳಿಲ್ಲ. ಆದರೆ ಭಾರತದಲ್ಲಿ ಅಶೋಕನ ಆಳ್ವಿಕೆಯ ಕಾಲದಲ್ಲಿ ಪ್ರಾಕೃತ ಭಾಷೆಯು ಬಳಕೆಯಲ್ಲಿತ್ತು. ಅಶೋಕನ ಶಾಸನಗಳು ಪ್ರಾಕೃತ ಭಾಷೆಯಲ್ಲಿಯೇ ಕಂಡು ಬರುತ್ತವೆ. ಇದಕ್ಕೆ ಪೂರಕವೆಂಬಂತೆ ಸಂಸ್ಕೃತ ನಾಟಕಗಳಲ್ಲಿ ಪ್ರಧಾನ ಪಾತ್ರ ವರ್ಗದವರನ್ನು ಹೋರತು ಪಡಿಸಿ ಇತರೆ ಕೆಳವರ್ಗದ ಪಾತ್ರದವರು ಸಂಭಾಷಣೆ ಮಾಡುವಾಗ ಪ್ರಾಕೃತ ಭಾಷೆಯಲ್ಲಿಯೇ ಮಾತನಾಡುತ್ತಿದ್ದುದರ ಉಲ್ಲೇಖವಿದೆ. ನಂತರ ಗುಪ್ತರ ಆಳ್ವಿಕೆಯ ಕಾಲದಲ್ಲಿ ಪ್ರಾಕೃತ ಭಾಷೆ ಹಿಮ್ಮೆಟ್ಟಿಸಿ ಸಂಸ್ಕೃತ ಭಾಷೆಯೇ ಅಧಿಕವಾಗಿ ವ್ಯಾಪಿಸಿತು. ಅನೇಕ ಸಂಸ್ಕೃತ ಕವಿಗಳು ಪ್ರೌಢವಾದ ಕಾವ್ಯಗಳನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದರು. ಕೇವಲ ಕಾವ್ಯ ಗ್ರಂಥಗಳಲ್ಲದೇ ಗಣಿತ, ಜ್ಯೋತಿಷ, ವೈದ್ಯ ಇತ್ಯಾದಿ ಎಲ್ಲಾಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥಗಳು ಬೆಳಕಿಗೆ ಬಂದವು. ಒಂದು ಕಾಲದಲ್ಲಿ ಭಾರತದಲ್ಲಿ ಸಂಸ್ಕೃತ ಭಾಷೆಯು ಆಡು ಮಾತಾಗಿತ್ತು. ಇದೇ ಸಂದರ್ಭದಲ್ಲಿ ಶಾಸನ ಶಾಸ್ತ್ರದಲ್ಲೂ ಸಂಸ್ತ್ರತ ಭಾಷೆಯ ಪ್ರೌಢತ್ವವನ್ನು ಗಮನಿಸಬಹುದಾಗಿದೆ.

ಭಾರತದಲ್ಲಿ ಸಂಸ್ಕೃತ ಶಾಸನಗಳ ಪ್ರಾಚೀನತೆ :

ಭಾರತದಲ್ಲಿ ಪ್ರಾಚೀನವಾಗಿ ದೊರೆಯುವ ಶಾಸನಗಳು ಅಶೋಕನ ಕಾಲದ್ದಾಗಿದೆ. ಇದನ್ನು ಧರ್ಮ ಲಿಪಿಗಳೆಂದು ಕರೆಯುತ್ತಾರೆ. ಆತನ ಶಾಸನಗಳಲ್ಲಿ ಬ್ರಾಹ್ಮೀ ಲಿಪಿಯನ್ನು ಪ್ರಾಕೃತ ಭಾಷೆಯನ್ನು

ಬಳಸಲಾಗಿದೆ. ನಂತರದ ಕಾಲದಲ್ಲಿ ಹಿಂದೆ ತಿಳಿಸಿದಂತೆ ಗುಪ್ತರ ಸಾಮ್ರಾಜ್ಯ ಉದಯವಾದ ನಂತರ ಸಂಸ್ಕೃತ ಭಾಷೆಗೆ ಪ್ರೋತ್ಸಾಹ ದೊರಕಿ ಆ ಭಾಷೆಯಲ್ಲೇ ಶಾಸನಗಳ ಉಗಮವಾಯಿತು. ಪ್ರೌಢ ಕಾವ್ಯಗಳ ಉಗಮವಾದಂತೆ ಪ್ರೌಢ ಶಾಸನಗಳೂ ಕಂಡು ಬರುತ್ತವೆ. (ಉದಾಹರಣೆಗೆ_ ರುದ್ರದಾಮನನ ಜುನಾಗಢ ಶಾಸನ). ಉತ್ತರ ಭಾರತದಲ್ಲಿ ಸಂಸ್ಕೃತ ಶಾಸನಗಳು ಕ್ರಿ.ಪೂ ೧ ನೆಯ ಶತಮಾನದ ಹೊತ್ತಿಗಾಗಲೆ ಭದ್ರವಾಯಿತು. ಗುಪ್ತರು ಸಂಸ್ಕೃತ ಸಾಹಿತ್ಯದ ಮಹಾ ಪೋಷಕರಾಗಿದ್ದರು, ಹಾಗಾಗಿ ಅವರ ಕಾಲದಲ್ಲಿ ಸಂಸ್ಕೃತವು ಸುವರ್ಣ ಯುಗವನ್ನು ಹೊಂದಿತ್ತು.

ದಕ್ಷಿಣ ಭಾರತದಲ್ಲಿ ಶಾಸನಗಳ ಪ್ರಾಚೀನತೆ :

ಚಿತ್ರದುರ್ಗ ಜಿಲ್ಲೆಯ ಚಂದ್ರಗಿರಿಯಲ್ಲಿ ದೊರತ ಅಶೋಕನ ಬ್ರಾಹ್ಮೀ ಲಿಪಿಯ ಶಾಸನವು ಮೌರ್ಯ ಸಾಮ್ರಾಜ್ಯವು ದಕ್ಷಿಣ ಭಾರತದವರೆಗೂ ಹರಡಿತ್ತು ಎಂಬುವುದನ್ನು ದೃಢ ಪಡಿಸುತ್ತದೆ.ಹಾಗಾಗಿ ದಕ್ಷಿಣ ಭಾರತದಲ್ಲೂ ಅಶೋಕನ ಶಿಲಾ (ಹುಟ್ಟು ಬಂಡೆ ಮೇಲೆ ಬರೆದ) ಶಾಸನಗಳೇ ಪ್ರಾಚೀನವೆಂದು ಗುರುತಿಸಬಹುದಾಗಿದೆ. ತಮಿಳುನಾಡಿನಲ್ಲಿ ಕ್ರಿ.ಶ ೭ ನೆಯ ಶತಮಾನದಿಂದ ಪಲ್ಲವ, ಚೋಳ ಮತ್ತು ಪಾಂಡ್ಯ ಅರಸರ ಶಾಸನಗಳು ದೊರೆಯುತ್ತವೆ. ಆಂಧ್ರಪ್ರದೇಶದಲ್ಲಿ ಅಮರಾವತಿಯ ಯಜ್ಞಶಾತಕರ್ಣಿಯ ಕ್ರಿ.ಶ ೨ ನೆಯ ಶತಮಾನದ ಶಾಸನವು ಆಂಧ್ರದಲ್ಲಿ ದೊರೆತ ಮೊದಲ ಸಂಸ್ಕೃತ ಶಾಸನವೆನ್ನಲಾಗಿದೆ. ನಂತರ ಕ್ರಿ.ಶ ೬ ಅಥವಾ ೭ ನೆಯ ಶತಮಾನದಿಂದ ತೆಲುಗು ಭಾಷೆಯಲ್ಲಿ ಶಾಸನಗಳ ಉಗಮವಾಯಿತು. ಕ್ರಿ.ಶ ೧೫ ನೆಯ ಶತಮಾನದಿಂದ ಮಲಯಾಳಂ ಭಾಷೆಯ ಶಾಸನಗಳು ಕಂಡು ಬರುತ್ತವೆ. [೧] ದಕ್ಷಿಣ ಭಾರತದಲ್ಲಿ ಪ್ರಾದೇಶಿಕ ಭಾಷೆಗಳು ಹೆಚ್ಚು ಪ್ರಚಲಿತಕ್ಕೆ ಬಂದುದರಿಂದ ಆಯಾಯ ಭಾಷೆಗಳಲ್ಲೂ ಶಾಸನಗಳ ಉಗಮವಾಯಿತು. ಉತ್ತರ ಭಾರತದಲ್ಲಿ ಸಂಸ್ಕೃತ ಭಾಷೆಯ ಪ್ರಭಾವವೇ ಅಧಿಕವಾಗಿದ್ದರಿಂದ ಮರಾಠೀ, ಓರಿಯಾ, ಹಿಂದೀ, ಗುಜರಾತೀ, ಬಂಗಾಲೀ ಮುಂತಾದ ಭಾಷೆಗಳಲ್ಲಿ ಶಾಸನಗಳು ಬಹಳ ತಡವಾಗಿ ಬೆಳಕಿಗೆ ಬಂದವು.

ಕರ್ನಾಟಕದಲ್ಲಿ ಶಾಸನಗಳ ಪ್ರಾಚೀನತೆ :

ಕರ್ನಾಟಕದಲ್ಲಿ ದೊರೆಯುವ ಅತ್ಯಂತ ಪ್ರಾಚೀನ ಶಾಸನಗಳು ಅಶೋಕನ ಕಾಲದ್ದಾಗಿದೆ. ಚಂದ್ರಗಿರಿಯಲ್ಲಿ ದೊರೆತ ಅಶೋಕನ ಧರ್ಮ ಲಿಪಿಗಳು ಪ್ರಾಕೃತ ಭಾಷೆಯಲ್ಲಿದ್ದು, ಐತಿಹಾಸಿಕವಾಗಿ ಬಹಳ ಮಹತ್ವ ಪಡೆದಿದೆ. ಅಶೋಕನ ಶಾಸನಗಳ ನಂತರ ಕರ್ನಾಟಕದಲ್ಲಿ ಯಾವುದೇ ಶಾಸನಗಳು ದೊರಕುವುದಿಲ್ಲ. ಹಲ್ಮಿಡಿಯಲ್ಲಿ ದೊರಕಿದ ಕಾಕುಸ್ಥವರ್ಮನ ಶಾಸನವು ಕನ್ನಡದ ಪ್ರಾಚೀನ ಶಾಸನವಾಗಿದೆ. ಇದರ ಕಾಲವನ್ನು ಕ್ರಿ.ಶ ೪೫೦ ಎಂದು ಊಹಿಸಲಾಗಿದೆ. ಇದರಲ್ಲಿ ಪ್ರಾರ್ಥನಾ

ಶ್ಲೋಕವು ಸಂಸ್ಕೃತ ಭಾಷೆಯಲ್ಲಿರುವುದು ವಿಶೇಷವಾಗಿದ್ದು, ಆ ಕಾಲದಲ್ಲೇ ಸಂಸ್ಕೃತ ಶಾಸನಗಳು ಪ್ರಭಾವ ಬೀರಿತ್ತೆಂದು ತಿಳಿಯಬಹುದಾಗಿದೆ. ನಂತರ ೬ ನೆಯ ಶತಮಾನದಲ್ಲಿ ಸಂಸ್ಕೃತ ಶಾಸನಗಳ ಸಂಖ್ಯೆ ಹೆಚ್ಚಿದೆ. ಆರನೆಯ ಶತಮಾನದಲ್ಲಿ ಸಂಸ್ಕೃತ ಶಾಸನಗಳಲ್ಲಿ ಕನ್ನಡ ಅಂಶಗಳು ಹೆಚ್ಚಾಗಿದ್ದರೂ, ಈ ಹೆಚ್ಚಳವು ಪ್ರಾಕೃತ ಶಾಸನಗಳನ್ನು ತಡೆದಂತೆ ಸಂಸ್ಕೃತ ಶಾಸನಗಳನ್ನು ತಡೆ ಹಿಡಿಯಲಿಲ್ಲ. ೭ನೆಯ ಶತಮಾನದಿಂದ ಕನ್ನಡ ಭಾಷೆಯ ಬಳಕೆಯು ಕಂಡು ಬರುತ್ತದೆ. [೨] ನಂತರದ ಕಾಲದಲ್ಲಿ ಸಂಸ್ಕೃತ_ ಕನ್ನಡ ಭಾಷೆಗಳೆರಡೂ ಕೈ–ಕೈ ಹಿಡಿದು ಕೊಂಡು ಬರುವುದಾದರೂ, ಕನ್ನಡ ಪ್ರಭಾವ ಅಧಿಕವಾದುದರಂದ ಸಂಖ್ಯೆಯ ದೃಷ್ಟಿಯಿಂದ ಸಂಸ್ಕೃತ ಶಾಸನಗಳಿಗಿಂತ ಕನ್ನಡ ಶಾಸನಗಳೇ ಅಧಿಕವಾಗಿ ಕಂಡು ಬರುತ್ತದೆ.

ಭಾರತದಲ್ಲಿ ಅತ್ಯಧಿಕ ಶಾಸನಗಳು ದೊರಕಿರುವ ರಾಜ್ಯದಲ್ಲಿ ತಮಿಳುನಾಡು ಪ್ರಥಮ ಸ್ಥಾನದಲ್ಲಿದ್ದರೆ, ಕರ್ನಾಟಕವು ಎರಡನೆಯ ಸ್ಥಾನದಲ್ಲಿದೆ. ಇಲ್ಲಿ ಸುಮಾರು ೨೬,೦೦೦ ಕ್ಕಿಂತಲೂ ಅಧಿಕ ಶಾಸನಗಳು ದೊರಕುತ್ತವೆ. ಕರ್ನಾಟಕದಲ್ಲಿ ಕನ್ನಡ, ಸಂಸ್ಕೃತ, ಪ್ರಾಕೃತ, ತಮಿಳು, ತೆಲುಗು, ಮರಾಠಿ, ಪರ್ಷಿಯಾ, ಅರಬ್ಬೀ, ಉರ್ದು ಮತ್ತು ಇಂಗ್ಲಿಷ್ ಭಾಷೆಯ ಶಾಸನಗಳು ದೊರೆತಿವೆ. ಬೇರೆ ಯಾವುದೇ ರಾಜ್ಯಗಳಲ್ಲಿ ಇಷ್ಟು ವಿಭಿನ್ನವಾದ ಶಾಸನಗಳು (ಭಾಷಾ ಶಾಸನಗಳು) ದೊರೆಯುವುದಿಲ್ಲ. [೩] ೪ನೆಯ ಶತಮಾನದಲ್ಲಿ ಗುಪ್ತರು ಪ್ರಬಲರಾದಾಗ, ಮತ್ತು ಅವರು ಸಂಸ್ಕೃತ ಭಾಷೆಗೆ ಹೆಚ್ಚಿನ ಪೋಷಣೆ ನೀಡಿದುದರಿಂದ ಭಾರತೀಯ ಶಾಸನಗಳಲ್ಲಿ ಸಂಸ್ಕೃತ ಭಾಷೆಯು ಪ್ರಮುಖವಾಯಿತು. ಇದರ ಪ್ರಭಾವ ಕರ್ನಾಟಕದ ಮೇಲೂ ಬೀರಿತು. ಉತ್ತರ ಭಾರತೀಯ ರಾಜರು ದಕ್ಷಿಣ ಭಾರತದ ಮೇಲೆ ಧಾಳಿ ಮಾಡಿದಾಗ ಅದರ ಪ್ರಭಾವವೂ ಭಾಷೆಯ ಮೇಲೆ ಬೀರಿತ್ತು.

ಕದಂಬ ಮತ್ತು ಗಂಗ ರಾಜರುಗಳ ಮೂಲ ಏನೆಂಬುವುದು ತಿಳಿದು ಬಂದಿಲ್ಲ. ಗಂಗರ ಶಾಸನಗಳಲ್ಲಿ ಆ ರಾಜ ಮನೆತನದ ಮೂಲ ಪುರುಷ ಯಾರು? ಮೂಲಸ್ಥಾನ ಎಲ್ಲಿ? ಎಂಬುವುದು ತಿಳಿದು ಬಂದಿಲ್ಲ. ಗಂಗರು ಮೂಲತ: ಗಂಗಾ ನದಿಯ ದಡದವರು, ಅಲ್ಲಿಂದ ಇಲ್ಲಿಗೆ ಬಂದು ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿಕೊಂಡರು ಎಂದು ತಿಳಿಯಲಾಗಿದೆ. [೪] ಅದೇ ರೀತಿಯಾಗಿ ಕದಂಬ ಮನೆತನದವರು ಉತ್ತರ ಭಾರತದ ನಂದನರೊಂದಿಗೆ ಬಾಂಧವ್ಯವನ್ನು ಹೊಂದಿದ್ದರೆಂದು ಕ್ರಿಶ ೧೧ನೆಯ ಶಾಸನ ತಿಳಿಸುತ್ತದೆಂದು ಬಾ. ರಾ. ಗೋಪಾಲರು ತಿಳಿಸಿದ್ದಾರೆ. [೫] ೪ನೆಯ ಶತಮಾನದಲ್ಲಿ ಗುಪ್ತ ವಂಶದ ಸಮುದ್ರ ಗುಪ್ತನು ದಕ್ಷಿಣಾ ಪಥವನ್ನು ವಶಪಡಿಸಬೇಕೆಂದು ದಕ್ಷಿಣದ ಕಂಚಿಯವರೆಗೆ ಹೋಗಿ ಕರ್ನಾಟಕದೊಳಗಿನ ೧೧ ರಾಜ್ಯಗಳಲ್ಲಿ ಹಾದು ಉತ್ತರಕ್ಕೆ ತೆರಳಿದನು ಇದರ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ಸಂಸ್ಕೃತ ಬೆಳೆಯಿತು. [೬] ಕದಂಬರು ಮತ್ತು

ಗಂಗರು ಉತ್ತರ ಭಾರತದ ಮೂಲದವರು ಎಂದು ಒಪ್ಪಿದರೆ, ಅವರು ಅಲ್ಲಿಂದ ಇಲ್ಲಿಗೆ ವಲಸೆ ಬಂದಾಗ ಸಂಸ್ಕೃತ ಭಾಷೆಯನ್ನು ಹಾಗು ಅಲ್ಲಿ ಪ್ರಚಲಿತದಲ್ಲಿದ್ದಂತಹ ಶಾಸನ ಲೇಖನ ಪದ್ಧತಿಯನ್ನು ಕರ್ನಾಟಕಕ್ಕೂ ತಂದರೆಂದು ಊಹಿಸಬೇಕಾಗಿದೆ.

ಅಶೋಕನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಪ್ರಾಕೃತ ಭಾಷೆಯು ರಾಜ ಮನ್ನಣೆಯನ್ನು ಪಡೆಯಿತು. ಆದರೆ ವಿಶೇಷವೆಂದರೆ ನಂತರದ ರಾಜ ವಂಶದವರ ತಾಮ್ರ ಪಟಗಳು ಸಂಸ್ಕೃತದಲ್ಲೂ ಶಿಲಾ ಶಾಸನಗಳು ಕನ್ನಡದಲ್ಲೂ ಕಂಡು ಬರುತ್ತದೆ. ನಂತರ ಶಾಸನಗಳು ಮೂರು ಸ್ತರವನ್ನು ಪಡೆಯಿತು ಮೊದಲನೆಯದು ಸಂಸ್ಕೃತ ಶಾಸನ, ಎರಡನೆಯದು ಸಂಸ್ಕೃತ– ಕನ್ನಡ ಮಿಶ್ರಿತ ಶಾಸನಗಳು, ಮತ್ತು ಮೂರನೆಯದು ಕನ್ನಡ ಶಾಸನಗಳು, ಎರಡನೆಯ ಸ್ಥರವಾದ ಸಂಸ್ಕೃತ– ಕನ್ನಡ ಮಿಶ್ರಿತ ಸ್ಥರವನ್ನು ಮಣಿ ಪ್ರವಾಳ ಶೈಲಿಯೆಂದು ಕರೆಯಬಹುದು. ಅಂದರೆ ಒಂದೇ ಸರದಲ್ಲಿ ಮುತ್ತು ಮತ್ತು ಹವಳವನ್ನು ಪೋಣಿಸಿದರೆ ಹೇಗೆ ಕಂಡು ಬರುತ್ತದೋ ಆ ರೀತಿಯಾಗಿ ಕಂಡು ಬರುತ್ತವೆ. ತಾಮ್ರ ಪಟಗಳು ರಾಜ ಶಾಸನಗಳಾಗಿದ್ದರಿಂದ ರಾಜ ಭಾಷೆಯಾದ ಸಂಸ್ಕೃತದಲ್ಲಿದ್ದರೆ, ಶಿಲಾಶಾಸನಗಳು ಜನ ಸಾಮಾನ್ಯರಿಗೆ ಸಂಬಂಧಿಸಿದುದರಿಂದ ಕನ್ನಡದಲ್ಲಿರುವುದು ಸ್ವಾಭಾವಿಕ ವಿಚಾರವಾಗಿದೆ [೭]

ಸಂಸ್ಕೃತ ಶಾಸನಗಳ ವಿವಿಧ ಹಂತಗಳು :

ಬ್ರಾಹ್ಮೀ ಲಿಪಿಯಲ್ಲಿರುವಂತಹ ಪ್ರಾಕೃತ ಶಾಸನಗಳು ಐತಿಹಾಸಿಕವಾಗಿ ಮಹತ್ವವನ್ನು ಹೊಂದಿದ್ದರೂ ಅವುಗಳನ್ನು ಅರ್ಥಮಾಡಿಕೊಳ್ಳಲು ಸಂಸ್ಕೃತ ಭಾಷೆ ಅತ್ಯವಶ್ಯವಾಗಿದೆ. ಡಾ. ಚಿದಾನಂದ ಮೂರ್ತಿಯವರು ಕರ್ನಾಟಕದ ಶಾಸನಗಳ ವಿಕಾಸದ ಹಂತಗಳನ್ನು ನಾಲ್ಕು ಘಟ್ಟಗಳಲ್ಲಿ ಹೇಳಿದ್ದಾರೆ. ಮೊದಲನೆಯದು ಪ್ರಾಕೃತ ಶಾಸನಗಳು (ಕ್ರಿ.ಶ ೪೫೦ ಗಿಂತ ಮೊದಲು), ಸಂಸ್ಕೃತ ಶಾಸನಗಳ ಹಂತ ಎರಡನೆಯದು, ಕನ್ನಡ – ಸಂಸ್ಕೃತ ಶಾಸನಗಳ ಘಟ್ಟ – ಇದು ಮೂರನೆಯದು. (ಕ್ರಿ. ಶ ೯ನೆಯ ಶತಮಾನದಿಂದ ೧೧ನೆಯ ಶತಮಾನದವರೆಗೆ), ಕನ್ನಡ ಶಾಸನಗಳು ಇದು ನಾಲ್ಕನೆಯ ಘಟ್ಟ (ಕ್ರಿ. ಶ ೧೧ನೆಯ ಶತಮಾನದ ನಂತರ).[೮] ಈ ಹಂತಗಳ ವಿಸ್ತಾರವಾದ ಅಧ್ಯಯನವನ್ನು ಮುಂದಿನ ಅಧ್ಯಾಯದಲ್ಲಿ ಮಾಡಲಾಗುವುದು.

ಉತ್ತರ ಭಾರತದಲ್ಲಿ ಗುಪ್ತರ ಸಾಮ್ರಾಜ್ಯದಲ್ಲಿ ಚಿಗುರೊಡೆದ ಸಂಸ್ಕೃತ ಶಾಸನಗಳ ಪರಂಪರೆಯು ಮುಂದುವರೆದು ಹೇಗೆ ವಿಕಾಸ ಹೊಂದಿತೋ, ಅದೇ ರೀತಿ ಕನಾಟಕದಲ್ಲೂ ಸಂಸ್ಕೃತ ಶಾಸನಗಳು ರಾಜಾಶ್ರಯದಲ್ಲಿ ಬಹಳ ಉನ್ನತ ಸ್ಥಾನವನ್ನು ಪಡೆದು, ದಕ್ಷಿಣ ಭಾರತದಲ್ಲಿ ಸಂಸ್ಕೃತಕ್ಕೆ ಒಂದು ಸ್ಥಾನವನ್ನು ನೀಡಿತು. ಕರ್ನಾಟಕದ ಪ್ರಸಿದ್ಧ ಎಂಟು ರಾಜಮನೆತನದವರು ಸಾಕಷ್ಟು ಸಂಸ್ಕೃತ

ಭಾಷೆಗೆ ಪ್ರೋತ್ಸಾಹವನ್ನು ನೀಡಿದ್ದರು.ಇದರಲ್ಲಿ ಮಾಂಡಳೀಕರು, ಸಾಮಂತರೂ ಕೂಡ ಸೇರಿದ್ದಾರೆ. ಏಕೆಂದರೆ ಕರ್ನಾಟಕದಲ್ಲಿ ಸಾಮಂತ ರಾಜರಿಗೆ ಸಂಬಂಧಿಸಿದ ಹಲವಾರು ಸಂಸ್ಕೃತ ಶಾಸನಗಳು ದೊರಕಿವೆ. ಕರ್ನಾಟಕದಲ್ಲಿ ಸರಿ ಸುಮಾರು ೫೦೦ ಸಂಸ್ಕೃತ ಶಾಸನಗಳು ದೊರಕುತ್ತವೆ. ಅದರಲ್ಲಿ ಹೆಚ್ಚಿನವು ದಾನ ಶಾಸನಗಳಾಗಿದ್ದರೂ, ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ವಿಶೇಷ ಮಹತ್ವವನ್ನು ಪಡೆದಿದೆ. ಇದರಲ್ಲಿ ಹೆಚ್ಚಿನ ಶಾಸನಗಳು ವಿಜಯ ನಗರ ಮತ್ತು ಗಂಗರ ಆಳ್ವಿಕೆಗೆ ಸಂಬಂದಿಸಿದುದಾಗಿದೆ. ಅಂದರೆ ಇದರಲ್ಲಿ ಮೊದಲನೆಯದು ಮೂರನೆಯ ಘಟ್ಟಕ್ಕೆ ಸಂಬಂದಿಸಿದರೆ, ಎರಡನೆಯದು ಎರಡನೆಯ ಘಟ್ಟಕ್ಕೆ ಸಂಬಂದಿಸಿದುದಾಗಿದೆ. ಸಾಮಂತರು, ಮಾಂಡಳೀಕರಿಗೆ ಸಂಬಂದಿಸಿದ ೩೫ಕ್ಕೂ ಹೆಚ್ಚು ಸಂಸ್ಕೃತ ಶಾಸನಗಳೂ, ೫೦ಕ್ಕೂ ಅಧಿಕ ಜೈನ ಶಾಸನ (ಸಂಸ್ಕೃತ)ಗಳು ದೊರಕುತ್ತವೆ.

ವಿವಿಧ ವಂಶಗಳಿಗೆ ಸಂಬಂಧಿಸಿದ ಶಾಸನಗಳ ಪಟ್ಟಿಯನ್ನು ಹೀಗೆ ನೀಡಬಹುದು

೧) ಅಶೋಕನ ಪ್ರಾಕೃತ ಶಾಸನಗಳು	–	೬
೨) ಚುಟು ವಂಶದ ಪ್ರಾಕೃತ ಶಾಸನಗಳು	–	೧
೩) ಕದಂಬರ ಸಂಸ್ಕೃತ ಶಾಸನಗಳು	–	೩೮
೪) ಗಂಗರ ಸಂಸ್ಕೃತ ಶಾಸನಗಳು	–	೭೫
೫) ಬಾದಾಮಿ ಚಾಲುಕ್ಯರ ಶಾಸನಗಳು	–	೧೦
೬) ರಾಷ್ಟ್ರಕೂಟರ ಸಂಸ್ಕೃತ ಶಾಸನಗಳು	–	೧೭
೭) ಕಲ್ಯಾಣ ಚಾಲುಕ್ಯರ ಸಂಸ್ಕೃತ ಶಾಸನಗಳು	–	೨೧
೮) ಹೊಯ್ಸಳರ ಸಂಸ್ಕೃತ ಶಾಸನಗಳು	–	೨೮
೯) ವಿಜಯನಗರ ಅರಸರ ಸಂಸ್ಕೃತ ಶಾಸನಗಳು	–	೧೨೨
೧೦) ಮೈಸೂರು ಅರಸರ ಸಂಸ್ಕೃತ ಶಾಸನಗಳು	–	೨೭
೧೧) ದೇವಗಿರಿಯ ಯಾದವ ಅರಸರ ಸಂಸ್ಕೃತ ಶಾಸನಗಳು	–	೪
೧೨) ಜೈನರ ಸಂಸ್ಕೃತ ಶಾಸನಗಳು	–	೫೦
೧೩) ಇತರ ಸಾಮಂತರ ಸಂಸ್ಕೃತ ಶಾಸನಗಳು	–	೩೬

ಜೈನ ಸಂಸ್ಕೃತ ಶಾಸನಗಳು ಶ್ರವಣಬೆಳಗೊಳ ಕ್ಷೇತ್ರದಲ್ಲಿಯೇ ಅಧಿಕ ಸಂಖ್ಯೆಯಲ್ಲಿ ದೊರೆಯುತ್ತದೆ. ಇವುಗಳಲ್ಲಿ ಹೆಚ್ಚಿನವು ಒಂದಕ್ಕಿಂತ ಒಂದು ಭಿನ್ನವಾಗಿದ್ದು ಜೈನ ಮುನಿಗಳ, ಅವರ ಮಹಿಮೆಗಳ, ಅವರ ನಿರ್ವಾಣಗೊಳ್ಳುವಿಕೆಯ ವಿಷಯವನ್ನೇ ಪ್ರತಿಪಾದಿಸುತ್ತದೆ. ಜೈನ ಶಾಸನಗಳು ಪ್ರೌಢವಾದ ಸಂಸ್ಕೃತವನ್ನು ಅಳವಡಿಸಿಕೊಂಡಿವೆ. ಸಂಸ್ಕೃತ ಶಾಸನಗಳನ್ನು ಪ್ರಸಿದ್ಧ ಗ್ರಂಥಗಳಲ್ಲಿ ಪ್ರಕಟಗೊಂಡಂತಹ ಸಂಖ್ಯಾಧಾರಿತವಾಗಿ ಗಣನೆ ಮಾಡುವಾಗ ಇಷ್ಟು ಸಂಖ್ಯೆಗಳು ದೊರಕಿವೆ. ಇನ್ನೂ ಕೂಲಂಕುಷವಾಗಿ ಅನ್ವೇಷಣೆ ಮಾಡಿದರೆ ಇನ್ನೂ ಅಧಿಕ ಶಾಸನಗಳು ದೊರಕಬಹುದು.

ಉಪಸಂಹಾರ

ಕದಂಬರ ಕಾಲದಿಂದ ಕರ್ನಾಟಕದಲ್ಲಿ ಪ್ರಾರಂಭವಾದಂತಹ ಸಂಸ್ಕೃತ ಶಾಸನಗಳ ಯುಗವು ಗದ್ಯ, ಪದ್ಯ ರೂಪಾತ್ಮಕವಾಗಿ ಅನೇಕ ಐತಿಹಾಸಿಕ, ಧಾರ್ಮಿಕ ಮಹತ್ವವನ್ನು ಪಡೆದುಕೊಂಡು ಬೆಳೆದಿದೆ. ಶಾಸನಗಳು ಸಾಹಿತ್ಯಕ್ಕಾಗಿಯೇ ನಿರ್ಮಾಣವಾದುದಲ್ಲ ಆದರೆ ಸಾಹಿತ್ಯದ ಅಂಶಗಳನ್ನು ಅಳವಡಿಸಿಕೊಂಡಿದ್ದರಿಂದ ಮಹತ್ವವನ್ನು ಪಡೆಯಿತು. ಗಂಗ ಅರಸರ ಕಾಲದಲ್ಲಿ ಗದ್ಯಾತ್ಮಕವಾಗಿಯೂ, ಬಾದಾಮಿ ಚಾಲುಕ್ಯ ಮತ್ತು ಕದಂಬರ ಕಾಲದಲ್ಲಿ ಐತಿಹಾಸಿಕವಾಗಿಯೂ, ವಿಜಯನಗರ ಅರಸರ ಕಾಲದಲ್ಲಿ ಸರಳಾತ್ಮಕತೆಯಿಂದಲೂ ವಿಕಾಸ ಹೊಂದಿತು. ಸಂಸ್ಕೃತ ಶಾಸನಗಳು ಪ್ರಸಿದ್ಧ ರಾಜಮನೆತನಗಳಲ್ಲಿ ಪೋಷಣೆಯನ್ನು ಪಡೆದುದಲ್ಲದೆ ಅನೇಕ ಸಾಮಂತ ಅರಸರ ಕಾಲದಲ್ಲಿಯೂ ವಿಕಾಸವನ್ನು ಪಡೆದಿತ್ತು. ವಿಜಯನಗರ ಅರಸರ ಕಾಲದಲ್ಲಿ ಸಂಸ್ಕೃತ ಶಾಸನಗಳು ಸುವರ್ಣ ಯುಗವನ್ನು ಹೊಂದಿತ್ತು. ಈ ಅವಧಿಯಲ್ಲಿ ಅತಿ ಹೆಚ್ಚು ಸಂಸ್ಕೃತ ಶಾಸನಗಳು ಬೆಳಕಿಗೆ ಬಂದವು. ಕರ್ನಾಟಕದ ಬೇರೆ ಬೇರೆ ರಾಜಮನೆತನಗಳಲ್ಲಿ ಸಂಸ್ಕೃತ ಭಾಷೆಯು ಹೇಗೆ ವಿಕಾಸ ಹೊಂದಿತೆಂದು ಮುಂದಿನ ಅಧ್ಯಾಯದಲ್ಲಿ ತಿಳಿಸಲಾಗುವುದು.

ಅಡಿ ಟಿಪ್ಪಣಿಗಳು

೧) ಶಾಸನ ಶಾಸ್ತ್ರ ಪರಿಚಯ	: ಶಾಸನ ನಿರ್ದೇಶನಾಲಯ, ಮೈಸೂರು (ಪು.ಸಂ. ೭, ೮)
೨) ಕನ್ನಡ ಶಾಸನಗಳ ಅಧ್ಯಯನ	: ಎಸ್. ಎಸ್. ಮೂಲಿಮನಿ (ಪು.ಸಂ. ೧೧೪)
೩) ಕರ್ನಾಟಕ ಶಾಸನಗಳ ಪರಿಚಯ	: ಮಾರ್ಗದರ್ಶಿ ಪಾಠಗಳು (ಪು.ಸಂ. ೧)
೪) ಕರ್ನಾಟಕದ ಇತಿಹಾಸದ ದರ್ಶನ	: ಡಾ. ಕೃಷ್ಣರಾವ್ ಎಂ. ವಿ. (ಪು.ಸಂ. ೧೦)
೫) ಬನವಾಸಿ ಕದಂಬರು	: ಬಾ. ರಾ. ಗೋಪಾಲ್ (ಪು.ಸಂ. ೧೨)
೬) ಕರ್ನಾಟಕದ ಗತ ವೈಭವ	: ಆಲೂರು ವೆಂಕಟ ರಾಯರು (ಪು.ಸಂ. ೧೦)
೭) ಶಾಸನ ಶಾಸ್ತ್ರ ಪ್ರವೇಶ	: ಸಿ.ಪಿ.ಕೆ (ಪು.ಸಂ. ೯೧)
೮) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ	: ಚಿದಾನಂದ ಮೂರ್ತಿ (ಪು.ಸಂ. ೩೫)

ಅಧ್ಯಾಯ–೩

ಕರ್ನಾಟಕದ ಸಂಸ್ಕೃತ ಶಾಸನಗಳ ಸಾಮಾನ್ಯ ಸ್ವರೂಪ, ಪ್ರಾಮುಖ್ಯತೆ ಮತ್ತು ಲಿಪಿ.

ಅಧ್ಯಾಯ-೩

ಕರ್ನಾಟಕದ ಸಂಸ್ಕೃತ ಶಾಸನಗಳ ಸಾಮಾನ್ಯ ಸ್ವರೂಪ, ಪ್ರಾಮುಖ್ಯತೆ ಮತ್ತು ಲಿಪಿ.

ಪೀಠಿಕೆ.

ಹಿಂದಿನ ಅಧ್ಯಾಯದಲ್ಲಿ ಸಂಸ್ಕೃತ ಶಾಸನಗಳ ಉಗಮ ಮತ್ತು ವಿಕಾಸವನ್ನು ಗಮನಿಸಿದೆವು. ಈ ಅಧ್ಯಾಯದಲ್ಲಿ ಇದುವರೆಗೆ ದೊರೆತಂತಹ ಸಂಸ್ಕೃತ ಶಾಸನಗಳ ಸ್ವರೂಪವನ್ನು ಗಮನಿಸೋಣ. ಕರ್ನಾಟಕದ ಶಾಸನಗಳು ಹಲವಾರು ಸ್ವರೂಪದಲ್ಲಿ ಕಂಡು ಬರುತ್ತವೆ. ಆದರೆ ಸಂಸ್ಕೃತ ಶಾಸನಗಳು ಮಾತ್ರ ಹಲವಾರು ಸ್ವರೂಪಗಳಲ್ಲಿ ಕಂಡು ಬರದೆ, ಕೆಲವು ಸ್ವರೂಪಗಳು ಮಾತ್ರ ಕಂಡು ಬರುತ್ತವೆ. ಅಂದರೆ ಸಂಸ್ಕೃತ ಶಾಸನಗಳು ಸೀಮಿತ ಸ್ವರೂಪದಲ್ಲಿ ಮಾತ್ರ ಕಂಡು ಬರುತ್ತವೆ. ಅವುಗಳ ಚರ್ಚೆಯನ್ನು ಇಲ್ಲಿ ವಿಸ್ತಾರವಾಗಿ ಮಾಡಲಾಗುವುದು. ಕರ್ನಾಟಕದಲ್ಲಿ ಕಂಡು ಬರುವ ಪ್ರಾಚೀನ ಶಾಸನಗಳಲ್ಲಿ ಅಶೋಕನ ಕಲ್ಲು ಬಂಡೆ ಶಾಸನಗಳೇ ಅತ್ಯಂತ ಪ್ರಾಚೀನವಾದುದು. ಮಸ್ಕಿ, ಪಾಲ್ಕಿ ಗುಂಡು, ಬ್ರಹ್ಮಗಿರಿ, ಗವಿ ಮಠ, ಜಟಿಂಗ ರಾಮೇಶ್ವರ ಮೊದಲಾದ ಸ್ಥಳಗಳಲ್ಲಿ ದೊರಕಿದ ಶಾನಗಳನ್ನು ಹುಟ್ಟು ಬಂಡೆಯಲ್ಲಿಯೇ ಬರೆಯಲಾಗಿದೆ. ಇವುಗಳ ಭಾಷೆ ಪ್ರಾಕೃತವಾಗಿದೆ. ಹಾಗಾಗಿ ಭಾರತೀಯ ಶಾಸನ ಪ್ರಪಂಚಕ್ಕೆ ಅಶೋಕನ ಶಾಸನಗಳು ಉಗಮ ಸ್ಥಾನವಾಗಿರುವಂತೆ ಕರ್ನಾಟಕ ಶಾಸನ ವಾಹಿನಿಗೂ ಅವು ಮೂಲ ಸ್ರೋತ ವಾಗಿದೆ.[೧] ಆದರೆ ನಂತರದ ಕಾಲದಲ್ಲಿ ಹುಟ್ಟು ಬಂಡೆಗಳ ಮೇಲೆ ಹೆಚ್ಚಿನ ಶಾಸನಗಳು ಕಂಡು ಬರುವುದಿಲ್ಲ. ಕನ್ನಡದ ಮೊದಲ ಶಾಸನವೂ ವ್ಯವಸ್ಥಿತವಾಗಿ ಕೆತ್ತಿದ ಕಲ್ಲಿನ ಮೇಲೆ ಕೆತ್ತಲಾಗಿದೆ. ಅನಂತರ ಕನ್ನಡ ಶಾಸನಗಳಂತೆ ಸಂಸ್ಕೃತ ಶಾಸನಗಳಿಗೂ ನಿರ್ದಿಷ್ಟ ಸ್ವರೂಪ ಬಂದು ವಿಕಾಸ ಹೊಂದಿದವು.

'ಸಂಸ್ಕೃತ ಶಾಸನಗಳ ಮಾಧ್ಯಮ'

ಸಾಮಾನ್ಯವಾಗಿ ರಾಜಮಹಾರಾಜರು ತಾವು ಮಾಡಿದಂತಹ ಧಾರ್ಮಿಕ, ಸಾಮಾಜಿಕ ಕಾರ್ಯಗಳು ಸ್ಥಿರವಾಗಿ ಉಳಿಯಬೇಕು ಎಂಬ ದೃಷ್ಟಿಯಿಂದ ಶಾಸನಗಳಲ್ಲಿ ನಮೂದಿಸಿ ಇಡುತ್ತಿದ್ದರು. ಹಾಗಾಗಿ ಶಾಶ್ವತವಾಗಿ ಉಳಿಯುವಂತಹ ವಸ್ತುಗಳ ಮೇಲೆ ಶಾಸನಗಳನ್ನು ಬರೆಯುತ್ತಿದ್ದರು. ಅದಕ್ಕಾಗಿ ಕಲ್ಲು, ತಾಮ್ರ, ಕಬ್ಬಿಣ ಮೊದಲಾದ ವಸ್ತುಗಳ ಮೇಲೆ ಶಾಸನಗಳನ್ನು ಬರೆಯುತ್ತಿದ್ದರು. ಸಂಸ್ಕೃತ ಶಾಸನಗಳು ಹೆಚ್ಚಿನವು ತಾಮ್ರ ಪಟದಲ್ಲಿಯೇ ಕಂಡು ಬರುತ್ತವೆ.

೧. ಲೋಹಶಾಸನಗಳು

ತಾಮ್ರ ಶಾಸನಗಳು : ಕರ್ನಾಟಕದ ಶಾಸನಗಳಿಗೆ ಉಪಯುಕ್ತವಾದ ಲೋಹ ಪ್ರಧಾನವಾಗಿ ತಾಮ್ರವಾಗಿದೆ. ಈ ಶಾಸನಗಳನ್ನು ದಾನದ ಸಂದರ್ಭದಲ್ಲಿ ಕೊಡಲಾಗುತ್ತಿತ್ತು. ನಿರ್ದಿಷ್ಟ ಭೂದಾನವನ್ನು ಬ್ರಾಹ್ಮಣರಿಗೆ ನೀಡಿ, ಅದರ ಉಲ್ಲೇಖವನ್ನು ಶಾಸನಗಳಲ್ಲಿ ಬರೆದು ಶಾಸನ ಸಹಿತವಾಗಿ ದಾನವನ್ನು ನೀಡುತ್ತಿದ್ದರು. ತಾಮ್ರ ಶಾಸನಗಳು ಆಯತಾಕಾರವಾಗಿದ್ದು ಕೆಲವೊಮ್ಮೆ ಅಡ್ಡಲಾಗಿ ಮತ್ತು ಕೆಲವು ರಾಜರುಗಳ ಕಾಲದಲ್ಲಿ ಉದ್ದವಾಗಿ ಬರೆಯಲಾಗಿದೆ. ತಾಮ್ರ ಶಾಸನಗಳನ್ನು ಕದಂಬ ಮತ್ತು ಗಂಗ ಅರಸರ ಕಾಲದಲ್ಲಿ ಹೆಚ್ಚಾಗಿ ಉದ್ದವಾಗಿಯೂ, ವಿಜಯನಗರ ಕಾಲದಲ್ಲಿ ಅಡ್ಡಲಾಗಿ ಬರೆಯಲಾಗಿದೆ. ಈ ಶಾಸನಗಳನ್ನು ಉತ್ತಮ ಗುಣಮಟ್ಟದ ತಾಮ್ರದಲ್ಲಿ ತಯಾರಿಸಲಾಗುತ್ತಿತ್ತು. ತಿರುಮಕೂಡಲು ನರಸೀಪುರದಲ್ಲಿ ದೊರೆತಂತಹ ಮೈಸೂರಿನ ಒಡೆಯ ಅರಸರಲ್ಲಿ ಪ್ರಸಿದ್ಧರಾದ ಕೃಷ್ಣರಾಯರಿಗೆ ಸಂಬಂಧಿಸಿದ ಶಾಸನವು ಅತ್ಯಂತ ದೊಡ್ಡ ತಾಮ್ರ ಶಾಸನವಾಗಿದೆ. ಈ ಶಾಸನವು ಹದಿನಾರು ಹಲಗೆಗಳನ್ನು ಹೊಂದಿದ್ದು, ೧೩೮೯ ಸಾಲುಗಳಲ್ಲಿ ಕೃಷ್ಣರಾಯರು ಭೂದಾನವನ್ನು ನೀಡಿದರ ಬಗ್ಗೆ ಉಲ್ಲೇಖ ಬರುತ್ತದೆ.

ನಾಲ್ಕನೆಯ ಹಲಗೆಯಿಂದ ಹದಿನೈದನೆಯ ಹಲಗೆಯವರೆಗೆ ಗ್ರಾಮಗಳ ಸೀಮೆಯನ್ನು, ಭೂಪ್ರಮಾಣವನ್ನು ವಿಸ್ತಾರವಾಗಿ ನೀಡಲಾಗಿದೆ. ದಕ್ಷಿಣಭಾರತದಲ್ಲಿ ಇದು ಅತ್ಯಂತ ದೊಡ್ಡ ತಾಮ್ರ ಶಾಸನವೆಂದು ಹೇಳಬಹುದು. ಇದು ಸಂಸ್ಕೃತ ಮತ್ತು ಕನ್ನಡ ಭಾಷೆ ಸೇರಿಕೊಂಡು ನಾಗರಿ ಲಿಪಿಯಲ್ಲಿದೆ. ಇನ್ನೊಂದು ದೊಡ್ಡದಾದ ತಾಮ್ರ ಶಾಸನವು ಮೈಸೂರಿನಲ್ಲಿ ಕಂಡು ಬರುತ್ತದೆ. ಇದು ಮೈಸೂರು ಅರಸರಲ್ಲಿ ಪ್ರಸಿದ್ಧರಾದ ಚಿಕ್ಕದೇವರಾಯ ಒಡೆಯರಿಗೆ ಸಂಬಂಧಿಸಿದ ಶಾಸನವಾಗಿದ್ದು ಹತ್ತು ಹಲಗೆಯನ್ನು ಹೊಂದಿದೆ.[೨] ಶೃಂಗೇರಿಯಲ್ಲಿ ಕಂಡುಬರುವ ಶಾಸನಗಳನ್ನು ಅದರಲ್ಲೂ ತಾಮ್ರ ಶಾಸನಗಳನ್ನು ಕೈಫಿಯತ್ತುಗಳ ರೂಪದಲ್ಲಿ ನಖಲು ಮಾಡಿ ಬರೆಯಲಾಗಿದೆ. ಕುಕ್ಕೆ ಸುಬ್ರಮ್ಹಣ್ಯದಲ್ಲಿರುವ ಮಾಧವರಾಜನ ಶಾಸನಗಳು ದೊಡ್ಡದಾಗಿರದಿದ್ದರೂ ವಿಷಯ ದೃಷ್ಟಿಯಿಂದ ಮಹತ್ವವನ್ನು ಪಡೆದಿದೆ.[೩]

ಕಬ್ಬಿಣದ ಮೇಲೆ ಬರೆದ ಶಾಸನ : ಬಹಳ ಅಪರೂಪವೆಂಬಂತೆ ಕಬ್ಬಿಣದ ಹಲಗೆಗಳ ಮೇಲೆ ಒಂದು ಶಾಸನವನ್ನು ಬರೆಯಲಾಗಿದೆ. ಬೀದರಿನಲ್ಲಿ ದೊರೆತ ಈ ಶಾಸನವು ಹೈದರಾಬಾದಿನ ವಸ್ತು ಸಂಗ್ರಹಾಲಯದಲ್ಲಿದೆ. ವತ್ಸಗುಲ್ಮ ವಾಕಾಟಕ ರಾಜ ದೇವಸೇನನಿಗೆ ಸಂಬಂಧಿಸಿದ ಈ ಶಾಸನವು ಭೂದಾನವನ್ನು ಉಲ್ಲೇಖಿಸುತ್ತಿದೆ.[೪]

೨. ಶಿಲಾ ಶಾಸನಗಳು :

ಶಿಲಾಶಾಸನಗಳು ಹೆಚ್ಚಾಗಿ ಏನನ್ನಾದರೂ ವಿಶೇಷ ವಿಚಾರಗಳನ್ನು, ರಾಜರ ದಿಗ್ವಿಜಯವನ್ನು ತಿಳಿಸಲು ಸೀಮಿತವಾಗಿದೆ. ಹಿಂದೆ ತಿಳಿಸಿದಂತೆ ಕರ್ನಾಟಕದಲ್ಲಿ ಅಶೋಕನ ಶಾಸನಗಳು ಬಂಡೆಗಲ್ಲಿನಲ್ಲಿಯೇ ದೊರಕಿದ್ದು, ಇದನ್ನು ಧರ್ಮ ಲಿಪಿಗಳೆಂದು ಕರೆಯುತ್ತಾರೆ. ಇದರಲ್ಲಿ ಎರಡು ರೀತಿಯ ಶಿಲಾಶಾಸನಗಳು ಕರ್ನಾಟಕದಲ್ಲಿ ದೊರಕುತ್ತವೆ.

೧ ಬಂಡೆಗಲ್ಲು ಶಾಸನ : ಬಂಡೆಗಲ್ಲುಗಳ ಮೇಲೂ ಸಂಸ್ಕೃತ ಶಾಸನಗಳು ದೊರಕುತ್ತವೆ. ಬಾದಾಮಿಯ ಚಾಲುಕ್ಯರ ಕಾಲದ ಬಂಡೆಗಲ್ಲು ಶಾಸನಗಳು ಮತ್ತು ಶ್ರವಣ ಬೆಳಗೊಳದಲ್ಲಿ ಹೆಚ್ಚಾಗಿ ಬಂಡೆಗಲ್ಲು ಶಾಸನಗಳು ದೊರೆಯುತ್ತವೆ. ಬೆಳಗಾವಿ ಜಿಲ್ಲೆಯ ಎಕ್ಕೇರಿಯಲ್ಲಿ ದೊರೆತ ಇಮ್ಮಡಿ ಪುಲಕೇಶಿಯ ಶಾಸನವು ಬಂಡೆಗಲ್ಲಿನಲ್ಲಿ ಕೊರೆಯಲಾಗಿದೆ.

೨ ಸ್ತಂಭ ಶಾಸನ : ಕರ್ನಾಟಕದಲ್ಲಿ ಸ್ತಂಭ ಶಾಸನಗಳು ಬಹಳ ಪ್ರಸಿದ್ಧವಾಗಿದೆ. ತಾಳಗುಂದ ಸ್ತಂಭ ಶಾಸನ, ಮಂಗಳೇಶನ ಮಹಾಕೂಟ ಸ್ತಂಭ ಶಾಸನ, ಪಟ್ಟದಕಲ್ಲು ಶಾಸನ ಪ್ರಸಿದ್ಧ ಸ್ತಂಭ ಶಾಸನಗಳಾಗಿವೆ. ಈ ಎಲ್ಲಾ ಶಾಸನಗಳು ಸಂಸ್ಕೃತ ಶಾಸನ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದೆ. ಇದಲ್ಲದೆ ತಿರುಮಕೂಡಲು ನರಸೀಪುರದಲ್ಲಿ ಜೈನ ಸ್ತಂಭ ಶಾಸನವೊಂದು ಕಂಡು ಬರುತ್ತವೆ. ಸ್ತಂಭದ ನಾಲ್ಕು ಭಾಗಗಳಲ್ಲೂ ಶಾಸನವನ್ನು ಬರೆಯಲಾಗಿದೆ.[೫]

೩. ಗುಹಾ ಶಾಸನಗಳು : ಕ್ರಿ.ಶ. ೫೭೮ ರ ಕಾಲದ ಬಾದಾಮಿ ಚಾಲುಕ್ಯ ರಾಜ ಮಂಲೇಶನಿಗೆ ಸಂಬಂಧಿಸಿದ ಒಂದು ಗುಹಾಶಾಸನವು ಬಾದಾಮಿಯಲ್ಲಿರುವ ಪ್ರಸಿದ್ಧ ಗುಹೆಗಳಲ್ಲೊಂದಾದ ವೈಷ್ಣವ ಗುಹೆಯಲ್ಲಿ ಕಂಡು ಬರುತ್ತವೆ. ಮಂಗಲೇಶನು ಬ್ರಾಹ್ಮಣರಿಗೆ ದಾನಮಾಡಿದ ಉಲ್ಲೇಖ ಇಲ್ಲಿದೆ.

೪ ನಿಷಿಧಿ ಶಾಸನಗಳು : ಜೈನರು ಸಲ್ಲೇಖನ ವೃತವನ್ನಾಚರಿಸಿ ನಿಷಿಧಿ ಹೋದಂತಹ ವಿಚಾರವುಳ್ಳ ಹಲವಾರು ಶಾಸನಗಳು ಶ್ರವಣ ಬೆಳಗೊಳ ಮುಂತಾದೆಡೆ ದೊರಕುತ್ತದೆ. ಇವುಗಳು ಜೈನ ಇತಿಹಾಸವನ್ನು ಅಧ್ಯಯನ ಮಾಡಲು ಪ್ರಮುಖ ಆಕರವಾಗಿದ್ದು ಜೈನಮುನಿಗಳ ಪರಂಪರೆಯನ್ನು ತಿಳಿಸುತ್ತದೆ.

ಸಂಸ್ಕೃತ ಶಾಸನಗಳ ಪ್ರಕಾರಗಳು.

ಸಂಸ್ಕೃತ ಶಾಸನಗಳನ್ನು ಪ್ರಕಾರಗಳ ದೃಷ್ಟಿಯಿಂದ ವಿಭಾಗಿಸುವಾಗ ಪ್ರಮುಖವಾಗಿ ಮೂರು ಪ್ರಕಾರಗಳು ಕಂಡು ಬರುತ್ತವೆ. ಅವುಗಳೆಂದರೆ.

೧. ದಾನಶಾಸನಗಳು

೨. ಸ್ಮಾರಕ ಶಾಸನಗಳು

೩. ಪ್ರಶಸ್ತಿ ಶಾಸನಗಳು

೧. **ದಾನ ಶಾಸನಗಳು** : ಶಾಸನಗಳು ದಾನವನ್ನು ಉಲ್ಲೇಖ ಮಾಡುವುದಕ್ಕಾಗಿಯೇ ನಿರ್ಮಿತವಾಗಿದೆಯೋ ಎಂಬಷ್ಟರ ಮಟ್ಟಿಗೆ ದಾನ ಶಾಸನಗಳು ಕಂಡು ಬರುತ್ತವೆ. ಈ ದಾನ ಶಾಸನಗಳನ್ನು ಎರಡು ವಿಧವಾಗಿ ವಿಂಗಡಿಸಬಹುದಾಗಿದೆ.

೧. **ಬಸದಿ–ಮಠ–ದೇವಾಲಯಗಳಿಗೆ ನೀಡಿದಂತಹ ದಾನಗಳು** : ರಾಜರು ದೇವಾಲಯಗಳನ್ನು, ಬಸದಿಗಳನ್ನು ಜೀರ್ಣೋದ್ಧಾರ ಮಾಡಿ ಉತ್ತರೋತ್ತರವಾಗಿ ನಿತ್ಯ ನೈವೇದ್ಯಾದಿಗಳು ನಡೆಯಬೇಕೆಂಬ ಉದ್ಧೇಶದಿಂದ ಭೂದಾನಗಳನ್ನು ನೀಡುತ್ತಿದ್ದರು. ಇವುಗಳನ್ನು ದೇವ ಭೋಗ ಎಂದು ಕರೆಯುತ್ತಾರೆ.ಉದಾ. : **ಕುಕ್ಕೆ ಸುಬ್ರಮ್ಹಣ್ಯ ಶಾಸನ**

೨. **ವಿದ್ಯಾಕೇಂದ್ರಗಳಿಗೆ ನೀಡಿದ ದಾನ** : ಹಿಂದಿನ ಕಾಲದಲ್ಲಿ ವಿದ್ಯಾಕೇಂದ್ರಗಳನ್ನು ಘಟಿಕಾಲಯಗಳೆಂದು ಕರೆಯುತ್ತಿದ್ದರು. ಇಂತಹ ಘಟಿಕಾಲಯಗಳಿಗೂ ರಾಜರು ದತ್ತಿಗಳನ್ನು ಕೊಡುತ್ತಿದ್ದರು. ಇದನ್ನು ಶಾಸನಗಳಲ್ಲಿ ಉಲ್ಲೇಖಿಸುತ್ತಿದ್ದರು. ಉದಾ. : **ಸಾಲೋಟಗಿ ಶಾಸನ**

೨. **ಸ್ಮಾರಕ ಶಾಸನಗಳು** : ಸಂಸ್ಕೃತ ಭಾಷೆಯಲ್ಲಿ ಹೆಚ್ಚಿನ ಸ್ಮಾರಕ ಶಾಸನಗಳು ಕಂಡು ಬರುವುದಿಲ್ಲ. ಆದರೆ ವೀರಗಲ್ಲುಗಳ್ಲಿ ಸಂಸ್ಕತದ ಪ್ರಸಿದ್ಧ ಶ್ಲೋಕಗಳನ್ನು ದಾಖಲಿಸುತ್ತಿದ್ದರು.

ಜಿತೇನ ಲಭ್ಯತೇ ಭೂಮಿ: ಮೃತೇನಾಪಿ ಸುರಾಂಗನಾ ।
ಕ್ಷಣ ವಿಧ್ವಂಸಿನಿ ಕಾಯೇ ಕಾಚಿಂತಾ ಮರಣೇ ರಣೇ ॥

ಇದು ಪ್ರಸಿದ್ಧ ವೀರಗಲ್ಲುಗಳಲ್ಲಿ ಉಲ್ಲೇಖಿತವಾದ ಶ್ಲೋಕವಾಗಿದ್ದು ಪಂಚತಂತ್ರದಲ್ಲಿ ಕಂಡುಬರುತ್ತದೆ. ಮೈಸೂರು ಅರಸರ ಕಾಲದಲ್ಲಿ ಪ್ರಸಿದ್ಧ ದೇವಾಲಯಗಳಿಗೆ ಹರಿವಾಣ, ಘಂಟೆ, ತಂಬಿಗೆ, ಪ್ರಭಾವಳಿ ಇತ್ಯಾದಿಗಳ ಕಾಣಿಕೆಯನ್ನು ಸಮರ್ಪಿಸುವಾಗ ದಾನ ನೀಡಿದ ರಾಜರ ವಿಶೇಷಣಗಳನ್ನು, ಹೆಸರನ್ನು ಸೂಚಿಸುತ್ತಿದ್ದರು. ಇವುಗಳನ್ನು 'ಸ್ಮಾರಕ ಶಾಸನ'ಗಳೆಂದು ಕರೆಯಬಹುದಾಗಿದೆ. ಉದಾ– ಮೈಸೂರು ಅರಸರು ಚಾಮುಂಡೇಶ್ವರಿ ದೇವಿಗೆ ನೀಡಿದ ಕಾಣಿಕೆಗಳ ಉಲ್ಲೇಖಉಳ್ಳ ಶಾಸನಗಳು ಸ್ಮಾರಕ ಶಾಸನಗಳಿಗೆ ಇನ್ನೊಂದು ಉದಾಹರಣೆ : ನಿಷಿಧಿ ಶಾಸನಗಳು.

೩. ಪ್ರಶಸ್ತಿ ಶಾಸನಗಳು :

ಕರ್ನಾಟಕದಲ್ಲಿ ಪ್ರಶಸ್ತಿ ಶಾಸನಗಳು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿದೆ. ಇಂತಹ ಶಾಸನಗಳಲ್ಲಿ ಒಂದು ರಾಜನ ಪೌರುಷವನ್ನು, ಪರಾಕ್ರಮವನ್ನು ತಿಳಿಸಿರುತ್ತಾರೆ. ಈ ರೀತಿಯಾಗಿ ರಾಜನ ಪರಾಕ್ರಮವನ್ನು ತಿಳಿಸುವ ಸಂದರ್ಭದಲ್ಲಿ ರಾಜನು ಇತರ ರಾಜ್ಯಗಳ ಮೇಲೆ ದಂಡೆತ್ತಿ ಹೋದಂತಹ ವಿಷಯವನ್ನು ತಿಳಿಸಿರುತ್ತಾರೆ. ಐಹೊಳೆ ಪ್ರಶಸ್ತಿ ಶಾಸನವು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಕಾವ್ಯದೃಷ್ಟಿಯಿಂದ ಇಂತಹ ಶಾಸನಗಳು ಪ್ರೌಢವಾಗಿರುತ್ತವೆ.

ಕ್ರಿ.ಶ. ೪ ಮತ್ತು ೫ನೆಯ ಶತಮಾನದಿಂದ ಕರ್ನಾಟಕದಲ್ಲಿ ಸಂಸ್ಕೃತ ಶಾಸನಗಳ ಇತಿಹಾಸವು ಪ್ರಾರಂಭವಾಗಿ ಕನ್ನಡ ಭಾಷೆಯೊಂದಿಗೆ ಜೊತೆ ಜೊತೆಯಾಗಿ ಸೇರಿಕೊಂಡು ಮುಂದುವರಿಯಿತು.ಈ ಸಂದರ್ಭದಲ್ಲಿ ಕನ್ನಡ ಶಾಸನಗಳು, ಸಂಸ್ಕೃತ ಶಾಸನಗಳು ಎಂಬ ಎರಡು ವಿಭಾಗಗಳು ಉಂಟಾದವು. ಇದರ ಪ್ರಭಾವದಿಂದಾಗಿ ಎರಡು ರೂಪಗಳು ಆವಿರ್ಭವಿಸಿದವು. ಅವುಗಳೆಂದರೆ ಸಂಪೂರ್ಣ ಸಂಸ್ಕೃತ ಶಾಸನಗಳು, ಸಂಸ್ಕೃತ ಮತ್ತು ಕನ್ನಡ ಮಿಶ್ರಿತ ಶಾಸನಗಳು. ಕದಂಬ, ಚಾಳುಕ್ಯ, ಗಂಗರ ಕಾಲದಲ್ಲಿ ಸಂಪೂರ್ಣ ಸಂಸ್ಕೃತ ಶಾಸನಗಳು ಕಂಡುಬಂದರೆ, ನಂತರದ ಕಾಲದಲ್ಲಿ ಸಂಸ್ಕೃತ ಕನ್ನಡ ಮಿಶ್ರಿತ ಶಾಸನಗಳು ಕಂಡುಬರುತ್ತವೆ. ಹೆಚ್ಚಾಗಿ ಇಂತಹ ಶಾಸನಗಳಲ್ಲಿ ಕನ್ನಡ ಭಾಗಕ್ಕಿಂತ ಸಂಸ್ಕೃತ ಭಾಗವೇ ಅಧಿಕವಾಗಿರುತ್ತದೆ. ವಿಜಯನಗರ ಅರಸರ ಕಾಲದಲ್ಲಿ ದಾನಕೊಟ್ಟ ಗ್ರಾಮದ ಸೀಮೆಗಳನ್ನು ತಿಳಿಸುವಾಗ ದೇಶ ಭಾಷಯಾ ಅಥವಾ ಕರ್ಣಾಟಕ ಭಾಷಯಾ ಎಂದು ಹೇಳಿ ಕನ್ನಡ ಭಾಷೆಯಲ್ಲಿ ಉಲ್ಲೇಖಿಸಿದ್ದಾರೆ. ಮಣಿ ಪ್ರವಾಳ ಕಾವ್ಯಂ ಎಂದು ಕರೆಯಲ್ಪಡುವ ಕಾವ್ಯ ಪ್ರಕಾರಗಳಲ್ಲಿ ಈ ಶಾಸನಗಳನ್ನು ಸೇರಿಸಬಹುದಾಗಿದೆ. ಮಣಿ ಮತ್ತು ಪ್ರವಾಳ ವೆಂದರೆ ಮುತ್ತು ಮತ್ತು ಹವಳ ವೆಂದರ್ಥ. ಒಂದು ಸರದಲ್ಲಿ ಮುತ್ತು ಮತ್ತು ಹವಳವನ್ನು ಪೋಣಿಸಿದರೆ ಅವುಗಳನ್ನು ಸ್ಪಷ್ಟವಾಗಿ ವಿಭಾಗಿಸಬಹುದು. ಅದನ್ನು ಒಂದೇ ಸೂತ್ರದಲ್ಲಿ ಪೋಣಿಸಿದಾಗ ಸುಂದರವಾದ ಆಭರಣವಾಗುತ್ತದೆ. ಅದರಂತೆ ಈ ಶಾಸನಗಳು ಕಂಡು ಬರುತ್ತದೆ. ಜಿನವಲ್ಲಭನ ಕುರಿಕ್ಯಾಲ ಶಾಸನವನ್ನು ಇದಕ್ಕೆ ಉದಾಹರಿಸಬಹುದಾಗಿದೆ.ಈ ಶಾಸನದಲ್ಲಿ ಮೊದಲಿಗೆ ಕನ್ನಡದಲ್ಲಿ ಗದ್ಯಭಾಗವಿದ್ದು ನಂತರ ಮೂರು ಸಂಸ್ಕೃತ ಸಂಭಾಷಣಾತ್ಮಕ ಶ್ಲೋಕವಿದೆ. ನಂತರ ಪುನ: ಕನ್ನಡದ ಭಾಗವಿದೆ.[೬]

ಸಂಸ್ಕೃತ ಶಾಸನಗಳಲ್ಲಿ ಇನ್ನೊಂದು ಪ್ರಕಾರವನ್ನು ಈ ರೀತಿಯಾಗಿ ಕಲ್ಪಿಸಬಹುದಾಗಿದೆ.

೧. ಕಾವ್ಯಾತ್ಮಕ ಅಥವಾ ಪದ್ಯಾತ್ಮಕ ಶಾಸನಗಳು

೨. ಗದ್ಯಾತ್ಮಕ ಶಾಸನಗಳು

೩. ಗದ್ಯ ಪದ್ಯ ಮಿಶ್ರಿತ (ಚಂಪೂ) ಶಾಸನಗಳು

೧. **ಕಾವ್ಯಾತ್ಮಕ ಶಾಸನಗಳು** : ಕಾವ್ಯಾತ್ಮಕ ಶಾಸನಗಳು ಎಂದರೆ ಸುಂದರವಾದ ಅಲಂಕಾರ ಛಂದಸ್ಸುಗಳಿಂದ ಭೂಯಿಷ್ಠವಾದ ಶ್ಲೋಕಾತ್ಮಕವಾದ ಶಾಸನಗಳು. ಇಂತಹ ಶಾಸನಗಳಲ್ಲಿ ಪ್ರಾರಂಭದಿಂದ ಅಂತ್ಯದವರೆಗೆ ಶ್ಲೋಕ ಭೂಯಿಷ್ಠವಾಗಿರುತ್ತದೆ. ಚಾಳುಕ್ಯರ, ವಿಜಯನಗರ, ಮೈಸೂರು ಅರಸರ ಶಾಸನಗಳು ಸಂಪೂರ್ಣ ಶ್ಲೋಕದಿಂದ ಕೂಡಿರುತ್ತವೆ. ಇಂತಹ ಕೆಲವು ಶಾಸನಗಳಲ್ಲಿ ದೇಶ ಭಾಷೆಯಲ್ಲಿ ಹೇಳುವಂತಹ ಭಾಗವು ಗದ್ಯಾತ್ಮಕವಾಗಿರುತ್ತವೆ. ಕರ್ನಾಟಕದ ಪ್ರಸಿದ್ಧ ಶಾಸನಗಳಾದ ಐಹೊಳೆ ಶಾಸನ, ಮಹಾಕೂಟ ಸ್ತಂಭ ಶಾಸನ, ಪಟ್ಟದಕಲ್ಲು ಶಾಸನ, ತಾಳಗುಂದ ಶಾಸನಗಳು ಸಂಪೂರ್ಣ ಕಾವ್ಯಮಯವಾಗಿದ್ದು ಸಾಹಿತ್ಯಕವಾಗಿ ಬಹಳ ಮಹತ್ವವನ್ನು ಪಡೆದಿದೆ. ಮೈಸೂರು ಅರಸ ಕೃಷ್ಣರಾಜ ಒಡೆಯರ್‌ರ ಕಾಲದ ಚಾಮುಂಡಿ ಬೆಟ್ಟದಲ್ಲಿರುವ ಶಾಸನವು ಚಾಮುಂಡಾಂಬೆಯನ್ನು ಸ್ತುತಿಸುವಂತಹ ಶ್ಲೋಕಗಳನ್ನೊಳಗೊಂಡಿದೆ. ಹಂಪಿಯ ಕೋದಂಡರಾಮ ದೇವಾಲಯದ ಹಿಂಬದಿಯ ವಿಷ್ಣು ದೇವಾಲಯದ ಪ್ರವೇಶದ ಎರಡೂ ಕಡೆಯಲ್ಲಿ ವಿಷ್ಣುವಿನ ದಶಾವತಾರಗಳನ್ನು ಸುಂದರವಾದ ಶ್ಲೋಕಗಳ ಮೂಲಕ ವರ್ಣಿಸಿದ್ದಾರೆ.

೨. **ಗದ್ಯಾತ್ಮಕ ಶಾಸನಗಳು** : ಸಂಧಿ ಸಮಾಸಗಳಿಂದ ಭೂಯಿಷ್ಠವಾದ ಶಾಸನಗಳಿಗೆ ಗದ್ಯಾತ್ಮಕ ಶಾಸನಗಳೆನ್ನಬಹುದು. ಪ್ರಾರಂಭದಿಂದ ಕೊನೆಯವರೆಗೆ ಯಾವುದೇ ಶ್ಲೋಕಗಳು ಇರುವುದಿಲ್ಲ. ಹೆಚ್ಚಾಗಿ ಗಂಗ ವಂಶದ ಅರಸರಶಾಸನಗಳು ಗದ್ಯಾತ್ಮಕವಾಗಿದೆ. ಇಂತಹ ಶಾಸನಗಳಲ್ಲಿ ಅತಿ ದೀರ್ಘವಾಗಿ ವಂಶಾವಳಿಯನ್ನು ಚಿತ್ರಿಸಿ ದಾನದ ವಿಷಯವನ್ನು ತಿಳಿಸುತ್ತಾರೆ. ಕೆಲವು ಬಾರಿ ಸೀಮೆಗಳ ಭಾಗವು ಕನ್ನಡದಲ್ಲಿರುತ್ತದೆ. ಮೈಸೂರಿನ ರಾಜರ ವಂಶಾವಳಿಯನ್ನು ವರ್ಣಿಸುವಂತಹ ಶಾಸನವಿದೆ. ಇದರ ಪ್ರಾರಂಭದಲ್ಲಿ ಶ್ರೀ ಮಹಿಶೂರಪುರವರಾಧೀಶ ಶ್ರೀ ಕೃಷ್ಣರಾಜೇಂದ್ರ **ಕಂಠೀರವ ವಂಶಾವತರಣವೈಭವ ವಿವರಣ ಚೂರ್ಣಿಕಾ ಪ್ರಾರಂಭಃ** ಎಂದು ಚೂರ್ಣಿಕೆಯ ಹೆಸರನ್ನು ಹೇಳಿ ವಿಸ್ತಾರವಾಗಿ ವಂಶಾವಳಿಯನ್ನು ಗದ್ಯಾತ್ಮಕವಾಗಿ ಹೇಳಲಾಗಿದೆ. [೭]

೩. **ಗದ್ಯ ಮತ್ತು ಪದ್ಯ ಮಿಶ್ರಿತ (ಚಂಪೂ) ಶಾಸನಗಳು** : ಗದ್ಯ ಮತ್ತು ಪದ್ಯ ಮಿಶ್ರಿತವಾದ ಕಾವ್ಯವನ್ನು ಚಂಪೂ ಎನ್ನುತ್ತಾರೆ. ಈ ಪ್ರಕಾರದಲ್ಲಿ ಹೆಚ್ಚಾಗಿ ಪ್ರಾರ್ಥನಾ ಶ್ಲೋಕಗಳು ಇದ್ದು ನಂತರ ಗದ್ಯವಾಗಿರುತ್ತವೆ. ಕನ್ನಡದ ಮೊದಲ ಶಾಸನವೂ ಇದೇ ರೀತಿಯಾಗಿದೆ. ಕುರಿಕ್ಯಾಲ ಶಾಸನವೂ ಇದೇ ರೀತಿಯಗಿದ್ದು, ಗದ್ಯವು ಪ್ರಾರಂಭದಲ್ಲಿದ್ದು ನಂತರ ಪದ್ಯ ಭಾಗವಿದೆ. ಬಯಕಾರ ರಮಪ್ಪಯ್ಯನ ಶಾಸನಗಳೂ ಕೂಡ ಇದೇ ರೀತಿಯಾಗಿದೆ.

ಸಂಸ್ಕೃತ ಶಾಸನಗಳ ವಿಷಯಾನುಪೂರ್ವಿ

ಶಾಸನಗಳು ಪ್ರತಿಪಾದಿಸುವಂತಹ ವಿಷಯವೇನು? ಅವುಗಳ ಸ್ಥರವೇನು? ಶಾಸನಗಳ ವಿಷಯಾನುಕ್ರಮಣಿಕೆಯೇನು? ಎಂಬಂತಹ ವಿಷಯಗಳು ಸರ್ವವಿದಿತವಾಗಿದೆ. ಮೊದಲು ಪ್ರಾರ್ಥನೆ

ಇರುತ್ತದೆ, ನಂತರ ವಂಶಾವಳಿ ಇರುತ್ತದೆ, ದಾನದ ಭಾಗವಿರುತ್ತದೆ, ಕೊನೆಗೆ ಶಾಪಾಶಯವಿರುತ್ತದೆಂಬುವುದು ಸಾಮಾನ್ಯ ವಿಷಯವಾಗಿದೆ. ಆದರೆ ಸಂಸ್ಕೃತ ಶಾಸನಗಳನ್ನು ಗಮನಿಸಿದಾಗ ಎಲ್ಲಾ ಸ್ಥರಗಳಲ್ಲೂ ವಿಶೇಷತೆಗಳು ಕಂಡು ಬರುತ್ತವೆ. ಅವುಗಳನ್ನು ಇಲ್ಲಿ ತಿಳಿಸಲಾಗುವುದು. ಶಾಸನಗಳಲ್ಲಿ ಪ್ರಮುಖವಾಗಿ ಈ ಸ್ಥರಗಳು ಕಂಡು ಬರುತ್ತವೆ :

೧. ಪ್ರಾರ್ಥನೆ.

೨. ವಂಶಾವಳಿ.

೩. ಕಾಲ.

೪. ಗ್ರಾಮದ ಮಾಹಿತಿ.

೫. ದಾನ ಸ್ವೀಕರಿಸುವವರ ಮಾಹಿತಿ.

೬. ದಾನ ನೀಡಿದ ಸೀಮೆಗಳ ಮಾಹಿತಿ.

೭. ಶಾಪಾಶಯ.

೮. ಶಾಸನ ಲೇಖಕನ ಮಾಹಿತಿ.

ಇವಿಷ್ಟು ಸ್ತರಗಳು ಹೆಚ್ಚಾಗಿ ದಾನ ಶಾಸನಗಳಲ್ಲಿ ಕಂಡು ಬರುತ್ತದೆ. ಪ್ರಶಸ್ತಿ ಶಾಸನಗಳಲ್ಲಿ ಒಬ್ಬ ಕವಿಯು ತನ್ನ ಅಭಿಮಾನಿ ರಾಜನ ಗುಣಗಾನವನ್ನು ಮಾಡುತ್ತಾನೆ. ನಿಷಿಧಿ ಶಾಸನಗಳಲ್ಲಿ ನಿಷಿಧಿಗೆ ಹೋಗುವಂತಹ ಮುನಿಯ ಮಾಹಿತಿ ಇರುತ್ತದೆ. ಸಂಸ್ಕೃತ ಶಾಸನಗಳಲ್ಲಿ ಈ ಸ್ತರಗಳಲ್ಲಿರುವಂತಹ ವಿಶೇಷತೆಯನ್ನು ಗಮನಿಸಬೇಕಾಗಿದೆ.

೧. ಪ್ರಾರ್ಥನೆ.

ಶುಭ ಕೆಲಸ ಪ್ರಾರಂಭ ಮಾಡುವ ಮೊದಲು ಪ್ರಾರ್ಥನೆಯು ಅವಶ್ಯಕವಾಗಿದೆ. ಇದಕ್ಕೆ ಕಾರಣಗಳೂ ಇವೆ. '**ಮಂಗಲಂ ನಾಮ ಅನಿಷ್ಠ ನಿವರ್ತಕಃ ಇಷ್ಟ ಪ್ರಾಪಕಃ ಕರ್ತವ್ಯ ಕರ್ಮ ವಿಶೇಷಃ**'[೮] ಎಂದು ಹೇಳಲಾಗಿದೆ. ಅಂದರೆ ಅನಿಷ್ಠಗಳನ್ನು ದೂರ ಮಾಡಿ, ಇಷ್ಟವನ್ನು ದೊರಕಿಸಿಕೊಡುವಂತಹ ಮಾಡಲೇ ಬೇಕಾದ ವಿಶೇಷವೇ ಪ್ರಾರ್ಥನೆಯಾಗಿದೆ. ಕಾಯಿಕ, ವಾಚಿಕ, ಮಾನಸಿಕವೆಂದು ಪ್ರಾರ್ಥನೆಗಳು ಮೂರು ವಿಧ. ಇದರಲ್ಲಿ ಶಬ್ದೋಚ್ಚಾರಣೆ ಮಾಡುವಿಕೆಯು ವಾಚಿಕವಾಗಿದೆ. ಇದನ್ನೇ ಸಂಸ್ಕೃತ ಶಾಸನಗಳಲ್ಲಿ ಬಳಸಿಕೊಳ್ಳಲಾಗಿದೆ. ಶೈವಾನುಯಾಯಿಗಳು ಶಿವನನ್ನೂ, ವೈಷ್ಣವಾನುಯಾಯಿಗಳು ವಿಷ್ಣುವನ್ನು ಪ್ರಾರ್ಥಿಸುತ್ತಾರೆ. ಮೈಸೂರು ರಾಜರ ಒಂದು ಶಾಸನದ ಪ್ರಾರಂಭದಲ್ಲಿ '**ಶ್ರೀ ರಾಮಾನುಜಾಯ ನಮಃ**' ಎಂದು ರಾಮಾನುಜಾಚಾರ್ಯರನ್ನು ಪ್ರಾರ್ಥಿಸಿದೆ.

ದೊಡ್ಡ ತಾಮ್ರ ಶಾಸನವಾದ ತಿರುಮಕೂಡಲು ನರಸೀಪುರ [೯] ಶಾಸನದಲ್ಲಿ ಪ್ರಾರಂಭದಲ್ಲಿ ೫ ಪ್ರಾರ್ಥನಾ ಶ್ಲೋಕಗಳಿವೆ. ಅದರಲ್ಲೊಂದು ಶ್ಲೋಕವು ಈ ರೀತಿಯಾಗಿದೆ–

ವೈದೇಹಿ ತಟಿದುಜ್ವಲಃ ಪ್ರವಿಲ ಸಚ್ಚಾಪೋತ್ತಮೇನಾನ್ವಿತಃ ।
ಕಾರುಣ್ಯೈಕರ ಸ್ತ್ರಿ ಲೋಕ್ಯ ಭಯದಃ ಶ್ರೀ ಸೂಕ್ತಿ ಮಂಜು ಧ್ವನಿಃ ।
ಯಚ್ಛನ್ನಿರ್ಮಲ ಭಕ್ತ ಜಾತಕತತೇಃ ಸಂಜೀವನಂ ಜೀವನಂ ।
ಶ್ರೇಯೋ ವೋ ವಿದಧಾತ್ವ ಭೀಷ್ಟ ಫಲದಃ ಶ್ರೀರಾಮ ನೀಲಾಂಬುದಃ ॥

ವೈದೇಹಿಯಿಂದ ಶೋಭಿತನು (ಮಿಂಚಿನಂತಿರುವವಳಿಂದ), ಉತ್ತಮವಾದ ಮತ್ತು ಕಂಗೊಳಿಸುವ ಬಿಲ್ಲನ್ನು ಹೊಂದಿರುವವನು(ಕಾಮನ ಬಿಲ್ಲನ್ನು ಹೊಂದಿರುವ), ಕರುಣೆಎಂಬ ಒಂದೇ ರಸ ಉಳ್ಳವನು(ಲೋಕಕ್ಕೆ ಕರುಣೆಯಿಂದ ಮಳೆಯನ್ನು ಸುರಿಸುವವನು), ಮೂರು ಲೋಕಕ್ಕೆ ಭಯಪ್ರದನು(ಮಿಂಚು ಮತ್ತು ಗುಡುಗುಗಳಿಂದ ಲೋಕಕ್ಕೆ ಭಯವನ್ನುಂಟುಮಾಡುವ), ಮಂಜುಳವಾದ ಧ್ವನಿಉಳ್ಳವನು(ಗುಡುಗಿನ ಧ್ವನಿಉಳ್ಳ), ಜೀವನಕ್ಕೆ ಸಂಜೀವಿನಿಯಂತಿರುವವನು(ಜೀವನಕ್ಕೆ ಅತ್ಯಮೂಲ್ಯವಾದ ನೀರನ್ನು ನೀಡಿ ಜೀವಿಸುವಂತೆ ಮಾಡುವವನು), ಚಾತಕ ಪಕ್ಷಿಗಳಂತಿರುವ ಭಕ್ತರಿಗೆ ಜೀವನಾಧಾರನು(ಚಾತಕ ಪಕ್ಷಿಗಳಿಗೆ ಜೀವ ಧಾತೃವು), ಮತ್ತು ಅಭೀಷ್ಟ ಧಾತಾರನೂ ಆದ ಶ್ರೀರಾಮನೆಂಬ ನೀಲಿ ಮೋಡವು ನಿಮಗೆ ಶ್ರೇಯಸ್ಸನ್ನುಂಟುಮಾಡಲಿ

ಈ ಶ್ಲೋಕದಲ್ಲಿ ಶ್ರೀರಾಮನನ್ನು ನೀಲಿ ಮೋಡಕ್ಕೆ ಹೋಲಿಸಿ ಅದರಲ್ಲಿರುವಂತಹ ಗುಣಗಳನ್ನು ಶ್ರೀರಾಮನೊಂದಿಗೆ ತುಲನೆ ಮಾಡಲಾಗಿದೆ. ಮೈಸೂರು ಅರಸರಿಗೆ ಸಂಬಂಧಿಸಿದ ಈ ಶಾಸನದ ಪ್ರಾರಂಭದಲ್ಲಿ ಶ್ರೀರಾಮಾನುಜರನ್ನು ಸ್ತುತಿಸಿದುದರಿಂದ ಶ್ರೀರಾಮ ನೀಲಾಂಬುದ ಎಂಬ ಶಬ್ದವನ್ನು ಶ್ರೀರಾಮಾನುಜಾಚಾರ್ಯರಿಗೂ ಹೋಲಿಸಬಹುದಾಗಿದೆ.

ಒಂದೇ ಶಬ್ದದಿಂದ ಎರಡು ಅರ್ಥವನ್ನು ಕೊಡುವಂತೆ ಸುಂದರವಾಗಿ ರಚಿಸಲಾಗಿದೆ.[೯] ಕೈಕೇಯ ರಾಜ ಚಿತ್ರಸೇನನ ಹೊನ್ನಾವರ ಶಾಸನದಲ್ಲಿ [೧೦] ಬುದ್ಧನ ಸ್ತುತಿ ಉಳ್ಳ ಶ್ಲೋಕವಿದೆ.

ಜಯತ್ಯಮಿತ ಗುಣಭೃದ್ಬುದ್ಧಸ್ಸತ್ವ ಸಮಾಶ್ರಯಃ ।
ಶುದ್ಧೋದನ ಕುಲೋದ್ಭೂತಃ ಪದ್ಮ ಪತ್ರ ನಿಭೇಕ್ಷಣಃ ॥

(ಅಮಿತವಾದ ಗುಣಗಳನ್ನು ಹೊಂದಿರುವವನೂ, ಶುದ್ಧೋದನ ಕುಲದಲ್ಲಿ ಜನಿಸಿದವನೂ, ಪದ್ಮಪತ್ರದಂತೆ ತೀಕ್ಷ್ಣವಾದ ದೃಷ್ಟಿಉಳ್ಳವನಾದ ಬುದ್ಧನು ಜಯಶಾಲಿಯಾಗಲಿ.)

ಹೆಗ್ಗಡೆ ದೇವನ ಕೋಟೆ ತಾಲೂಕಿನ ಸಾಗರೆಯಲ್ಲಿ ದೊರಕಿದ ಶಾಸನದ ಪ್ರಾರಂಭದಲ್ಲಿ ವಿಘ್ನ ನಿವಾರಕ ಗಣೇಶ, ವಿದ್ಯಾಭಿಮಾನಿ ಶಾರದೆ, ಸರಸ್ವತಿ, ಶಂಭು, ವಾಮನ ಅವತಾರಿ ವಿಷ್ಣು ಮತ್ತು ಬ್ರಹ್ಮನನ್ನು ಸ್ತುತಿಸಲಾಗಿದೆ. ಶಾರದೆಯನ್ನು ಕುರಿತ ಶ್ಲೋಕ ಈ ರೀತಿಯಾಗಿದೆ.

ಶಾರದಾ ಶಾರದಾಂ ಭೋಜ ಶರದಿಂದು ನಿಭಾನನೇ ।
ಸಾರಸ್ವತ್ಯಂ ಚ ಮೇ ದೇಹಿ ಶಾಸನಂ ಲಿಖಿತಂಮಯಾ ॥

(ಬಿಳಿಯ ಬಣ್ಣದ ಕಮಲದಂತೆ ಮತ್ತು ಶರತ್ಕಾಲದ ಚಂದ್ರನಂತೆ ಸುಂದರ ಉಳ್ಳಂತಹ ಶಾರದೆಯು, ನಾನು ಬರೆಯುತ್ತಿರುವಂತಹ ಶಾಸನಕ್ಕೆ ವಿದ್ಯೆಯನ್ನನು ಗ್ರಹಿಸಲಿ.)

ಹೆಚ್ಚಾಗಿ ವಿಷ್ಣುವಿನ ವರಾಹವತಾರವನ್ನು ಸ್ತುತಿಸಿದರೆ ಇಲ್ಲಿ ವಾಮನವತಾರವನ್ನು ಸ್ತುತಿಸಿರುವುದು ವಿಶೇಷವಾಗಿದೆ. ಈ ರೀತಿಯಾಗಿ ಪ್ರಾರ್ಥನಾ ಶ್ಲೋಕಗಳು ವೈವಿದ್ಯತೆಯಿಂದ ಕೂಡಿದ್ದು ಸಾಹಿತ್ಯಕವಾಗಿಯೂ ವಿಶಿಷ್ಟವಾಗಿದೆ.

ಚಾಲುಕ್ಯ ರಾಜ ಪೂಗವರ್ಮನ ಮುಧೋಳ ಶಾಸನವು ಬ್ರಹ್ಮನನ್ನು ಸ್ತುತಿಸಿದೆ.[೧೧]

ಜಯತಿ ಸತ್ಪೂಜ್ಯಂ ಪ್ರದೀಪ್ತಕನಕ ಪ್ರಭಂ ।
ತ್ರೈಲೋಕ್ಯ ಸದ ಸತ್ಕಾರಿ ಬ್ರಹ್ಮಣಃ ಕ್ರಮ ಪಂಕಜಮ್ ॥

(ಸಜ್ಜನರಿಂದ ಪೂಜಿಸಲ್ಪಡುವಂತಹುದೂ, ಬಂಗಾರದಂತಹ ಹೊಳಪುಳ್ಳಂತಹುದೂ, ಮೂರು ಲೋಕಗಳಲ್ಲಿ ಒಳಿತನ್ನೂ ಮತ್ತು ಕೆಡುಕನ್ನುಂಟುಮಾಡುವಂತಹ ಬ್ರಹ್ಮನ ಪಾದಾರವಿಂದಗಳಿಗೆ ಜಯವಾಗಲಿ.)

ತ್ರೈಲೋಕ್ಯಂ ಮಧುಸೂದನಸ್ಯಜಠರೇ ಸೋಪ್ಯೇಕಶೇಷಾಶ್ರಯಃ ।
ಸೋಪ್ಯರ್ಧಂ ಹರಕಂಕಣಂ ಸಚ ಹರಃ ಕೈಲಾಸ ಕೋಣೇ ಸ್ಥಿತಃ ।
ಕೈಲಾಸೋಪಿ ಸ ಲಕ್ಷಿತಃ ಕ್ಷಿತಿತಳೇ ಸೌ ಯಸ್ಯ ಮೃದ್ಬಿಂದುವತ್ ।
ದಂಷ್ಟ್ರಾಗ್ರೇ ವಿಲಸತ್ಯ ಸಾವವತು ವಃ ಕ್ರೋಡಾವತಾರೋ ಹರಿಃ ॥

(ಮೂರು ಲೋಕಗಳೂ ಮಧುಸೂದನನ ಜಠರದಲ್ಲಿ ಆಶ್ರಿತವಾಗಿದೆ, ಆತನಾದರೋ ಶೇಷನಲ್ಲಿ ಆಶ್ರಯ ಪಡೆದಿದ್ದಾನೆ, ಶೇಷನಾದರೋ ಹರನ ಕಂಕಣದಲ್ಲಿ ಅಲಂಕೃತನಾಗಿದ್ದಾನೆ, ಹರನಾದರೋ ಕೈಲಾಸದ ಒಂದು ಕೋಣೆಯಲ್ಲಿರುವನು, ಈ ರೀತಿಯಾಗಿ ಯಾರಿಗೆ ಕೈಲಾಸವೂ ಕೂಡ ಮಣ್ಣಿನ ಮುದ್ದೆಯಂತೆ ಕಂಡುಬಂದಿತೋ ಅಂತಹ ವರಾಹತಾರಿ ವಿಷ್ಣುವು ನಿಮ್ಮನ್ನು ರಕ್ಷಿಸಲಿ.) ಇದು

ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯಲ್ಲಿ ದೊರೆತ ಶಾಸನದಲ್ಲಿ ಕಂಡುಬರುತ್ತದೆ. ಸಂಸ್ಕೃತ ಶಾಸನಗಳಲ್ಲಿ ಪ್ರಾರ್ಥನಾ ಶ್ಲೋಕಗಳು ಧಾರ್ಮಿಕ ಮಹತ್ವವನ್ನು ಪಡೆದಿದ್ದು ಧಾರ್ಮಿಕ ಏಕತೆಯನ್ನು ಪ್ರತಿಪಾದಿಸುತ್ತಿದೆ.

೨. ವಂಶಾವಳಿ.

ಹೆಚ್ಚಿನ ರಾಜವಂಶಗಳ ರಾಜ ವಂಶಾವಳಿಯ ಉಗಮವು ಪೌರಾಣಿಕ ಹಿನ್ನಲೆಯುಳ್ಳದ್ದಾಗಿದೆ. ತಮ್ಮ ವಂಶದ ಮೂಲ ಪುರುಷನ ಉಗಮ ಹೇಗಾಯಿತೆಂದು ತಿಳಿಸುವ ಭಾಗವಿದಾಗಿದೆ. ಗಂಗ ಅರಸರ ಕಾಲದ ಶಾಸನಗಳಲ್ಲಿ ಅತಿ ದೀರ್ಘವಾದ ವಂಶಾವಳಿ ಇರುತ್ತದೆ. ಮೈಸೂರಿನ ಅರಸರಿಗೆ ಸಂಬಂಧಿಸಿದ ಒಂದು ಶಾಸನದಲ್ಲಿ ಚೂರ್ಣಿಕೆಯ ರೂಪದಲ್ಲಿ ಅತ್ಯಂತ ಸುಂದರವಾಗಿ ವಂಶಾವಳಿಯನ್ನು ಚಿತ್ರಿಸಲಾಗಿದೆ. ಈ ಭಾಗದಲ್ಲಿ ಬರುವಂತಹ ಬಿರುದುಗಳ ಭಾಗ ಸ್ವಾರಸ್ಯಕರವಾಗಿರುತ್ತದೆ. ಅದೇ ರೀತಿಯಾಗಿ ಹೆಚ್ಚಿನ ಸಾಹಿತ್ಯ ಭೂಯಿಷ್ಠವಾದ, ಸ್ವಾರಸ್ಯಕರ ಮಾಹಿತಿಯನ್ನು ಕೊಡುವಂತಹ ಭಾಗಗಳು ಇಲ್ಲಿಯೇ ಹೆಚ್ಚಾಗಿ ಕಂಡು ಬರುತ್ತದೆ. ವಿಜಯನಗರ ಅರಸರ ಶಾಸನಗಳಲ್ಲಿ ಬಿರುದನ್ನು ಉಲ್ಲೇಖಿಸುವಾಗ ಕನ್ನಡ ಶಬ್ದಗಳನ್ನು ಬಳಸುತ್ತಿದ್ದರು. ಉದಾ– ಅಂತೆಂಬವರ ಗಂಡ, ಮೂರು ರಾಯರ ಗಂಡ.

ಹೊಯ್ಸಳರ ಕಾಲದ ಶಾಸನಗಳಲ್ಲಿ ಬಿರುದನ್ನು ಹೇಳುವ ಸಂದರ್ಭದಲ್ಲಿ ಸಂಸ್ಕೃತ ಶಬ್ದಗಳನ್ನೇ ಬಳಸುತ್ತಿದ್ದರು, ಆದರೆ ಕೊನೆಯಲ್ಲಿ ನುಂ ಪ್ರತ್ಯಯ ಸೇರಿಸುತ್ತಿದ್ದರು. ಉದಾ– ಚೋಳ ಕಾಳಾನಳನುಂ

ಆರನೆಯ ವಿಕ್ರಮಾದಿತ್ಯನ ಕೆಲವು ಬಿರುದುಗಳು ಈ ರೀತಿಯಾಗಿದೆ– ನಿತ್ಯಭೂಮಿ ದಾನ ಲೋಲ, ನಿತ್ಯ ಶಾಸನ ಲೇಖನ ಲೋಲ ಇತ್ಯಾದಿ. ವಂಶಾವಳಿಯ ಭಾಗವು ಐತಿಹಾಸಿಕವಾಗಿ ಪ್ರಧಾನವಾದ ಭಾಗವಾಗಿದೆ. ರಾಜರ ಸಂಪೂರ್ಣ ಚರಿತ್ರೆಯನ್ನು ಇಲ್ಲಿ ಗಮನಿಸಬಹುದಾಗಿದೆ.

೩) ಕಾಲ.

ದಾನ ಕೊಟ್ಟಂತಹ ಕಾಲವನ್ನು ಹೇಳುವಾಗ ಸಂಸ್ಕೃತ ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ನಿಯಮವನ್ನು ಬಳಸಿದ್ದಾರೆ. ಭಾರತದಲ್ಲಿ ಅಂಕೆಗಳ ಗಣನೆಯು ಬಹಳ ಸ್ವಾರಸ್ಯಕರವೂ, ವೈಶಿಷ್ಟ್ಯ ಪೂರ್ಣವೂ ಆಗಿದೆ. ಸಾಮಾನ್ಯವಾಗಿ ೧ ರಿಂದ ೧೦೦ ರ ತನಕದ ಅಂಕೆಯನ್ನು ಸಾಮಾನ್ಯ ರೀತಿಯಲ್ಲಿ ಬಳಸಿದ್ದಾರೆ. ೧೦೦ ರ ನಂತರದ ಸ್ಥಾನವನ್ನು ಸಂಖ್ಯೆಗಳಿಗೆ ಸೂಚಕವಾದ ಶಬ್ದಗಳನ್ನು ಬಳಸಿ ಹೇಳುತ್ತಿದ್ದರು. ಆಂಗ್ಲರಲ್ಲಿಯೂ ಕೂಡ ಈ ಪದ್ಧತಿ ಬಳಕೆ ಇದೆ. ಇದನ್ನು chronology ಎಂದು ಕರೆಯುತ್ತಾರೆ. ಉದಾ: 'ನೇತ್ರ ವೇದ ಬಾಣೇಂದು ಸಂವತ್ಸರೇ' ಎಂದು ಬಳಸಿದರೆ ಇಲ್ಲಿ ನೇತ್ರವೆಂದರೆ ಕಣ್ಣುಗಳು – ೨, ವೇದಗಳು – ೪ ಬಾಣಗಳು – ೫ ಇಂದು

(ಚಂದ್ರ) – ೧. ಈ ರೀತಿಯಾಗಿ ಗಣನೆ ಮಾಡಿದಾಗ ೨೪೫೧ ಎಂದಾಗುತ್ತದೆ. ಭಾರತೀಯ ಗಣಿತ ಶಾಸ್ತ್ರದಲ್ಲಿ ಅಂಕೆಗಳಿಗೆ ವಾಮ ಗತಿಯನ್ನು ನೀಡಲಾಗಿದೆ. ಜ್ಯೋತಿಷ ಶಾಸ್ತ್ರಕ್ಕೆ ಸಂಬಂಧಿಸಿದ ಗಣಿತ ಭಾಗದಲ್ಲಿ ಇದನ್ನು ಬಹಳ ವಿಶೇಷವಾದ ರೀತಿಯಲ್ಲಿ ಬಳಸಿದ್ದಾರೆ. ಸಿದ್ಧಾಂತ ಶಿರೋಮಣಿ ಗ್ರಂಥವು ಜ್ಯೋತಿರ್ಗಣಿತದ ಪ್ರಧಾನ ಗ್ರಂಥವಾಗಿದೆ. ಈ ಗ್ರಂಥದಲ್ಲಿ ಈ ಪದ್ಧತಿಯ ಬಳಕೆಯನ್ನು ನೋಡಬಹುದಾಗಿದೆ. ಈ ಪದ್ಧತಿಯಂತೆ ಹಿಂದೆ ಹೇಳಿದ ಸಂಖ್ಯೆಯು ೧೫೪೨ ಎಂದಾಗುತ್ತದೆ. ಈ ಪದ್ಧತಿಯೂ ಕೂಡ ಸಂಸ್ಕೃತ ಶಾಸನಗಳಲ್ಲಿ ಸಾಮಾನ್ಯವಾಗಿದೆ. ಸೂರ್ಯ ಅಂದರೆ ೧, ಕಣ್ಣುಗಳು ೨, ಗುಣಗಳು ೩, ವೇದಗಳು ೪ ಈ ರೀತಿಯಾದ ಗಣನೆ ಸಾಮಾನ್ಯವಾಗಿ ಕಂಡುಬರುತ್ತದೆ. ಅದಕ್ಕಿಂತಲೂ ಕಾಗುಣಿತ ಆಧಾರದಲ್ಲಿ ಸೂಚಿಸುವಂತಹ ಕಾಲಗಣನೆಯು ಸ್ವಾರಸ್ಯಕರವಾಗಿರುತ್ತದೆ. ಉದಾ: ಭಾವಾಭಯ ಇಲ್ಲಿ ಕಾಗುಣಿತದ ಪ್ರಕಾರ ಭ ಅಂದರೆ ೪, ವ ಅಂದರೆ ೪, ಭ ಅಂದರೆ ೪ ಮತ್ತು ಯ ಅಂದರೆ ೧ ಒಟ್ಟಿಗೆ ೧೪೪೪ ನೆಯ ವರ್ಷವೆಂದಾಗುತ್ತದೆ. ಇಲ್ಲಿ ಕೆಲವು ಉದಾಹರಣೆಗಳು ಈ ರೀತಿಯಾಗಿವೆ– ಭಾಗ್ಯ ಭಾಗ್ಯ (೧೪೧೪), ಲಕ್ಷ್ಮೀ ಲೋಕ (೧೩೫೩) ಇತ್ಯಾದಿ.

ಮಂಡ್ಯ ತಾಲೂಕಿನ ಒಂದು ಶಾಸನದಲ್ಲಿ **ಲಿಬ್‌ಸಾಖೇ** ಎಂದು ಹೇಳಿ ಕಾಲ ಉಲ್ಲೇಖ ಮಾಡಿ, **ವತ್ಸರೇ ವೇದ ಸಂಖ್ಯೇ** ಎಂದು ಹೇಳಲಾಗಿದೆ ಇದರರ್ಥ ೧೭೩೩ ನೆಯ ಶಕವರ್ಷದ ನಾಲ್ಕನೆಯ ಸಂವತ್ಸರ ಪ್ರಮೋದೂತ ಎಂದರ್ಥ. [೨] ಸಂಸ್ಕೃತದ ಹೆಚ್ಚಿನ ಶಾಸನಗಳಲ್ಲಿ ಶಾಲಿವಾಹನ ಶಕ ವರ್ಷಗಳೇ ಬಳಕೆಯಾಗಿದೆ. ಐಹೊಳೆ ಶಾಸನ, ಕುಕ್ಕೆ ಶಾಸನಗಳಲ್ಲಿ ಕಲಿಯುಗ ವರ್ಷದ ಉಲ್ಲೇಖವಿದೆ. ಚಾಲುಕ್ಯರ ಶಾಸನಗಳಲ್ಲಿ ಚಾಲುಕ್ಯ ವಿಕ್ರಮ ಶಕೆಯ ಬಳಕೆಇದೆ. ಹೆಚ್ಚಾಗಿ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣದಲ್ಲಿ ದಾನವನ್ನು ನೀಡಿದ್ದರು– ಉತ್ಥಾನ ದ್ವಾದಶೀ, ಗೋ ದ್ವಾದಶೀ (ಮಾರ್ಗಶೀರ್ಷ ಕೃಷ್ಣ ಪಕ್ಷ ದ್ವಾದಶೀ), ಪ್ರಥಮ ದ್ವಾದಶೀ, ರಾಮ ನವಮಿ, ಕಪಿಲ ಷಷ್ಠೀ ಇತ್ಯಾದಿ ವಿಶೇಷ ಸಂದರ್ಭದಲ್ಲಿ ದಾನ ನೀಡಲಾಗಿದೆ.

ಬೆಂಗಳೂರು ತಾಲೂಕಿನ ಒಂದು ಶಾಸನದಲ್ಲಿ ಶಾಸನವನ್ನು ಹೊರಡಿಸಿದ ಕಾಲವನ್ನು ಈ ರೀತಿಯಾಗಿ ಹೇಳಲಾಗಿದೆ–

ಮೀನೇ ಶಶಿ ಭೃಗು ಸುತ್, ಗುರು ಸೂರ್ಯ ಪುತ್ರೌ ಕರ್ಕ್ಯಾಂ ಗತೌ ರವಿತು ಮೇಷಗತೇ ಬುಧೇಚ ಸಿಂಹಸ್ಥೇ ಕುಜ ಪ್ರಷ್ಯ ಗುರೋಸ್ತು ವಾರೇ ವಿಜ್ಞಾಪನಂ ಕೃತಮಿದಂ ಶುಭದೇಷು ಲಗ್ನೇ [೩].

(ಚಂದ್ರ ಮತ್ತು ಶುಕ್ರರು ಮೀನ ರಾಶಿಯಲ್ಲಿ, ಗುರು ಮತ್ತು ಶನಿ ಕರ್ಕಾಟಕದಲ್ಲಿ, ರವಿಯು ಮೇಷದಲ್ಲಿ, ಬುಧನು ಸಿಂಹದಲ್ಲಿ, ಕುಜನು ಗುರುವಾರ, ಧನುರ್ಲಗ್ನದಲ್ಲಿ ಈ ವಿಜ್ಞಾಪನೆಯನ್ನು ಮಾಡಲಾಯಿತು).

ಕೆಲವು ಶಾಸನಗಳಲ್ಲಿ ಶಕ, ಸಂವತ್ಸರ, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ, ಯೋಗ ಕರಣ ಮತ್ತು ಲಗ್ನ ಈ ರೀತಿಯಾಗಿ ಎಲ್ಲಾ ವಿವರವನ್ನು ಸ್ಪಷ್ಟವಾಗಿ ನೀಡಿದ್ದಾರೆ.

೪. ಗ್ರಾಮದ ಮಾಹಿತಿ:

ಕಾಲದ ಉಲ್ಲೇಖವಾದ ನಂತರ ದಾನ ಕೊಡುವಂತಹ ಗ್ರಾಮದ ಸ್ಥಳ ಮಾಹಿತಿಯನ್ನು ಕೊಡುತ್ತಾರೆ. ಯಾವ ದೇಶ, ಯಾವ ರಾಜ್ಯ, ಯಾವ ವಿಷಯದಲ್ಲಿದೆಯೆಂದು ತಿಳಿಸಿ, ಆ ಗ್ರಾಮವು ಯಾವ ಯಾವ ಗ್ರಾಮಗಳಿಂದ ಯಾವ ದಿಕ್ಕಿಗೆ ಇದೆಯೆಂದು ಹೆಚ್ಚಾಗಿ ಸಂಸ್ಕೃತದಲ್ಲಿಯೇ ಹೇಳುತ್ತಾರೆ. ಇದರ ನಂತರ ಆ ಗ್ರಾಮದ ವಿಶೇಷತೆಯನ್ನು ತಿಳಿಸುತ್ತಾರೆ.[೧೪]

ಸರ್ವ ಮಾನ್ಯಂ ಚತುಃ ಸೀಮಾಸಂಯುತಂ ಚ ಸಮಂತತಃ ।
ನಿಧಿ ನಿಕ್ಷೇಪ ಪಾಷಾಣ ಸಿದ್ಧ ಸಾಧ್ಯ ಜಲಾನ್ವಿತಂ ।
ಅಕ್ಷಿಣ್ಯಾಗಾಮಿ ಸಂಯುಕ್ತಂ ಏಕ (ಗಣ) ಭೋಗ್ಯ ಸಭೂರುಹಂ ।
ವಾಪೀ ಕೂಪ ತಟಾಕೈಶ್ಚ ಕಚ್ಛರಾಮೈಶ್ಚ ಸಂಯುತಂ ।
ಪುತ್ರ ಪೌತ್ರಾದಿಭಿ ರ್ಭೋಗ್ಯಂ ಕ್ರಮಾದಾಚಂದ್ರಾರ್ಕ ತಾರಕಂ ॥
ದಾನಾಧಮನ ವಿಕ್ರೀತಿ ಯೋಗ್ಯಂ ವಿನಿಮಯೋಚಿತಂ

(ಸರ್ವ ಮಾನ್ಯ – ಎಲ್ಲಾ ವಿಧದ ತೆರಿಗೆಯಿಂದ ವಿಮುಕ್ತಿಯುಳ್ಳದ್ದು, ನಾಲ್ಕು ಸೀಮೆಗಳುಳ್ಳದ್ದೂ, ನಿಧಿ, ನಿಕ್ಷೇಪ (ಖನಿಜ ಸಂಪತ್ತು), ಪಾಷಾಣ (ಬಂಡೆ), ಸಿದ್ಧ, ಸಾಧ್ಯ, ಜಲ, ಅಕ್ಷೀಣ್ಯ ಮತ್ತು ಆಗಾಮಿ ಸಂಯುಕ್ತವೆಂಬ ಎಂಟು ಭೋಗಗಳಿಂದ ಕೂಡಿದುದೂ, ಒಬ್ಬನೇ ಭೋಗಿಸಲರ್ಹವಾದುದೂ, ಒಳ್ಳೆಯ ಮರಗಳಿಂದ ಕೂಡಿದುದೂ, ಬಾವಿ, ಕೆರೆ, ಕಾಲುವೆ, ಸರೋವರ ಮತ್ತು ಉಪವನಗಳಿಂದ ಕೂಡಿದುದೂ, ಚಂದ್ರ, ಸೂರ್ಯ ತಾರೆಗಳಿರುವ ತನಕ ಪುತ್ರ ಪೌತ್ರರಿಂದ ಭೋಗಿಸಲರ್ಹವಾದುದೂ, ದಾನಮಾಡಲು, ಮಾರಲು ವಿನಿಮಯ ಮಾಡಿಕೊಳ್ಳಲು ಅರ್ಹವಾದುದು.)

ಇದು ಅಗ್ರಹಾರಗಳ ಸಾಮಾನ್ಯ ಸ್ವರೂಪವನ್ನು ತಿಳಿಸಿದಂತಾಗುತ್ತದೆ. ಅಗ್ರಹಾರಕ್ಕೆ ಸಂಬಂಧ ಪಟ್ಟಂತೆ ವಿಶೇಷ ವಿಚಾರಗಳೂ ಕಂಡು ಬರುತ್ತವೆ. ಅದು ಈ ರೀತಿಯಾಗಿದೆ–

ಏವಮಯಂ ಚತುರಾಘಾಟೇನೋಪಲಕ್ಷಿತಃ ಸೋದ್ರಂಗ ಸ್ಸಪರಿಕರಃ ಸದಂಡ ದಶಾಪರಾಧಃ ಸಭೂತಾಪಾತ್ತ ಪ್ರತ್ಯಯಃ ಸೋತ್ಪಧ್ಯಮಾನ ವಿಷ್ಟಕಃ ಸಧಾನ್ಯಹಿರಣ್ಯಾಧೇಯಃ ಅಚಾತಭಟ ಪ್ರವೇಶ್ಯಃ ಸರ್ವ್ವರಾಜಕೀಯಾನಾಮಹಸ್ತ ಪ್ರಕ್ಷೇಪಣೀಯಃ ಪೂರ್ವ ಪ್ರತ್ಯವ ಬ್ರಹ್ಮ ದೇವದಾಯ ರಹಿತೋಭ್ಯಂತರ ಸಿದ್ಧಾಯ [೧೫]

(ಈ ರೀತಿಯಾಗಿ ೪ ಸೀಮೆಗಳಿಂದ ಕೂಡಿದುದು, ಎಲ್ಲಾ ವಿಧದ ಪರಿಕರಗಳಿಂದ ಕೂಡಿದುದು, ಹತ್ತು ವಿಧದ ಅಪರಾಧಗಳಿಂದ ಕೂಡಿದುದು, ಧಾನ್ಯ ಮತ್ತು ಬಂಗಾರದಂತಹ ಆದಾಯವನ್ನುಂಟು ಮಾಡುವ, ರಾಜರ ಸೈನಿಕರಿಂದ ಪ್ರವೇಶಿಸಲಾಗದಂತಹ ಎಲ್ಲಾ ರೀತಿಯ ರಾಜಕೀಯ ವ್ಯಕ್ತಿಗಳಿಂದ ಹಸ್ತಕ್ಷೇಪ ಮಾಡಲಾಗದಂತಹ ಹಿಂದೆ ಯಾವುದೇ ರೀತಿಯಾಗಿ ಬ್ರಹ್ಮದೇಯ ರೂಪದಲ್ಲಿ ದಾನ ನೀಡದೇ ಇರುವಂತಹ....)

ಈ ರೀತಿಯಾಗಿ ಅಗ್ರಹಾರಗಳ ವಿಶೇಷತೆಯನ್ನು ಹೇಳುತ್ತಾರೆ.

೫. ದಾನವನ್ನು ಸ್ವೀಕರಿಸಿದವರ ಮಾಹಿತಿ :

ರಾಜನು ತನ್ನ ತಂದೆ ತಾಯಿಗಳ ಶ್ರೇಯಸ್ಸಿಗಾಗಿ ಮತ್ತು ತನ್ನ ಶ್ರೇಯಸ್ಸಿಗಾಗಿ ದಾನ ಕೊಡುವಂತಹ ಸಂದರ್ಭಗಳಿರುತ್ತವೆ. ಹೆಚ್ಚಾಗಿ ರಾಜನು ಸ್ವಪ್ರೇರಣೆಯಿಂದ ದಾನ ನೀಡಿದರೆ, ಕೆಲವೊಮ್ಮೆ ಮಂತ್ರಿಗಳ, ಇತರ ಆಸ್ಥಾನ ವಿದ್ವಾಂಸರ ವಿಜ್ಞಪ್ತಿಯನುಸಾರವಾಗಿ ದಾನವನ್ನು ನೀಡಿರುವನು. ಮುಂದಿನ ಭಾಗದಲ್ಲಿ ದಾನವನ್ನು ಸ್ವೀಕರಿಸಿದವರ ಹೆಸರು, ಅವರ ತಾತನ ಹೆಸರು, ತಂದೆಯ ಹೆಸರು, ಗೋತ್ರ, ಸೂತ್ರ,ಶಾಖೆ, ಊರಿನ ಹೆಸರು ಮತ್ತು ವೃತ್ತಿಯ ಪ್ರಮಾಣಗಳ ಉಲ್ಲೇಖವಿರುತ್ತದೆ. ಈ ಭಾಗ ಕೆಲವು ಬಾರಿ ಗದ್ಯಾತ್ಮಕವಾಗಿಯೂ, ಪದ್ಯಾತ್ಮಕವಾಗಿಯೂ ಕಂಡುಬರುತ್ತದೆ. ಈ ಭಾಗದಲ್ಲಿ ದಾನ ಸ್ವೀಕರಿಸಿದವರ ವಿಶೇಷತೆಯಿರುತ್ತದೆ. ಉದಾ– ಅವಧಾನಿ, ಅಧ್ವರ್ಯು, ಕ್ರಮಪಾಠಕ, ವಾನಪ್ರಸ್ಥಾಶ್ರಮೀ ಇತ್ಯಾದಿ. ಈ ಭಾಗವು ಐತಿಹಾಸಿಕವಾಗಿ ಬಹಳ ಮಹತ್ವವನ್ನು ಪಡೆಯುತ್ತದೆ. ಏಕೆಂದರೆ ಕೃಷ್ಣದೇವರಾಯನ ಕಮಲಾಪುರ ಶಾಸನವು [೧೮] ವ್ಯಾಸತೀರ್ಥರನ್ನೂ, ಪುರಂದರದಾಸರನ್ನೂ ಅವರಿಬ್ಬರ ಪುತ್ರರಾದ ಲಕ್ಷ್ಮಣದಾಸ, ಹೆಬಣದಾಸರನ್ನು ಮತ್ತು ಶ್ರೀ ನರಸಿಂಹದಾಸರನ್ನು ಉಲ್ಲೇಖಿಸಿದೆ. ಶೃಂಗೇರಿಯ ಶಾಸನದಲ್ಲಿ ಶೃಂಗೇರಿಯ ಸ್ವಾಮೀಜಿಗಳನ್ನು ವಿದ್ಯಾರಣ್ಯ ತೀರ್ಥರ ಉಲ್ಲೇಖವನ್ನು ನೀಡಿದೆ.

೬. ದಾನ ನೀಡಿದ ಗ್ರಾಮದ ಸೀಮೆಗಳ ಮಾಹಿತಿ :

ನೀಡಿದ ಗ್ರಾಮವು ಅದರ ಸೀಮೆಯು ಎಲ್ಲಿಯ ತನಕವಿದೆಯೆಂದು ತಿಳಿಯಲು ಈ ಭಾಗವನ್ನು ಹೇಳುತ್ತಿದ್ದರು. ವಿಜಯನಗರ ಅರಸರ ಶಾಸನಗಳಲ್ಲಿ ಈ ಭಾಗವು ಹೆಚ್ಚಾಗಿ ಕನ್ನಡದಲ್ಲಿದೆ. ಕರ್ನಾಟ ಭಾಷೆಯಾ ಅಥವಾ ದೇಶ ಭಾಷೆಯಾ ಲಿಖ್ಯತೇ ಎಂದು ಹೇಳಿ ತಿಳಿಸಲಾಗುತ್ತದೆ. ಸೀಮೆಗಳ ಪರಿಧಿಯನ್ನು ಗುರುತಿಸಲು ಗಡಿಕಲ್ಲು ಅಥವಾ ವಾಮನ ಮುದ್ರಾಂಕಿತ ಶಿಲೆಯನ್ನು ಬಳಸುತ್ತಿದ್ದರು.

ಒಂದು ಸ್ಥಳದ ಇತಿಹಾಸವನ್ನು ಅದರ ಪ್ರಾಚೀನ ಹೆಸರನ್ನು ತಿಳಿಯಲು ಈ ಭಾಗವು ಬಹಳ ಸಹಕಾರಿಯಾಗಿದೆ. ಕೆಲವು ಗ್ರಾಮಗಳಿಗೆ ಸಂಸ್ಕೃತ ಮೂಲದ ಹೆಸರಿದ್ದು ಅದು ಈಗ ಕನ್ನಡಕ್ಕೆ ಪರಿವರ್ತಿತವಾಗಿರುತ್ತದೆ. ವಿಜಯನಗರದ ಅರಸರು ತಾವು ನೀಡಿದಂತಹ ಗ್ರಾಮಗಳ ಹೆಸರಿಗೆ ತಮ್ಮ ವಂಶದವರ ಹೆಸರನ್ನು ಪುನರ್ನಾಮಕರಣ ಮಾಡಿದುದರ ಉಲ್ಲೇಖವೂ ಸಿಗುತ್ತದೆ.

೭. ಶಾಪಾಶಯ :

ಇದರ ನಂತರದ ಭಾಗ ಶಾಪಾಶಯವಿರುತ್ತದೆ. ಇದು ರಾಜರು ನೀಡಿದ ದಾನವನ್ನು ಯಾರೂ ಹಾಳು ಮಾಡಬಾರದು ಅದನ್ನು ರಕ್ಷಿಸಿಕೊಂಡು ಹೋಗಬೇಕೆಂಬ ಕಿವಿ ಮಾತನ್ನು ಹೇಳುತ್ತದೆ. ಈ ಭಾಗವನ್ನು ಸುಭಾಷಿತ ಭಾಗವೆಂದು ಕರೆಯಬಹುದು. ಈ ಭಾಗದಲ್ಲಿ ಹಲವಾರು ಹಿತ ವಚನಗಳನ್ನು,ಎಚ್ಚರಿಕೆಯ ಮಾತುಗಳನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ. ಹೆಚ್ಚಾಗಿ ಮನುಸ್ಮೃತಿಯ ಶ್ಲೋಕಗಳನ್ನು ಬಳಸಲಾಗಿದೆ. ಕೆಲವು ವಿಶೇಷ ಶಾಪಾಶಯಗಳು ಈ ರೀತಿಯಾಗಿದೆ.

ಆದಿತ್ಯ ಚಂದ್ರಾವನಿಲೋನಲಶ್ಚದ್ಯೌರ್ಭೂಮಿರಾಪೋ ಹೃದಯಂ ಯಮಶ್ಚ ।
ಅಹಶ್ಚರಾತ್ರಿಶ್ಚ ಉಭೇಚ ಸಂಧ್ಯೇಧರ್ಮಶ್ಚ ಜಾನಾತಿ ನರಸ್ಯ ವೃತಂ ॥

(ಆದಿತ್ಯ, ಚಂದ್ರ, ಅನಿಲ, ಅನಲ(ಬೆಂಕಿ), ಆಕಾಶ, ಭೂಮಿ, ಜಲ, ಹೃದಯ, ಯಮ, ಅಹೋರಾತ್ರಿ, ಎರಡು ಸಂಧ್ಯಾ ಕಾಲಗಳು, ಮತ್ತು ಧರ್ಮ ಇವು ಮನುಷ್ಯರ ದಿನಚರ್ಯೆಯನ್ನು ತಿಳಿದಿರುತ್ತವೆ.)

ಅಶ್ವಮೇಧ ಸಹಸ್ರಂ ಚ ಸತ್ಯಂ ಚ ತುಲಯಾ ಧೃತಂ ।
ಅಶ್ವಮೇಧ ಸಹಸ್ರಾತ್ತು ಸತ್ಯ ಮೇವಾತಿರಿಚ್ಯತೇ ॥ [೧೬].

(ಸಾವಿರ ಅಶ್ವಮೇಧಗಳು(ಯಾಗದ ಫಲ) ಮತ್ತು ಸತ್ಯವನ್ನು ಒಂದು ತಕ್ಕಡಿಯಲ್ಲಿಟ್ಟರೆ ಸಾವಿರ ಅಶ್ವಮೇಧಗಳಿಗಿಂತ ಸತ್ಯವೇ ಮೀರಿ ನಿಲ್ಲುವುದು)

೮. ಶಾಸನ ಲೇಖಕರ ಮಾಹಿತಿ ಮತ್ತು ಸಮಾಪ್ತಿ

ಶಾಪಾಶಯದ ಭಾಗದ ನಂತರ ಶಾಸನವನ್ನು ರಚಿಸಿದವರ, ಬರೆದವರ ಮತ್ತು ಕೊರೆದವರ ಉಲ್ಲೇಖವಿರುತ್ತದೆ. ವಿಜಯನಗರ ಅರಸರ ಶಾಸನಗಳಲ್ಲಿ ಶಾಪಾಶಯಕ್ಕಿಂತ ಮೊದಲು ಶಾಸನ ಲೇಖಕನ ಪರಿಚಯವಿರುತ್ತದೆ. ಉಳಿದವರ ಶಾಸನಗಳಲ್ಲಿ ಕೊನೆಯಲ್ಲಿಯೇ ಅವರ ಪರಿಚಯವಿರುತ್ತದೆ.

ವಿಜಯನಗರದ ಶಾಸನಗಳ ಲೇಖಕನು ಒಂದೇ ವಂಶದವರಾಗಿದ್ದರು.

ಕೃಷ್ಣದೇವ ಮಹಾರಾಯಶಾಸನೇನ ಸಭಾಪತಿಃ ।

ಉಕ್ತವಾನ್ ಮೃದು ಸಂದರ್ಭಂ ತದಿದಂ ತಾಮ್ರ ಶಾಸನಂ ।

ಮಲ್ಲಣಾಚಾರ್ಯ ವರ್ಯ ಶ್ರೀ ವೀರಣಚಾರ್ಯ ನಂದನಃ ।

ಆಕಲ್ಪ ಮಶ್ನುತೇತ್ರೈರಂ ವೃತ್ತಿಂ ಶಾಸನ ಲೇಖಕಃ ॥

ಇಲ್ಲಿ ಕೃಷ್ಣದೇವಮಹಾರಾಯರ ಅಪ್ಪಣೆಯ ಮೇರೆಗೆ ಸಭಾಪತಿಯ ಶಾಸನವನ್ನು ರಚಿಸಿರುವನು, ವೀರಣಾಚಾರ್ಯನ ಪುತ್ರನಾದ ಮಲ್ಲಣಾಚಾರ್ಯನು ಈ ಶಾಸನವನ್ನು ಕೆತ್ತಿರುವನು. ವಿಜಯನಗರದ ಹೆಚ್ಚಿನ ಶಾಸನಗಳ ರಚನೆಯಿತ್ರ ಸಭಾಪತಿಯಾಗಿರುವನು. ಗಂಗರ ಶಾಸನಗಳನ್ನು (**ಸರ್ವಕಲಾಧಾರ ಭೂತ ಚಿತ್ರ ಕಲಾಭಿಜ್ಞೇನ ವಿಶ್ವಕರ್ಮ ಆಚಾರ್ಯೇಣೇದಂ ಶಾಸನಂ ಲಿಖಿತಂ**) ಎಲ್ಲಾ ಕಲೆಗಳಿಗೆ ಆಧಾರಭೂತನೂ, ಚಿತ್ರಕಲಾಭಿಜ್ಞನೂ ಆದ ವಿಶ್ವಕರ್ಮಾಚಾರ್ಯನಿಂದ ಈ ಶಾಸನ ಬರೆಯಲಾಗಿದೆ.

ಸಂಸ್ಕೃತ ಶಾಸನಗಳು ಸ್ವರೂಪದಲ್ಲಿ ಕನ್ನಡ ಶಾಸನಗಳಿಗಿಂತ ಹೆಚ್ಚಾಗಿ ಭಿನ್ನವಾಗಿ ಕಂಡು ಬರುವುದಿಲ್ಲ ಆದರೂ ಇಲ್ಲಿ ವಿಶೇಷತೆಯನ್ನು ಹೇಳಲು ಪ್ರಯತ್ನಿಸಲಾಗಿದೆ.

ಸಂಸ್ಕೃತ ಶಾಸನಗಳ ಪ್ರಾಮುಖ್ಯತೆ.

ಕರ್ನಾಟಕದಲ್ಲಿ ಕನ್ನಡ ಶಾಸನಗಳಂತೆ ಸಂಸ್ಕೃತ ಶಾಸನಗಳೂ ಕೂಡ ಅದರದ್ದೇ ಆದ ಮಹತ್ವವನ್ನು ಪಡೆದಿದೆ. ಶಾಸನಗಳು ಐತಿಹಾಸಿಕ ಮಾತ್ರವಲ್ಲದೇ ಇತರ ರೀತಿಯಿಂದಲೂ ಹಲವು ಮಹತ್ವವನ್ನು ಪಡೆದಿದೆ. ಇಂತಹ ಮಹತ್ವಗಳನ್ನು ಈ ರೀತಿಯಾಗಿ ವಿಭಾಗಿಸಬಹುದು

೧. ಧಾರ್ಮಿಕ ಮಹತ್ವ

೨. ಸಾಹಿತ್ಯಿಕ ಮಹತ್ವ

೩. ಭಾಷಿಕ ಮಹತ್ವ

೧. **ಧಾರ್ಮಿಕ ಮಹತ್ವ** : ಕರ್ನಾಟಕ ರಾಜ್ಯವು ಎಲ್ಲಾ ಧರ್ಮಗಳನ್ನು ಸಮಾನ ಭಾವನೆಯಿಂದ ಕಾಣುವಂತಹ ಸಮನ್ವತೆಯ ನಾಡಾಗಿದೆ. ಇಂತಹ ಧಾರ್ಮಿಕ ಸಮನ್ವಯತೆಯನ್ನು ನಾವು ಶಾಸನಗಳಲ್ಲೂ ಕಾಣಬಹುದಾಗಿದೆ. ಆಯಾಯ ರಾಜ ಮನೆತನಗಳಿಗೆ ಸಂಬಂಧಿಸಿದ ಶಾಸನಗಳಲ್ಲಿ ಆ ರಾಜವಂಶದ ಅಭಿಮಾನಿ ದೇವರ ಸ್ತುತಿಯು ಕಂಡು ಬರುವುದು ಸಾಮಾನ್ಯವಾಗಿದೆ. ಆದರೂ ವಿಷ್ಣವು ಸರ್ವದಾ ಸ್ತುತ್ಯರ್ಹ ದೇವನಾಗಿದ್ದಾನೆ. ವಿಷ್ಣುವಿನ ಮೂರನೆಯ ಅವತಾರ ವರಾಹವು ಎಲ್ಲಾ ರಾಜವಂಶಗಳಿಗೆ ಪ್ರೇರಣೆಯನ್ನು ನೀಡಿದೆ. ವಿಷ್ಣುವು ಯಾವ ರೀತಿಯಾಗಿ ಜಗದೋದ್ಧಾರವನ್ನು ಮಾಡಿರುವನೋ ಅದೇ ರೀತಿಯಾಗಿ ತಾವು ಭೂಮಿಯನ್ನು ಶತ್ರುಗಳಿಂದ ರಕ್ಷಿಸಬೇಕೆಂಬ ಪ್ರಬಲ ಪ್ರೇರಣೆಯು ಉಂಟಾಗಿರಬೇಕು.

ಹಲವಾರು ಶಾಸನಗಳಲ್ಲಿ ಶಂಭು ಮತ್ತು ವಿಷ್ಣು ಇಬ್ಬರೂ ಪ್ರಾರ್ಥಿಸಲ್ಪಟ್ಟಿದ್ದಾರೆ. ಅಲ್ಲಿ ಶೈವ ಮತ್ತು ವೈಷ್ಣವನೆಂಬ ಬೇಧಭಾವ ಇರಲಿಲ್ಲ. ಸಂಸ್ಕೃತ ಶಾಸನಗಳಲ್ಲಿ ಶೈವ, ವೈಷ್ಣವ, ಜೈನರ ಅಷ್ಟೇ ಏಕೆ ಬುದ್ಧರಿಗೆ ಸಂಬಂಧಿಸಿದ ವಿಷಯಗಳು ದೊರಕುತ್ತವೆ. ಜೈನ ಸಂಸ್ಕೃತ ಶಾಸನಗಳ ಬಗ್ಗೆ ಪ್ರತ್ಯೇಕವಾಗಿ ವಿಶೇಷ ಅಧ್ಯಯನವನ್ನು ನಡೆಸಬಹುದಾಗಿದೆ. ಜೈನರು ಸಂಸ್ಕೃತ ಭಾಷೆಯನ್ನು ಬಹುವಾಗಿ ಅವಲಂಬಿಸಿದ್ದಾರೆ. ಸಂಸ್ಕೃತ ಮಾತ್ರವಲ್ಲದೆ ಕನ್ನಡದಲ್ಲೂ ಹಲವಾರು ಜೈನ ಕವಿಗಳಿಂದ ರಚಿತವಾದ ಗ್ರಂಥಗಳು ದೊರೆಯುತ್ತವೆ. ಈ ಶಾಸನಗಳಿಂದ ಹಿಂದೂ ಮತ್ತು ಜೈನ ಧರ್ಮದ ಬೆಳವಣಿಗೆಯನ್ನು ಅಧ್ಯಯನ ಮಾಡಬಹುದಾಗಿದೆ.

ಬೇಲೂರಿನ ಒಂದು ಶಾಸನವು [೧೮] ಧಾರ್ಮಿಕ ಸಾಮರಸ್ಯವನ್ನು ಸ್ಪಷ್ಟವಾಗಿ ತೋರಿಸುತ್ತಿದೆ –

ಯಂ ಶೈವಾಸ್ಸಮುಪಾಸತೇ ಶವ ಇತಿ ಬ್ರಹ್ಮೇತಿ ವೇದಾಂತಿನೋ ।
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯ್ಯಾಯಿಕಾಃ ।
ಅರ್ಹನ್ನಿತ್ಯಥಃ ಜೈನ ಶಾಸನ ರತಾಃ ಕರ್ಮೇತಿ ಮೀಮಾಂಸಕಾಃ ।
ಸೋಯಂ ವೋ ವಿದಧಾತು ವಾಂಛಿತಫಲಂ ಶ್ರೀಕೇಶವೇಶಸ್ಸದಾ ॥

(ಶೈವರು ಯಾರನ್ನು ಶಿವ ಎಂದು ಉಪಾಸಿಸುವರೋ, ವೇದಾಂತಿಗಳು ಬ್ರಹ್ಮ ಎಂದು, ಪ್ರಮಾಣ ಪಟುಗಳಾದ ಬೌದ್ಧರು ಯಾರನು ಬುದ್ಧ ಎಂದು, ನೈಯಾಯಿಕರು ಯಾರನ್ನು ಕರ್ಮ ಎಂದು, ಜೈನ ಸಿದ್ಧಾಂತ ರತರಾದವರು ಯಾರನ್ನು ಜಿನನೆಂದು, ಮೀಮಾಂಸಕರು ಯಾರನ್ನು ಕರ್ಮ ಎಂದು ಕರೆಯುವರೋ ಅಂತಹ ಕೇಶವನು ನಿಮಗೆ ಅಭೀಷ್ಟ ಫಲವನ್ನು ಕೊಡಲಿ)

ಈ ಶ್ಲೋಕದಲ್ಲಿ ಎಲ್ಲಾ ಧರ್ಮದ ಐಕ್ಯತೆಯನ್ನು ತೋರಿಸಲಾಗಿದೆ.

ತುಘಲಕ್ ಸಾಮ್ರಾಜ್ಯದ ರಾಜ ಸುಲ್ತಾನ್ ಮೊಹಮ್ಮದ್ ಷಾಹನ ಕಾಲದ ಒಂದು ಶಾಸನ ದೊರಕಿದೆ. ಸಂಪೂರ್ಣ ಶಾಸನವು ಸಂಸ್ಕೃತ ಭಾಷೆ ಮತ್ತು ನಾಗರೀ ಲಿಪಿಯಲ್ಲಿದ್ದು ಮುಸ್ಲಿಂ ದೊರೆಗಳೂ ಕೂಡ ಸಂಸ್ಕೃತ ಭಾಷೆಯನ್ನು ಪೋಷಿಸುತ್ತಿದ್ದರು ಎಂಬ ವಿಚಾರವು ನಮಗೆ ತಿಳಿಯುತ್ತದೆ. [೧೯]

೨. **ಸಾಹಿತ್ಯಿಕ ಮಹತ್ವ :** ಸಂಸ್ಕೃತ ಶಾಸನಗಳು ಕರ್ನಾಟಕದ ಸಂಸ್ಕೃತ ಸಾಹಿತ್ಯಕ್ಕೆ ಮಾತ್ರವಲ್ಲದೇ, ಭಾರತೀಯ ಸಂಸ್ಕೃತ ಸಾಹಿತ್ಯ ಕ್ಷೇತ್ರಕ್ಕೂ ಅಪಾರ ಕೊಡುಗೆಯನ್ನು ನೀಡಿದೆ. ಸಂಸ್ಕೃತ ಶಾಸನಗಳಲ್ಲಿ ಪ್ರಯುಕ್ತವಾದ ಸಾಹಿತ್ಯ ಪ್ರಕಾರವು ಸಾಹಿತ್ಯ ಕೃತಿಗಳಲ್ಲಿರುವಷ್ಟು ಪ್ರೌಢವಾಗಿರದಿದ್ದರೂ

ಹೊಸ ಸಾಹಿತ್ಯ ಪ್ರಪಂಚವನ್ನು ಸೃಷ್ಟಿಸಲು ಶಕ್ತವಾಗಿದೆ. ಐಹೊಳೆ ಶಾಸನ, ಮಹಾಕೂಟ ಸ್ತಂಭ ಶಾಸನಗಳು ಪ್ರೌಢವಾದ ಕಾವ್ಯವನ್ನು ಹೊಂದಿದೆ, ಗಂಗರ ಶಾಸನಗಳು ಪ್ರೌಢವಾದ ಗದ್ಯ ಸಾಹಿತ್ಯವನ್ನು ಹೊಂದಿದೆ. ವಿಜಯನಗರ ಅರಸರ ಕಾಲದ ಸಂಸ್ಕೃತ ಶಾಸನಗಳು ಸರಳ ಭಾಷೆಯನ್ನು ಹೊಂದಿದೆ. ಸಂಸ್ಕೃತ ಸಾಹಿತ್ಯದ ಮೂರನೆಯ ಪ್ರಕಾರವಾದ ಚಂಪೂ ಪ್ರಕಾರದಲ್ಲೂ ಹಲವಾರು ಶಾಸನಗಳು ಕಂಡು ಬರುತ್ತವೆ. ಐಹೊಳೆಯ ಶಾಸನದಲ್ಲಿ ೧೫ ಛಂದಸ್ಸುಗಳನ್ನು ಬಳಸಲಾಗಿದೆ. ಶಬ್ದಾಲಂಕಾರಗಳ ಪ್ರಯೋಗಗಳು ಕಂಡು ಬರುತ್ತವೆ. ಒಂದೇಶಬ್ದವನ್ನು ಎರಡು ಅರ್ಥಗಳಲ್ಲಿ ಬಳಸಿರುವುದನ್ನು ಹಲವಾರು ಶಾಸನಗಳಲ್ಲಿ ಕಾಣಬಹುದಾಗಿದೆ. ಮುಖ್ಯವಾಗಿ ದಾನವನ್ನು ಸ್ವೀಕರಿಸಿದ ದಾನಿಗಳ ಹೆಸರು, ಗೋತ್ರಾದಿಗಳನ್ನು, ಗ್ರಾಮದ ಸೀಮಾದಿಗಳನ್ನು ಛಂದಸ್ಸಿಗೆ ಚ್ಯುತಿ ಬರದಂತೆ ಕಟ್ಟಲಾಗಿದೆ. ಹಂಪಿಯ ಒಂದು ಶಾಸನದಲ್ಲಿ ವಿಜಯನಗರವನ್ನು ಸುಂದರವಾಗಿ ವರ್ಣಿಸಲಾಗಿದೆ.


ರವಿಕೀರ್ತಿಯ ಐಹೊಳೆ ಶಾಸನವು ಭಾರತದ ಸುಪ್ರಸಿದ್ಧ ಕವಿಗಳಾದ ಕಾಳಿದಾಸ, ಭಾರವಿಯರ ಉಲ್ಲೇಖ ಮಾಡುತ್ತದೆ. ಇದು ಇವರಿಬ್ಬರ ಕಾಲವನ್ನು ನಿರ್ಧರಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸಿದೆ. ಗಂಗ ಅರಸರ ದುರ್ವಿನೀತನು ಭಾರವಿಯ ಕಿರಾತಾರ್ಜುನೀಯದ ೧೫ನೆಯ ಸರ್ಗಕ್ಕೆ ಟೀಕೆಯನ್ನು ಬರೆದ ಉಲ್ಲೇಖ ಶಾಸನಗಳಲ್ಲಿ ಬರುತ್ತವೆ. ಇದು ಭಾರವಿಯ ಕಾಲ ನಿರ್ಧಾರ ಮಾಡಲು ಸಹಾಯವಾಗಿದೆ. ಮೈಸೂರಿನ ಶಾಸನವು [೨೦] ಮೈಸೂರಿನ ಅರಸರ ವಂಶಾವಳಿಯನ್ನು (ಕೃಷ್ಣರಾಜೇಂದ್ರ ಕಂಠೀರವ) ಸುಂದರವಾಗಿ ಚಿತ್ರಿಸಿದೆ. ಇದೇ ರೀತಿಯಾಗಿ ಕರ್ನಾಟಕದ ಎಲ್ಲಾ ರಾಜ ಮನೆತನಗಳ ವಂಶಾವಳಿಯನ್ನು ಸುಂದರವಾಗಿ ಕಂಡು ಬರುವುದು ಸಂಸ್ಕೃತ ಶಾಸನಗಳಲ್ಲಿ. ಇಂತಹ ಶಾಸನಗಳು ಸಾಹಿತ್ಯಿಕವಾಗಿಯೂ, ಐತಿಹಾಸಿಕವಾಗಿಯೂ ಬಹಳ ಮಹತ್ವ ಪಡೆದಿದೆ. ಸಾಲಿಗ್ರಾಮದಲ್ಲಿ ದೊರಕಿದ ಗಂಗ ಅರಸ ರಾಚಮಲ್ಲನ ಕಾಲದ ಶಾಸನದಲ್ಲಿ ಶಿವ ಮಾರನು ಫಣಿಸುತ ಮತದಲ್ಲಿ ಪಾರಂಗತನೂ, ಸಾಮಜ ತಂತ್ರದಲ್ಲಿ, ಅಶ್ವ ಶಾಸ್ತ್ರ ಧನುರ್ವಿದ್ಯೆ ಯಲ್ಲಿ ಪಾರಂಗತನೂ, ತಾನು ಸ್ವತಃ ಗಜದಂತ ವೆಂಬ ಗ್ರಂಥದ ಕರ್ತೃವೆಂಬಂತಹ ವಿಷಯಗಳು ದೊರಕುತ್ತವೆ. ಕುಕ್ಕೆ ಸುಬ್ರಮ್ಹಣ್ಯ ಶಾಸನವು ಅಳತೆ, ಪ್ರಮಾಣಗಳಿಗೆ ಸ್ಪಷ್ಟವಾದ ಮಾಹಿತಿಯನ್ನು ನೀಡುತ್ತದೆ.

ಹೊಯ್ಸಳೇಶ್ವರ ದೇವಾಲಯದ ಬಾಗಿಲಿನಲ್ಲಿ ಒಂದು ಶ್ಲೋಕ ಶಾಸನವಿದೆ. ಇದು ಒಂದು ಚಿತ್ರ ಕಾವ್ಯವಾಗಿದ್ದು ರುದ್ರಟನ ಕಾವ್ಯಾಲಂಕಾರದಲ್ಲಿ ಬರುವಂತಹ ಸಮುದ್ಯಮಕ ವೆಂಬ ಕಾವ್ಯ ಪ್ರಕಾರವಾಗಿದೆ. ಇದು ಗೋಮೂತ್ರಿಕಾ ಬಂಧದಲ್ಲಿದೆ. ಇದನ್ನು ವೈಜನ್ನ ಕವಿಯು ರಚಿಸಿರುವನು. ಈ ಶ್ಲೋಕದ ಎರಡು ಪಾದಗಳು ಒಂದೇ ರೀತಿಯಾಗಿದೆ. ಮೊದಲ ಪಾದದ

ಮೊದಲ ಅಕ್ಷರವು ಎರಡನೆಯ ಅಕ್ಷರದೊಂದಿಗೆ, ಎರಡನೆಯ ಪಾದದ ಮೊದಲ ಅಕ್ಷರವು ಮೊದಲ ಪಾದದ ಎರಡನೆಯ ಅಕ್ಷರದೊಂದಿಗೆ ಜೋಡಿಸಿಕೊಂಡು ಓದಬಹುದಾಗಿದೆ.

ಸಹಿ ಧನಿನಾಂ ಲೋಕೇ ಶಿವೋ ಯಸ್ಯ ಹೃದಿಸ್ಥಿತಃ ।
ಸಹಿ ಧನಿನಾಂ ಲೋಕೇ ಶಿವೋ ಯಸ್ಯ ಹೃದಿಸ್ಥಿತಃ ॥ [೨೧]

(ಯಾರ ಹೃದಯದಲ್ಲಿ ಶಿವನು ಕುಳಿತಿರುವನೋ ಆತನು ಲೋಕದಲ್ಲಿ ಉತ್ತಮನು, ಮತ್ತು ಯಾರು ಲೋಕದಲ್ಲಿ ಉತ್ತಮನೋ ಆತನ ಹೃದಯದಲ್ಲಿ ಶಿವನು ಯಾವಾಗಲೂ ಕುಳಿತಿರುವನು.)



ಈ ರೀತಿಯಾಗಿ ಸಾಹಿತ್ಯಿಕವಾಗಿಯೂ ಶಾಸನಗಳು ಅತಿ ಮಹತ್ವ ಪಡೆದಿದೆ. ಇನ್ನೂ ಇಂತಹ ವಿಚರಗಳನ್ನು ಸಾಂದರ್ಭಿಕವಾಗಿ ಮುಂದೆ ತಿಳಿಸಲಾಗುವುದು.

೨. **ಭಾಷಿಕ ಮಹತ್ವ :** ಸಂಸ್ಕೃತ ಶಾಸನಗಳು ಕರ್ನಾಟಕದಲ್ಲಿ ಭಾಷಿಕವಾಗಿ ಗಮನಿಸಿದರೆ ಭಾಷೆಗಳಿಗೂ ಪ್ರಭಾವ ಬೀರಿದೆ. ಕನ್ನಡ ಭಾಷೆಯು ಶಾಸನಗಳಲ್ಲದೆ ಇತರ ಸಾಹಿತ್ಯ ಕೃತಿಗಳಲ್ಲಿಯು ಸ್ತರಗಳನ್ನು ಹೊಂದಿದೆ. ಸಂಸ್ಕೃತ ಭಾಷೆಯಲ್ಲಿ ಯಾವುದೇ ಭಾಷಿಕ ಬದಲಾವಣೆ ಆಗಿಲ್ಲ. ಪ್ರಾರಂಭದಿಂದಲೂ ಸಂಸ್ಕೃತ ಒಂದೇ ರೀತಿಯಾಗಿದೆ. ಕಾವ್ಯ ಶೈಲಿ ಮಾತ್ರ ಬದಲಾಗಿರಬಹುದು. ಸಂಸ್ಕೃತ ಭಾಷೆಯ ಪ್ರಭಾವದಿಂದ ಕನ್ನಡ ಭಾಷೆಯು ಹಲವಾರು ಏರಿಳಿಕೆಯನ್ನು ಕಂಡು ಬಂದಿದೆ. ಇದನ್ನು ನಾವು ಸಂಸ್ಕೃತ ಭಾಷೆಯಲ್ಲಿ ಕಾಣಬಹುದಾಗಿದೆ. ಸಂಸ್ಕೃತ ಭಾಷೆಯ ಪ್ರಭಾವದಿಂದ ಕನ್ನಡದಲ್ಲೂ ಪ್ರೌಢವಾದ ಶಾಸನಗಳು ಉಂಟಾಗಿವೆ. ಮಣಿಪ್ರವಾಳ ಕಾವ್ಯದಂತೆ ಕನ್ನಡ ಶಾಸನಗಳಲ್ಲಿ ಸಂಸ್ಕೃತವನ್ನೂ ಬಳಸಿದ್ದಾರೆ. ಹಾಗಾಗಿ ಸಂಸ್ಕೃತ ಶಾಸನಗಳ ಜೊತೆಗೆ ಕನ್ನಡ ಭಾಷೆಯ ವಿಕಾಸದ ಹಂತವನ್ನು ತಿಳಿಯ ಬಹುದಾಗಿದೆ

ಸಂಸ್ಕೃತ ಶಾಸನಗಳ ಲಿಪಿ

ಸಂಸ್ಕೃತ ಶಾಸನಗಳಲ್ಲಿ ಲಿಪಿಯ ಅಧ್ಯಯನವನ್ನು ಮಾಡುವುದು ಬಹಳ ವಿಶಾಲವಾದಂತಹ ವಿಷಯವಾಗಿದೆ. ಆದರೆ ಸಾಮಾನ್ಯವಾಗಿ ಸಂಸ್ಕೃತ ಶಾಸನಗಳಲ್ಲಿ ಬಳಕೆಯಾದಂತಹ ಲಿಪಿಯನ್ನು ಇಲ್ಲಿ ಚರ್ಚಿಸಲಾಗುವುದು. ಭಾಷೆ ಮತ್ತು ಲಿಪಿಗೆ ಸಂಬಂಧವಿದ್ದೇ ಇದೆ. ಯಾವುದೇ ಭಾಷೆಯನ್ನು

ಬರಹ ರೂಪಕ್ಕೆ ತರಬೇಕಾದರೆ ಲಿಪಿಯ ಅವಶ್ಯಕತೆ ಇದ್ದೇ ಇದೆ. ಕರ್ನಾಟಕದಲ್ಲಿ ಕನ್ನಡ ಲಿಪಿಯ ಹುಟ್ಟು ಮತ್ತು ಬೆಳವಣಿಗೆಗಳ ಬಗ್ಗೆ ಬಹಳ ಅಧ್ಯಯನ ನಡೆದಿದೆ. ಕನ್ನಡ ಲಿಪಿಯು ವಿವಿಧ ಸ್ತರಗಳಲ್ಲಿ ವಿಕಾಸ ಹೊಂದಿದಂತೆ ಸಂಸ್ಕೃತ ಅಥವಾ ದೇವನಾಗರೀ ಲಿಪಿಯು ವಿಕಾಸವನ್ನು ಹೊಂದಿದೆ. ಅಶೋಕನ ಶಾಸನಗಳಲ್ಲಿ ಬ್ರಾಹ್ಮೀ ಲಿಪಿಯನ್ನೇ ಬಳಸಲಾಗಿದೆ. ನಂತರದ ರಾಜವಂಶಗಳ ರಾಜರು ತಮ್ಮ ತಮ್ಮ ಲಿಪಿಗಳನ್ನು ಅಳವಡಿಸಿಕೊಂಡರು. ದಕ್ಷಿಣ ಭಾರತದಲ್ಲಿ ಬಳಕೆಯಾಗಿರುವ ದೇವನಾಗರೀ ಲಿಪಿಗೆ ನಂದಿ ನಾಗರೀ ಲಿಪಿಯೆಂದು ಕರೆಯುತ್ತಾರೆ. ವಿಜಯನಗರ ಅರಸರ ಕಾಲದ ಶಾಸನಗಳಲ್ಲಿ ಹೆಚ್ಚಾಗಿ ಈ ಲಿಪಿಯನ್ನು ಬಳಸಲಾಗಿದೆ. ಇದಲ್ಲದೆ ಹಲವಾರು ಸಂಸ್ಕೃತ ಶಾಸನಗಳಲ್ಲಿ ನಾಗರಿ ಲಿಪಿಯನ್ನು ಬಳಸಲಾಗಿದೆ.

೧) ಸಿಂಹಣ ದೊರೆಯ ಧಾರವಾಡ ತಾಮ್ರ ಶಾಸನ [೨೨].

೨) ಗೋವೆಯ ರಾಜ ಮಾಧವನ ಕುಕ್ಕೆ ತಾಮ್ರ ಶಾಸನ.

೩) ಗೋರಂಟ್ಲ ತಾಮ್ರ ಶಾಸನ.

೪) ಸುಲ್ತಾನ್ ಮೊಹಮ್ಮದ್ ಷಾಹನ ಕಲ್ಯಾಣ ಶಾಸನ.

ಉಪಸಂಹಾರ

ಸಂಸ್ಕೃತ ಶಾಸನಗಳು ವಿಷಯ ವೈವಿಧ್ಯತೆಯ ದೃಷ್ಟಿಯಿಂದ ಇನ್ನೂ ಬಹಳ ಮನೋಹರವಾಗಿದೆ. ಇಂತಹ ವಿಷಯ ವೈವಿಧ್ಯತೆ, ಸ್ವರೂಪದ ವಿಶೇಷತೆಯು ಕಾಲದಿಂದ ಕಾಲಕ್ಕೆ ರಾಜಮನೆತನದಿಂದ ರಾಜಮನೆತನಕ್ಕೆ ಬದಲಾಗುತ್ತಾ ಬಂದಿದೆ. ಪ್ರತ್ಯೇಕ ರಾಜನೆತನದಲ್ಲಿ ಸಂಸ್ಕೃತ ಶಾಸನಗಳು ಹೇಗೆ ಬೆಳವಣಿಗೆ ಹೊಂದಿದೆಯೆಂಬುವುದಾಗಿ ಮುಂದಿನ ಅಧ್ಯಾಯದಲ್ಲಿ ನೋಡಲಾಗುವುದು. ಈ ರೀತಿಯಾಗಿ ಸಂಸ್ಕೃತ ಶಾಸನಗಳ ಸ್ವರೂಪವನ್ನು ಗಮನಿಸಿದಾಗ ಶಾಸನಗಳ ವಿಕಾಸವನ್ನು, ಮಹತ್ವವನ್ನು ಚೆನ್ನಾಗಿ ತಿಳಿಯಬಹುದಾಗಿದೆ.

ಅಡಿ ಟಿಪ್ಪಣಿಗಳು

೧) ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ ಪು.ಸಂ ೧

೨) ಎಫಿಗ್ರಾಫಿಯಾ ಕರ್ನಾಟಕಾ ಸಂ ೫ ಮೈಸೂರು ತಾ, ಮೈಸೂರು ೯೯

೩) ಎಫಿಗ್ರಾಫಿಯಾ ಇಂಡಿಕಾ ಸಂ ೪೧

೪) ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ ೫ ಬೀದರ್ ಜಿಲ್ಲೆ

೫) ಎಫಿಗ್ರಾಫಿಯಾ ಕರ್ನಾಟಿಕಾ ಸಂ ೫ ಮೈಸೂರು ತಾ, ಮೈಸೂರು ೯೯

೬) ಕರ್ನಾಟಕ ಶಾಸನಗಳ ಪರಿಚಯ ಮಾರ್ಗದರ್ಶಿ ಅಭ್ಯಾಸ ಪಾಠಗಳು ಪು.ಸಂ.೭೫

೭) ಎಫಿಗ್ರಾಫಿಯಾ ಕರ್ನಾಟಿಕಾ ಸಂ ೫ ಮೈಸೂರು ನಂ ೨೬

೮) ನ್ಯಾಯ ಪ್ರದೀಪ ಶ್ರೀ ಎನ್ ರಂಗನಾಥ ಶರ್ಮಾ ಪು.ಸಂ.೨

೯) ಎಫಿಗ್ರಾಫಿಯಾ ಕರ್ನಾಟಿಕಾ ಸಂ ೫ ತಿರುಮಲ ಕೂಡು ನರಸೀಪುರ ಸಂ ೧೬

೧೦) ಎಫಿಗ್ರಾಫಿಯಾ ಇಂಡಿಕಾ ಸಂ ೩೭

೧೧) ಎಫಿಗ್ರಾಫಿಯಾ ಇಂಡಿಕಾ ಸಂ ೩೨

೧೨) ಎಫಿಗ್ರಾಫಿಯಾ ಕರ್ನಾಟಿಕಾ ಸಂ ೭ ನಾಗಮಂಗಲ ತಾ, ಸಂ ೧೦೭

೧೩) ಎಫಿಗ್ರಾಫಿಯಾ ಕರ್ನಾಟಿಕಾ ೯ (ಬೆಂಗಳೂರು ಸಂಪುಟ)

೧೪ ಎಫಿಗ್ರಾಫಿಯಾ ಕರ್ನಾಟಿಕಾ ಸಂ ೭ ನಾಗಮಂಗಲ ತಾ, ಸಂ೧೦೭

೧೫ ಎಫಿಗ್ರಾಫಿಯಾ ಇಂಡಿಕಾ ಸಂ ೩೨

೧೬) ಎಫಿಗ್ರಾಫಿಯಾ ಇಂಡಿಕಾ ಸಂ ೩೧

೧೭) ಎಫಿಗ್ರಾಫಿಯಾ ಕರ್ನಾಟಿಕಾ ಸಂ ೯ ಬೇಲೂರು ತಾ, ಸಂ೨೩

೧೮) ಎಫಿಗ್ರಾಫಿಯಾ ಕರ್ನಾಟಿಕಾ ಸಂ ೯ ಬೇಲೂರು ತಾ, ಸಂ ೨೩

೧೯) ಎಫಿಗ್ರಾಫಿಯಾ ಇಂಡಿಕಾ ಸಂ ೩೨

೨೦) ಎಫಿಗ್ರಾಫಿಯಾ ಕರ್ನಾಟಿಕಾ ಸಂ ಮೈಸೂರು ತಾಲೂಕು ಮೈಸೂರು ೯೯

೨೧) ಎಫಿಗ್ರಾಫಿಯಾ ಕರ್ನಾಟಿಕಾ ಸಂ ೯ ಬೇಲೂರು ಸಂ ೪೦

೨೨) ಎಫಿಗ್ರಾಫಿಯಾ ಇಂಡಿಕಾ ಸಂ ೩೩

ಅಧ್ಯಾಯ ೪

ಕರ್ನಾಟಕದ ಸಂಸ್ಕೃತ ಶಾಸನಗಳ ವಿಶೇಷ ಸ್ವರೂಪ

ಅಧ್ಯಾಯ ೪

ಕರ್ನಾಟಕದ ಸಂಸ್ಕೃತ ಶಾಸನಗಳ ವಿಶೇಷ ಸ್ವರೂಪ

ಪೀಠಿಕೆ

ಹಿಂದಿನ ಅಧ್ಯಾಯದಲ್ಲಿ ಸಂಸ್ಕೃತ ಶಾಸನಗಳ ಸಾಮಾನ್ಯ ರೂಪವನ್ನು ಗಮನಿಸಿದೆವು. ಈ ಅಧ್ಯಾಯದಲ್ಲಿ ರಾಜಮನೆತನಗಳಿಗನುಗುಣವಾಗಿ, ಕಾಲಾನುಸಾರವಾಗಿ ಸಂಸ್ಕೃತ ಶಾಸನಗಳ ಸ್ವರೂಪ ಹೇಗಿದ್ದವು ಮತ್ತು ಅವುಗಳು ಹೇಗೆ ವಿಕಾಸ ಹೊಂದಿದ್ದವು ಎಂದು ಗಮನಿಸಲಾಗುವುದು. ಕರ್ನಾಟಕದಲ್ಲಿ ಎಲ್ಲಾ ರಾಜಮನೆತನಗಳಿಗೆ ಸಂಬಂಧಿಸಿದ ಸಂಸ್ಕೃತ ಶಾಸನಗಳು ದೊರಕುತ್ತವೆ. ಈ ಅಧ್ಯಾಯದಲ್ಲಿ ಪ್ರತ್ಯೇಕ ರಾಜವಂಶಗಳ ಶಾಸನಗಳನ್ನು ಅಧ್ಯಯನ ಮಾಡುವುದಕ್ಕಾಗಿ ೪ ಸ್ತರಗಳನ್ನು ಮಾಡಲಾಗಿದೆ. ಅವುಗಳೆಂದರೆ

೧. ಕ್ರಿ.ಶ. ೩ ರಿಂದ ಕ್ರಿ.ಶ. ೭ನೆಯ ಶತಮಾನದವರೆಗೆ (ಕದಂಬರರಿಂದ - ಬಾದಾಮಿಯ ಚಾಲುಕ್ಯರು)

೨. ಕ್ರಿ.ಶ.೮ ರಿಂದ ಕ್ರಿ.ಶ.೧೦ನೆಯ ಶತಮಾನದವರೆಗೆ (ರಾಷ್ಟ್ರಕೂಟರಿಂದ - ಕಳಚೂರ್ಯವರೆಗೆ)

೩. ಕ್ರಿ.ಶ.೧೧ ರಿಂದ ಕ್ರಿ.ಶ.೧೩ನೆಯ ಶತಮಾನದವರೆಗೆ (ಹೊಯ್ಸಳರಿಂದ - ಶಿಲಾಹಾರವರೆಗೆ)

೪. ಕ್ರಿ.ಶ.೧೩ ರಿಂದ ಕ್ರಿ.ಶ.೧೭ನೆಯ ಶತಮಾನದವರೆಗೆ (ವಿಜಯನಗರ ಅರಸರಿಂದ ಮೈಸೂರು ಅರಸರವರೆಗೆ)

ಈ ರೀತಿಯಾಗಿ ಕಾಲಮಾನದಿಂದ, ರಾಜಮನೆತನ ದೃಷ್ಟಿಯಿಂದಲೂ ವಿಭಾಗಿಸಿ ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗುವುದು. ಈ ವಿಭಾಗಗಳಲ್ಲಿ ಸಾಮಂತರ, ಮಹಾ ಮಂಡಳೇಶ್ವರರ ಶಾಸನಗಳು ಸೇರಿಕೊಳ್ಳುತ್ತವೆ.

ಹಿಂದೆ ತಿಳಿಸಿದಂತೆ ಶಾಸನಗಳು ಸಾಹಿತ್ಯಕ್ಕಾಗಿ ಆವಿರ್ಭವಿಸಿದವಲ್ಲ. ಪ್ರಮುಖವಾಗಿ ಧಾರ್ಮಿಕ ಕಾರ್ಯವನ್ನು ಜನರಿಗೆ ತಿಳಿಸುವುದಕ್ಕಾಗಿಯೇ ಹುಟ್ಟಿಕೊಂಡವುಗಳಾಗಿವೆ. ಅಶೋಕನ ಶಾಸನಗಳನ್ನು **'ಧರ್ಮಲಿಪಿ'**ಗಳೆಂದು ಕರೆಯುತ್ತಾರೆ. ಜನರಿಗೆ ಧರ್ಮಭೋದನೆಯನ್ನು ಮಾಡುವಂತಹ ಶಾಸನಗಳಾಗಿವೆ. ಬ್ರಹ್ಮಗಿರಿ, ಮಸ್ಕಿ, ಸನ್ನತಿ, ಜಟಂಗರಾಮೇಶ್ವರ, ಪಾಲ್ಕಿಗುಂಡು, ಗವಿಮಠ ಮೊದಲಾದೆಡೆ ಅಶೋಕನ ಪ್ರಾಕೃತ ಶಾಸನಗಳು ದೊರಕಿವೆ. ಬನವಾಸಿ, ಮಳವಳ್ಳಿ ಮುಂತಾದೆಡೆ ಚುಟು ಅರಸರ ಪ್ರಾಕೃತ ಭಾಷೆಯ ಶಾಸನಗಳು ದೊರಕುತ್ತವೆ. ಚಂದ್ರವಳ್ಳಿ, ಮಳವಳ್ಳಿ ಪ್ರದೇಶಗಳಲ್ಲಿ

ಕದಂಬ ಅರಸರ ಪ್ರಾಕೃತ ಭಾಷೆಯ ಶಾಸನಗಳು ದೊರಕಿವೆ. ಇಲ್ಲಿಂದ ಮುಂದೆ ಸಂಸ್ಕೃತ ಶಾಸನಗಳ ಯುಗ ಪ್ರಾರಂಭವಾಗುತ್ತದೆ. ಮಯೂರವರ್ಮನ ಕ್ರಿ.ಶ.೩೨೦ರ ಚಂದ್ರವಳ್ಳಿ ಶಾಸನ, ಕದಂಬ ಮಯೂರವರ್ಮನ ಕ್ರಿ.ಶ.೩೨೫ನ ಚಂದ್ರವಳ್ಳಿ ಶಾಸನ, ಹೀರೇಹಡಗಲಿಯ ಪಲ್ಲವ ರಾಜ ಶಿವಸ್ಕಂದವರ್ಮನ ಕ್ರಿ.ಶ.೩೩೮ರ ಶಾಸನ, ಇವಿಷ್ಟು ೪ನೆಯ ಶತಮಾನದ ಪ್ರಸಿದ್ಧ ಪ್ರಾಕೃತ ಶಾಸನಗಳು. ಇದರ ನಂತರ ಕರ್ನಾಟಕದಲ್ಲಿ ಅಂತಹ ಪ್ರಾಕೃತ ಶಾಸನಗಳು ದೊರೆಯುವುದಿಲ್ಲ.

ಸ್ತರ ೧ - ಕ್ರಿ.ಶ. ೩ ರಿಂದ ಕ್ರಿ.ಶ. ೬ರವರೆಗೆ

ಕದಂಬರು ಕರ್ನಾಟಕದ ಮೊದಲ ಅರಸು ಮನೆತನದವರು. ಬನವಾಸಿಯನ್ನು ಕೇಂದ್ರವಾಗಿರಿಸಿಕೊಂಡು ಕ್ರಿ.ಶ.೨೫೦ರಿಂದ ೫೫೦ರ ತನಕ ಆಳಿದರು. ಮಯೂರಶರ್ಮನು ಕರ್ನಾಟಕದ ಮೊದಲ ರಾಜನು. ಕರ್ನಾಟಕದ ಮೊದಲ ಶಾಸನವು ಇದೇ ವಂಶದ್ದಾಗಿದೆ. ಕಾಕುಸ್ಥವರ್ಮನ ಹಲ್ಮಿಡಿ ಶಾಸನವು ಕರ್ನಾಟಕದ ಮೊದಲ ಶಾಸನವಾಗಿದ್ದು ಪ್ರಾರಂಭದಲ್ಲಿ ಸುಂದರವಾದ ಸಂಸ್ಕೃತ ಶ್ಲೋಕವಿದೆ. ಇದಕ್ಕಿಂತಲೂ ಮೊದಲ ಕಾಲ ಉಲ್ಲೇಖ ಉಳ್ಳ ಕಾಕುಸ್ಥವರ್ಮನ ಹಲಿಸಿ ತಾಮ್ರ ಶಾಸನವು ಕರ್ನಾಟಕದ ಮೊದಲ ಸಂಸ್ಕೃತ ಶಾಸನವೆನ್ನಬಹುದಾಗಿದೆ. ಅದೇ ರೀತಿಯಾಗಿ ಇದು ಸಂಸ್ಕೃತದ ಮೊದಲ ದಾನ ಶಾಸನವಾಗಿದೆ. ಕಾಕುಸ್ಥವರ್ಮನು ತಾನು ಪಟ್ಟಾಭಿಷಿಕ್ತನಾಗಿ ಎಂಭತ್ತು ವರ್ಷದಲ್ಲಿ ಈ ಶಾಸನವನ್ನು ನೀಡಿರುವನು. ರಾಜನನ್ನು ರಕ್ಷಿಸಿದ ಸೇನಾಪತಿ ಶ್ರುತಕೀರ್ತಿಕೆ ಖೇಟ ಗ್ರಾಮದಲ್ಲಿ 'ಬಿಳೋವರ' ಕ್ಷೇತ್ರವನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಈ ವಂಶದ ಮೃಗೇಶವರ್ಮ ಮತ್ತು ರವಿವರ್ಮರ ಕಾಲದ ಸಂಸ್ಕೃತ ತಾಮ್ರಶಾಸನಗಳು ಹೆಚ್ಚಾಗಿ ಕಂಡುಬರುತ್ತದೆ. ಕಾಕುಸ್ಥವರ್ಮನ ತಾಳಗುಂದ ಶಾಸನ (ಕ್ರಿ.ಶ.೪೨೦), ರವಿವರ್ಮನ ಗುಡ್ನಾಪುರ ಶಾಸನವು ಬಹಳ ಪ್ರಸಿದ್ಧಿಯನ್ನು ಪಡೆದ ಶಾಸನವಾಗಿದ್ದು, ಹೆಚ್ಚಿನ ಶಾಸನಗಳು ಗದ್ಯರೂಪದಲ್ಲಿದ್ದು, ಚಿಕ್ಕ ಚಿಕ್ಕ ಶಾಸನಗಳಾಗಿ ಕಂಡುಬರುತ್ತದೆ. ಹೆಚ್ಚಿನ ಶಾಸನಗಳ ಪ್ರಾರಂಭದಲ್ಲಿ ಪ್ರಾರ್ಥನಾ ಶ್ಲೋಕಗಳಿರುವುದಿಲ್ಲ. ಕೆಲವೊಂದು ಶಾಸನಗಳಲ್ಲಿ ಗಂಗರ ಶಾಸನಗಳಲ್ಲಿ ಹೆಚ್ಚಾಗಿ ಕಂಡುಬರುವ 'ಜಿತಂ ಭಗವತೇನ ಪದ್ಮನಾಭೇನ' ಎಂಬ ವಾಕ್ಯವು ಕಂಡುಬರುವುದು. ಕೆಲವೊಂದು ಶಾಸನಗಳಲ್ಲಿ ಜಿನನ ಕುರಿತಾದ ಶ್ಲೋಕ ಮತ್ತು ಬ್ರಹ್ಮನ ಕುರಿತಾದ ಶ್ಲೋಕಗಳು ಕಂಡುಬರುತ್ತವೆ. ಬ್ರಹ್ಮನ ಕುರಿತಾದ ಶ್ಲೋಕ ಈ ರೀತಿಯಾಗಿದೆ.

ಜಯತಿ ಸುರಾಪುರ ಮಕುಟ ಪ್ರಣಹಿತ ಮಣಿಕಿರಣ ಖಚಿತ ಚರಣಯುಗಃ।
ದಂಡಕಮಂಡಲು ಹಸ್ತರ್ಪದ್ಮ ಪ್ರವರಾಸನೇ ಬ್ರಹ್ಮಾ॥

ಹೆಚ್ಚಿನ ಶಾಸನಗಳ ಪ್ರಾರಂಭದಲ್ಲಿ "ಸ್ವಾಮಿ ಮಹಾಸೇನ ಮಾತೃಗಣಾನು ದ್ಧ್ಯಾತಾಭಿಷಿಕ್ತಸ್ಯ ಮಾನವ್ಯಸಗೋತ್ರಸ್ಯ ಹಾರೀತಿ ಪುತ್ರಸ್ಯ..." ಎಂದು ತಮ್ಮ ವಂಶಾವಳಿಯನ್ನು ಹೇಳಿ ನಂತರ ದಾನ ನೀಡಿದ ರಾಜರ ಉಲ್ಲೇಖ ಮತ್ತು ದಾನದ ಸ್ವರೂಪವನ್ನು ಹೇಳಲಾಗಿದೆ. ತಾಮ್ರಶಾಸನಗಳ ಪಾಠಗಳು ಸಂಸ್ಕೃತದಲ್ಲಿದ್ದು, ಬಹುಮಟ್ಟಿಗೆ ಒಂದೇ ವಿಧವಾಗಿದೆ. ಸಂಸ್ಕೃತ ಶಾಸನಗಳು ಈ ಕಾಲದಲ್ಲಿ ಒಂದು ನಿರ್ದಿಷ್ಟ ಸ್ವರೂಪವನ್ನು ಪಡೆಯಿತೆಂದು ಹೇಳಬಹುದು. ಭಾಷೆ ಸರಳವಾಗಿದೆ. ಹೆಚ್ಚಿನ ಸಾಹಿತ್ಯಿಕ ಅಂಶಗಳು ಕಂಡುಬರುವುದಿಲ್ಲ. ತಾಮ್ರ ಶಾಸನಗಳ ಭಾಷೆಗೆ ಹೋಲಿಸಿದರೆ ಶಿಲಾಶಾಸನಗಳಲ್ಲಿನ ಸಂಸ್ಕೃತ ಭಾಷೆ ಸರಳವಾದರೂ ಕಾವ್ಯಾತ್ಮಕವಾಗಿದೆ. ಕಾಕುಸ್ಥವರ್ಮನ ತಾಳಗುಂದ ಸ್ಥಂಭಶಾಸನ ಮತ್ತು ರವಿವರ್ಮನ ಗುಡ್ನಾಪುರ ಶಾಸನಗಳು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಈ ಎರಡೂ ಶಾಸನಗಳ ಶೈಲಿ ಮತ್ತು ಭಾಷಾ ಪ್ರಯೋಗವು ಒಂದೇ ರೀತಿಯಾಗಿದ್ದು, ಕಾವ್ಯಗಳ್ಲಲಿರುವಷ್ಟು ಗಾಢತೆ ಕಂಡುಬರದಿದ್ದರೂ ಸಂಸ್ಕೃತೀಕರಣದ ಪ್ರಭಾವವನ್ನು ಗುರುತಿಸಬಹುದಾಗಿದೆ. ಕದಂಬರ ಶಾಸನಗಳಲ್ಲಿ ಶಕವರ್ಷದ ಉಲ್ಲೇಖಗಳು ಕಂಡುಬರುವುದಿಲ್ಲ. ತಾವು ಪಟ್ಟಾಭಿಷಿಕ್ತರಾದ ವರ್ಷದ ಉಲ್ಲೇಖವಿರುತ್ತದೆ. ಕೊನೆಯಲ್ಲಿ ಶಾಪಾಶಯದ ಭಾಗವು ಶ್ಲೋಕ ರೂಪವಾಗಿದ್ದು, ಪ್ರಸಿದ್ಧ ಶ್ಲೋಕಗಳನ್ನೇ ಬಳಸಲಾಗಿದೆ.

ತಾಳಗುಂದ ಶಾಸನ [೧]

ಈ ಶಾಸನವನ್ನು ತಾಳಗುಂದದ ಪ್ರಣವೇಶ್ವರ ದೇವಾಲಯದ ಮುಂದೆ ನಿಲ್ಲಿಸಲಾದ ಕಲ್ಲಿನ ಕಂಬದ ಮೇಲೆ ಕೆತ್ತಲಾಗಿದೆ. ಅಷ್ಟ ಮುಖದ ಕಂಬವನ್ನು ಕೆಳಗೆ ಮಲಗಿಸಿ ಏಳು ಮುಖಗಳಲ್ಲಿ ಎರಡೆರಡು ಸಾಲುಗಳನ್ನು ಎಂಟನೆಯ ಮುಖದಲ್ಲಿ ಒಂದು ಸಾಲನ್ನು ಎಡಗಡೆಯಿಂದ ಬಲಗಡೆಗೆ ಕೊರೆದು ನಂತರ ಕಂಬವನ್ನು ನಿಲ್ಲಿಸಲಾಗಿದೆ. ಭಾಷೆ ಕಾವ್ಯಾತ್ಮಕವಾದ ಸಂಸ್ಕೃತವಾಗಿದ್ದು ಕದಂಬರ ಲಿಪಿಯನ್ನು (ಪೆಟ್ಟಿಗೆಯಾಕಾರದ ತಲೆಕಟ್ಟು) ಹೊಂದಿದೆ. ೩೪ ಶ್ಲೋಕಗಳನ್ನು ೧೫ ಸಾಲುಗಳಲ್ಲಿ ಕೆತ್ತಲಾಗಿದೆ. ೧ ರಿಂದ ೨೪ನೆಯ ಶ್ಲೋಕದ ತನಕ ಮಿಶ್ರಗಣ ಗೀಥಿಕಾ, ೨೫ ಮತ್ತು ೨೬ನೆಯ ಶ್ಲೋಕಗಳು ಪುಷ್ಪಿತಾಗ್ರಾ, ೨೭, ೩೦, ೩೧ ಮತ್ತು ೩೪ ವಸಂತ ತಿಲಕಾ, ೨೮ನೆಯ ಶ್ಲೋಕ ಶಾರ್ದೂಲ ವಿಕ್ರೀಡಿತ, ೨೯ನೆಯ ಶ್ಲೋಕ ಮಂದಾಕ್ರಾಂತಾ, ೩೨ನೆಯ ಶ್ಲೋಕ ಇಂದ್ರಾವಜ್ರಾ ಮತ್ತು ೩೩ನೆಯ ಶ್ಲೋಕ ದಂಡಕ ಛಂದಸ್ಸಿನಲ್ಲಿದೆ. ಕಾಕುಸ್ಥವರ್ಮನ ದೇವಾಲಯದ ಉಪಯೋಗಕ್ಕಾಗಿ ದೊಡ್ಡ ತಟಾಕವೊಂದನ್ನು ತೋಡಿಸಿದುದರ ಜೊತೆಗೆ ಕದಂಬರ ರಾಜ್ಯ ಸ್ಥಾಪನೆ ಮತ್ತು ಅರಸರ ಇತಿಹಾಸವನ್ನು ಕವಿತಾ ಶೈಲಿಯಲ್ಲಿ ಹೇಳಲಾಗಿದೆ. ಈ ಶಾಸನದ ಕರ್ತೃ ಕುಬ್ಜನು ಶ್ರೀಶಾಂತಿವರ್ಮನ ಆಜ್ಞೆಯ ಮೇರೆಗೆ ಬರೆದಿರುವನೆಂದು ಸ್ಪಷ್ಟವಾಗಿ ಹೇಳಲಾಗಿದೆ.

"ಶ್ರೀ ಶಾಂತಿವರ್ಮ ನೃಪತೇರ್ವರ ಶಾಸನಸ್ಥಃ ಕುಬ್ಜ ಸ್ವಕಾವ್ಯವಿಂದಮಶ್ಮತಲೆಲಿಲೇಖ"

ಪ್ರಾರಂಭದ ಮೂರು ಶ್ಲೋಕಗಳು ಪ್ರಾರ್ಥನಾ ಶ್ಲೋಕಗಳಾಗಿದ್ದು, ಮೊದಲ ಶ್ಲೋಕದಲ್ಲಿ ಶಿವನನ್ನೂ, ಎರಡನೆಯ ಶ್ಲೋಕದಲ್ಲಿ ಬ್ರಾಹ್ಮಣರನ್ನೂ, ಮೂರನೇಯ ಶ್ಲೋಕದಲ್ಲಿ ಕಾಕುತ್ಸವರ್ಮನನ್ನು ಸ್ತುತಿಸಲಾಗಿದೆ. ೪ ರಿಂದ ೮ನೆಯ ಶ್ಲೋಕನ ತನಕ ಬ್ರಾಹ್ಮಣರ ವಂಶವನ್ನು ಉಲ್ಲೇಖಿಸಿ ಕದಂಬಕುಲದ ಉತ್ಪತ್ತಿಯನ್ನು ಹೇಳಲಾಗಿದೆ. ೯ನೆಯ ಶ್ಲೋಕದಲ್ಲಿ ೧೬ನೆಯ ಶ್ಲೋಕದ ತನಕ ಮಯೂರ ಶರ್ಮನ ವರ್ಣನೆ ಆತನಿಗೆ ಎದುರಾದ ಘಟನೆ, ಮಯೂರಶರ್ಮನಿಂದ ಮಯೂರ ವರ್ಮನಾದ ಘಟನೆ ವರ್ಣಿಸಿ ಆತನು ಆ ವಂಶಕ್ಕೆ ಪ್ರಬಲ ರಾಜನಾದನೆಂದು ಉಲ್ಲೇಖಿಸಿದೆ. ೧೭ನೆಯ ಶ್ಲೋಕದಿಂದ ೨೨ನೆಯ ಶ್ಲೋಕದ ತನಕ ಆತನ ವಿಜಯ ಯಾತ್ರೆಯನ್ನು ವರ್ಣಿಸಿದೆ. ಇಲ್ಲಿ **'ಭುಜ ಖಡ್ಗ ಮಾತ್ರ ವ್ಯಪಾಶ್ರಯಃ'** ಎಂಬ ಶಬ್ದ ಸ್ವಾರಸ್ಯಕರವಾಗಿದೆ. "ಶತ್ರುವಾದ ಕಾಂಚೀ ರಾಜನು ಇವನೊಂದಿಗೆ ಯುದ್ಧ ಮಾಡಲು ಬಂದಾಗ ತನ್ನ ಭುಜಗಳಿಗೆ ಮತ್ತು ಖಡ್ಗಗಳಿಗೆ ಮಾತ್ರ ವ್ಯಾಪಾರವನ್ನು ನೀಡಿದನು." ಇಲ್ಲಿಂದ ಮುಂದೆ ಆತನ ವಿಜಯ ಯಾತ್ರೆಯನ್ನು ವರ್ಣಿಸಿ ಪಟ್ಟಾಭಿಷಿಕ್ತನಾದ ವಿಚಾರಬರುತ್ತದೆ. ೨೩ನೆಯ ಶ್ಲೋಕದಿಂದ ೨೮ನೆಯ ಶ್ಲೋಕದ ತನಕ ಈತನ ವಂಶವನ್ನು ಕಂಗವರ್ಮನಿಂದ ಭಗೀರಥನ ತನಕ ವರ್ಣಿತವಾಗಿದೆ. ಇಲ್ಲಿಯ ನಂತರ ವಿವಿಧ ಛಂದಸ್ಸುಗಳನ್ನು ಬಳಸಲಾಗಿದೆ. ೨೯ನೆಯ ಶ್ಲೋಕದಿಂದ ೩೨ನೆಯ ಶ್ಲೋಕದ ತನಕ ಕಾಕುಸ್ಥವರ್ಮನ ವರ್ಣನೆಯಿದೆ. ಕಾಕುಸ್ಥವರ್ಮನನ್ನು ವರ್ಣಿಸುವ ಒಂದು ಶ್ಲೋಕವು ಈ ರೀತಿಯಾಗಿದೆ.

ಘರ್ಮಕ್ರಾಂತಾ ಇವ ಮೃಗಗಣಾ ವೃಕ್ಷರಾಜಿಂ ಪ್ರವಿಶ್ಯ-
ಚ್ಛಾಯಾ ಸೇವಾಮೃಡಿತ ಮನಸೋ ನಿರ್ವೃತಿಂ ಪ್ರಾಪ್ನುವಂತಿ ।
ತದ್ವಚ್ಛಾಯೋ ವಿಹಿತ ಗತಯೋ ಬಾಂಧವಾಸ್ಸಾನು ಬಂಧಾಃ
ಪ್ರಾಪುಶರ್ಮಾ ವ್ಯಥಿತ ಮನಸೋ ಯಸ್ಯ ಭೂಮಿ ಪ್ರವಿಶ್ಯ ॥

(ಬಿಸಿಲಿನ ಬೇಗೆಯಿಂದ ಬಳಲಿದ ಜಿಂಕೆಯ ಗುಂಪು ಮರಗಳ ಸಮೂಹಕ್ಕೆ ಬಂದು ಮರದ ನೆರಳನ್ನಾಶ್ರಯಿಸಿ ಸಂತೋಷಗೊಂಡು ಹೇಗೆ ಸುಖವನ್ನನುಭವಿಸುತ್ತವೋ ಅದೇ ರೀತಿಯಾಗಿ ಹಿರಿಯರು ತಮ್ಮ ಬಂಧುಗಳೊಂದಿಗೆ ಆಶ್ರಯವಿಲ್ಲದಾಗ ಇವನ ಭೂಮಿಯನ್ನು ಪ್ರವೇಶಿಸಿ ಹೃಷ್ಟ ಮನಸ್ಸುಳ್ಳವರಾಗುವರು.)

ಮುಂದೆ ಕಾಕುಸ್ಥವರ್ಮನು ಕೆರೆಯನ್ನು ನಿರ್ಮಿಸಿದ ವಿಷಯವನ್ನು ಹೇಳಿ ಕೊನೆಯ ಶ್ಲೋಕದಲ್ಲಿ ಶಾಸನ ಕರ್ತೃವಿನ ಹೆಸರು ಬಂದಿದೆ. ಲೇಖಕನು ಸ್ವತಃ ಇದನ್ನು ಕಾವ್ಯವೆಂದು ಹೇಳಿಕೊಂಡಿದ್ದಾನೆ. ಸಾಮಾಜಿಕ ದೃಷ್ಟಿಯಿಂದಲೂ ಈ ಶಾಸನವು ಪ್ರಮುಖವಾಗಿದೆ.

ಗುಡ್ನಾಪುರ ಶಾಸನ ೨

ಬನವಾಸಿ ಬಳಿಯ ಗುಡ್ನಾಪುರದ ಸ್ತಂಭದಲ್ಲಿ ಈ ಶಾಸನ ಕಂಡುಬರುತ್ತದೆ. ತಾಳಗುಂದ ಶಾಸನದಂತೆ ೨೦ ಅಡಿ ಎತ್ತರದ ಕಂಬದ ನಾಲ್ಕು ಮುಖಗಳ ಮೇಲೆ ಕೆತ್ತಲಾಗಿದ್ದು ೨೭ ಸಾಲುಗಳನ್ನು ಹೊಂದಿದೆ. ಕದಂಬರ ಪೆಟ್ಟಿಯಾಗಾಕಾರದ ಲಿಪಿಯಲ್ಲಿದ್ದು ಪದ್ಯ ಮತ್ತು ಗದ್ಯ ಮಿಶ್ರಿತವಾಗಿದೆ. ಈ ಶಾಸನವು ಉತ್ತಮ ಕಾವ್ಯಕ್ಕೆ ಇನ್ನೊಂದು ಉದಾಹರಣೆಯಾಗಿದೆ. ಈ ಶಾಸನದಲ್ಲಿ ೩೦ ಶ್ಲೋಕಗಳಿದ್ದು, ನಂತರದ ಭಾಗ ಗದ್ಯವಾಗಿದೆ. ಈ ಶಾಸನವು ಮಯೂರಶರ್ಮನ ಹಿಂದಿನ ವಂಶಾವಳಿಯನ್ನು ತಿಳಿಸುತ್ತದೆ. ನಂತರ ರವಿವರ್ಮನೆಂಬ ರಾಜನು ಅರಮನೆಯ ಸಮೀಪದಲ್ಲಿ ಮನ್ಮಥನಿಗೆ ಕಾಮಜಿನಾಲಯವನ್ನು ಕಟ್ಟಿಸಿ, ಅಲ್ಲಿನ ಪೂಜಾಸಂಸ್ಕಾರಾರ್ಥಗಳಿಗೆಂದು ಹಲವಾರು ಗ್ರಾಮಗಳ ಭೂದಾನವನ್ನು ನೀಡಿದನು. ಇದೇ ಸಂದರ್ಭದಲ್ಲಿ ಗುಡ್ಡತಟಾಕನೆಂಬ ಕೆರೆಯನ್ನು ನಿರ್ಮಿಸಿದ ವಿಷಯವು ತಿಳಿದುಬರುತ್ತದೆ. ಇದು ಗದ್ಯಭಾಗವಾಗಿದೆ. ಇಲ್ಲಿ ಇನ್ನೊಂದು ವಿಶೇಷವೆಂದರೆ ಆ ಕಾಲದಲ್ಲಿ ಪ್ರಚಲಿತದಲ್ಲಿದ್ದಂತಹ ೧ ರಿಂದ ೯ರ ತನಕದ ಸಂಖ್ಯೆಗಳನ್ನು ಬಳಸಲಾಗಿದೆ. ಈ ಶಾಸನಗಳಲ್ಲಿ ೧ ರಿಂದ ೨೯ ಶ್ಲೋಕದ ತನಕ ಮಾಲಿನಿ ಮತ್ತು ೩೦ನೆಯ ಶ್ಲೋಕದಲ್ಲಿ ಪೃಥ್ವೀ ಛಂದಸ್ಸನ್ನು ಬಳಸಲಾಗಿದೆ. ಈ ಶಾಸನವೂ ಕೂಡಾ ಸಾಮಾಜಿಕ ಕಳಕಳಿಯುಳ್ಳ ಶಾಸನವಾಗಿದೆ. ಶಾಪಾಶಯದ ಭಾಗದಲ್ಲಿ ಬರುವಂತಹ ಪ್ರಸಿದ್ಧ ಶ್ಲೋಕ ಹೀಗಿದೆ-

ಅದ್ಭಿರ್ದತ್ತಂ ತ್ರಿಭಿರ್ಭುಕ್ತಂ ಸದ್ಭಿಶ್ಚ ಪರಿಪಾಲಿತಂ ।
ಏತಾನಿ ನ ನಿವರ್ತ್ತನ್ತೇ ಪೂರ್ವರಾಜ ಕೃತಾನಿ ಚ ॥

(ಜಲಧಾರೆಯೊಂದಿಗೆ ನೀಡಿದ ದಾನ, ಮೂರು ತಲೆಮಾರುಗಳಿಂದ ಭೋಗಿಸಿದ, ಸಜ್ಜನರಿಂದ ಪರಿಪಾಲಿಸಿದುದೂ ಮತ್ತು ಹಿಂದಿನ ರಾಜರಿಂದ ಮಾಡಿದ ಸುಕೃತಗಳು ಇವೆಲ್ಲವು ಮರಳಿ ಬರುವುದಿಲ್ಲ.)

ತ್ರಿಮೂರ್ತಿಗಳನ್ನು ಸ್ತುತಿಸುವಂತಹ ಒಂದು ಶ್ಲೋಕವು ಐಕ್ಯತೆಯನ್ನು ಸೂಚಿಸುತ್ತದೆ.

ಹರನಾರಾಯಣ ಬ್ರಹ್ಮತ್ರಿತಯಾಯ ನಮಸ್ಸದಾ ।
ಶೂಲ ಚಕ್ರಾಕ್ಷ ಸೂತ್ರೋದ್ಭಭಾವ ಭಾಸಿತ ಪಾಣಿನೇ ॥

(ತ್ರಿಶೂಲ, ಸುದರ್ಶನ ಚಕ್ರ ಮತ್ತು ಅಕ್ಷಸೂತ್ರಗಳನ್ನು ಕೈಯಲ್ಲಿ ಧರಿಸಿ ಶೋಭಿಸುತ್ತಿರುವ ಹರ(ಶಿವ), ನಾರಾಯಣ ಮತ್ತು ಬ್ರಹ್ಮರೆಂಬ ತ್ರಿಮೂರ್ತಿಗಳಿಗೆ ಯಾವಾಗಲೂ ನಮಸ್ಕರಿಸುವೆನು.)

‘ನಿವರ್ತನ’ ಶಬ್ದವು ಕದಂಬ ಶಾಸನಗಳಲ್ಲಿ ಹೆಚ್ಚಾಗಿ ಪ್ರಯುಕ್ತವಾಗಿದೆ. ಇದು ಭೂಪ್ರಮಾಣವಾಗಿದೆ.[೩] ಒಂದು ನಿಶ್ಚಿತವಾದ ಸ್ಥಳದಿಂದ ಹೊರಟ ವ್ಯಕ್ತಿಗೆ ಒಂದು ನಿಶ್ಚಿತ ಸಮಯದ ಕಾಲಮಾನ ನೀಡಲಾಗುತ್ತದೆ. ಅಷ್ಟು ಅವಧಿಯಲ್ಲಿ ಇನ್ನೊಂದು ಸ್ಥಳಕ್ಕೆ ಹೋಗಿ ಮತ್ತೆ ಮರಳಿ ಮೊದಲ ಸ್ಥಾನವನ್ನು ತಲುಪುವ ಭೂ ಪ್ರಮಾಣವನ್ನು ನಿವರ್ತನವೆನ್ನಲಾಗಿದೆ.

‘ಪ್ರತಿಕೃತ ಸ್ವಾಧ್ಯಾಯ ಚರ್ಚಾ ಪಾರಾಣಾಂ’ ಇದು ಕದಂಬ ಶಾಸನಗಳಲ್ಲಿ ಹೆಚ್ಚಾಗಿ ಪ್ರಯುಕ್ತವಾಗಿದೆ. ಈ ವಾಕ್ಯದ ಅರ್ಥವನ್ನು ಹಲವಾರು ರೀತಿಯಲ್ಲಿ ಅನುವಾದಿಸುತ್ತಾರೆ. ‘ಪ್ರತಿಪ್ರತ್ಯೇಕಂಕೃತ’ ಎಂದು ಸಮಾಸ ಮಾಡಿ ಬಿಡಿಬಿಡಿಯಾಗಿ ವೇದಗಳ ಸ್ವಯಂ ಅಧ್ಯಯನವನ್ನೂ, ಅದರಲ್ಲಿ ಚರ್ಚೆಯನ್ನು ಮಾಡುವುದರಲ್ಲೂ ಪಾರಂಗತವೆಂದು ಅರ್ಥೈಸಬಹುದಾಗಿದೆ.

‘ಪಲಾಶಿಕಾ’ ಎಂಬ ಶಬ್ದವು ಇಂದಿನ ‘ಹಲಸಿ’ಯ ಪ್ರಾಚೀನ ರೂಪವಾಗಿದೆ. ಈ ಶಬ್ದವನ್ನೂ ಇಲ್ಲಿ ಹೆಚ್ಚಾಗಿ ಬಳಸಲಾಗಿದೆ.

ಕದಂಬರ ಕಾಲದ ಸಂಸ್ಕೃತ ಶಾಸನ ಲೇಖಕರು

ಕದಂಬರ ಕಾಲದ ಶಾಸನಗಳು ಕಿರಿದಾಗಿದ್ದು, ನೇರವಾಗಿ ವಿಷಯಗಳನ್ನು ತಿಳಿಸುವಂತಿದೆ. ಮುಂದಿನ ರಾಜಮನೆತನಗಳಲ್ಲಿ ಬೆಳೆದಷ್ಟು ವಿಶಾಲವಾಗಿ ಕದಂಬರ ಕಾಲದಲ್ಲಿ ಶಾಲಸನಗಳು ಬೆಳೆದಿಲ್ಲ. ಆದರೂ ಆ ಕಾಲದಲ್ಲಿ ಸಂಸ್ಕೃತ ಭಾಷೆಯನ್ನು ಬಲ್ಲ ಪ್ರತಿಭೆಗಳಿದ್ದವು ಎಂದು ತಿಳಿಯುತ್ತದೆ. ಕವಿ ಕುಬ್ಜನು ತಾಳಗುಂದ ಶಾಸನ ಕತೃವಾಗಿದ್ದಾನೆ. ಈತನ ಕವಿತಾ ಪ್ರೌಢಿಮೆಯನ್ನು ಈ ಶಾಸನದಿಂದ ತಿಳಿಯಬಹುದಾಗಿದೆ. ‘ದಾಮಕೀರ್ತಿ ಭೋಜಕ’ನು ದೇವಗಿರಿ ಶಾಸನದ ಕರ್ತೃನರವರ ಸೇನಾಪತಿಯು ದೇವಗಿರಿಯ ಶಿವ ಮೃಗೇಶನ ಶಾಸನ, ಕೀರ್ತಿವರನು ಹೊಸನಗರ ಮತ್ತು ಹಿಟ್ಟಹೆಬ್ಬಾಗಿಲು ಶಾಸನ ಮತ್ತು ರಹಸ್ಯಾಧಿಕಾರಿ ‘ದಾದೋದರ ದತ್ತ’ನು ಕೊಡಗೆರೆಯ ಶಾಸನದ ಕರ್ತೃವಾಗಿದ್ದಾನೆ.

ಈ ರೀತಿಯಾಗಿ ಕದಂಬ ವೃಕ್ಷದಂತೆ ಸ್ಥಿರವಾದ, ನೇರವಾದ, ಅಚಲವಾದ ಬುನಾದಿಯನ್ನು ಕದಂಬರು ಶಾಸನ ಪ್ರಪಂಚಕ್ಕೆ ನೀಡಿ ಅದು ಮುಂದೆ ಬೆಳೆದು ಬೃಹತ್ ಮರವಾಗುವಂತೆ ಪ್ರೋತ್ಸಾಹಿಸಿದರು. ಕದಂಬರ ಶಾಸನಗಳ ಅನುಕರಣೆಯನ್ನೇ ಗಂಗರು ತಮ್ಮ ಶಾಸನಗಳಲ್ಲಿ ಮುಂದುವರಿಸಿದರು.

ಗಂಗ ಅರಸರ ಶಾಸನಗಳು

ಕರ್ನಾಟಕದ ಸಂಸ್ಕೃತ ಶಾಸನಗಳ ಬೆಳವಣಿಗೆಯಲ್ಲಿ ಗಂಗ ಅರಸರ ಶಾಸನಗಳು ಎರಡನೆಯ ಘಟ್ಟವಾಗಿದೆ. ತಲಕಾಡನ್ನು ರಾಜಧಾನಿಯನ್ನಾಗಿರಿಸಿಕೊಂಡು ಕ್ರಿ.ಶ.೨ ರಿಂದ ಕ್ರಿ.ಶ.೧೧ರ ತನಕ ದೀರ್ಘಕಾಲದಲ್ಲಿ ಹಲವು ಪರಾಕ್ರಮಿ ರಾಜರಿಂದ ಆಳ್ವಿಕೆಗೊಳ್ಳಲ್ಪಟ್ಟ ರಾಜ ಮನೆತನವಿದಾಗಿದೆ. ಗಂಗರ ಉತ್ಪತ್ತಿಯ ಬಗ್ಗೆ ಹಲವಾರು ಊಹೆಗಳಿದ್ದರೂ, ಉತ್ತರ ಭಾರತದಲ್ಲಿದ್ದಂತಹ ಇಕ್ಷ್ವಾಕು ವಂಶದ ಪತನಾನಂತರ ಕರ್ನಾಟಕಕ್ಕೆ ಬಂದಂತಹ ವಿಪತ್ತನ್ನು ದೂರ ಮಾಡಲು ಅದೇ ವಂಶದ ಸೋದರರಿಬ್ಬರು ದಕ್ಷಿಣ ದೇಶಕ್ಕೆ ಬಂದು ಹೊಸ ರಾಜ್ಯವನ್ನು ಸ್ಥಾಪಿಸಿರಬೇಕು. ಈ ಸೋದರರಿಬ್ಬರು ದೀಡಿಗ ಮತ್ತು ಒಂದನೆಯ ಮಾಧವರೆಂದು ಊಹಿಸುತ್ತಾರೆ.[೪] ಸರಿಸುಮಾರು ೨೨ ಪ್ರಬಲ ರಾಜರು ಆಳ್ವಿಕೆ ನಡೆಸಿದಂತಹ ಪ್ರಬಲ ರಾಜ್ಯವಾಗಿದ್ದು, ಎಲ್ಲಾ ಅರಸರು ಸಾಹಿತ್ಯಕ್ಕೆ, ರಾಜನೀತಿಗೆ, ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ.

ಸಂಸ್ಕೃತ ಶಾಸನಗಳು

ಗಂಗರ ಕಾಲದ ಶಾಸನಗಳು ಬಹುವಾಗಿ ಕದಂಬರ ಕಾಲದ ಶಾಸನಗಳನ್ನೇ ಹೋಲುತ್ತವೆ. ಕದಂಬರ ಶಾಸನಗಳ ಶೈಲಿಯನ್ನೇ ಅನುಕರಿಸಿರುವಂತಹ ಇವರ ಶಾಸನಗಳು ಗದ್ಯ ಶೈಲಿಯಲ್ಲಿದ್ದು ಶಾಪಾಶಯದ ಭಾಗವು ಪದ್ಯಶೈಲಿಯಲ್ಲಿದ್ದು ದೀರ್ಘವಾಗಿ ವಂಶಾವಳಿಯನ್ನು ಉಲ್ಲೇಖಿಸುತ್ತದೆ. ಕೆಲವೊಂದು ಶಾಸನಗಳಲ್ಲಿ ಮಾತ್ರ ಗ್ರಾಮಗಳ ಉಲ್ಲೇಖವನ್ನು ಕನ್ನಡದಲ್ಲಿ ಕೊಟ್ಟು ಉಳಿದೆಲ್ಲವನ್ನು ಸಂಸ್ಕೃತದಲ್ಲಿಯೇ ಕೊಡಲಾಗಿದೆ. ಶಾಸನದ ಪ್ರಾರಂಭ ಸ್ವಸ್ತಿ ವಾಚನವಿದ್ದು, ನಂತರ ಪದ್ಮನಾಭನನ್ನು ಸ್ತುತಿಸುವ ಪ್ರಾರ್ಥನಾ ಶ್ಲೋಕವನ್ನು ಗದ್ಯಶೈಲಿಯಲ್ಲೇ ನೀಡಲಾಗಿದೆ. ''ಜಿತಂ ಭಗವತಾಗತ ಘನ ಗಗನಾಭೇನ ಪದ್ಮನಾಭೇನ'' ಇದು ಗಂಗರ ಪ್ರಸಿದ್ಧ ಪ್ರಾರ್ಥನಾ ಶ್ಲೋಕವಾಗಿದೆ. (ಘನ ಮೋಡಗಳಿರದ ಶುಭ್ರವಾದ ಆಕಾಶದಂತಿರುವ ಪದ್ಮನಾಭನಿಂದ ಜಿತವಾಗಿದೆ.) ಇಲ್ಲಿ ಶಬ್ದಾಲಂಕಾರವನ್ನು ಬಳಿಸಿದೆ. (ಭಗವತಾ-ಗತ, ಗಗನಾಭೇನ - ಪದ್ಮನಾಭೇನ) ಇದರ ನಂತರದ ಭಾಗವು ಪೂರ್ಣವಾಗಿ ವಂಶಾವಳಿಯನ್ನು ಸೂಚಿಸುತ್ತದೆ. ಗಂಗ ಅರಸರ ಎಲ್ಲಾ ಶಾಸನಗಳಲ್ಲೂ ಇದೇ ವಂಶಾವಳಿಯನ್ನು ನೀಡಲಾಗಿದೆ. ಅದರಲ್ಲಿ ಚಾಮರಾಜನಗರ ತಾಲೂಕು ಕೆರೆಹಳ್ಳಿಯಲ್ಲಿ ದೊರಕಿದ ಶಾಸನವು,[೫] ೧೭ ರಾಜರನ್ನು ಉಲ್ಲೇಖಿಸುತ್ತದೆ.

ಕುಕನೂರಿನಲ್ಲಿ ದೊರೆತ ಇಮ್ಮಡಿ ಮಾರಸಿಂಹನ ತಾಮ್ರ ಶಾಸನವು[೬] (ಶಕವರ್ಷ ೮೯೦) ದೊಡ್ಡ ಶಾಸನವಾಗಿದ್ದು ಏಳು ಹಲಗೆಯನ್ನು ೨೩೦ ಸಾಲುಗಳನ್ನು ಹೊಂದಿದೆ. ಒಂದು ರಾಜರ ಉಲ್ಲೇಖವಾದ ನಂತರ 'ಅ ಪಿ ಚ' ಶಬ್ಧವನ್ನು ಬಳಸಿದ್ದಾರೆ. ಕೆಲವು ಶಾಸನಗಳಲ್ಲಿ ಶಕವರ್ಷವನ್ನು, ಕೆಲವು ಶಾಸನಗಳಲ್ಲಿ ತಾವು ಪಟ್ಟಾಭಿಶಿಕ್ತರಾದ ವರ್ಷಗಳನ್ನು ಉಲ್ಲೇಖಿಸುತ್ತಿದ್ದರು. ಕೆಲವು ಶಾಸನಗಳಲ್ಲಿ

ಗದ್ಯ ಮತ್ತು ಪದ್ಯವನ್ನು ಬೇರ್ಪಡಿಸುವ ಸಂದರ್ಭದಲ್ಲಿ 'ವೃತ್ತಂ ಮತ್ತು ಗದ್ಯಂ' ಎಂಬ ಶಬ್ದ ಬಳಸಿದ್ದಾರೆ. ಷಕಟರೇಫ ಪ್ರಯೋಗವು ಹೆಚ್ಚಾಗಿ ಕಂಡುಬರುತ್ತದೆ. ಉದಾ : 'ಆತ್ಮನ ಲವರ್ಧಮಾನ', 'ಸಮ್ಯಕ್ ಲ್ರಜಾಪಾಲನ ಮಾತ್ರಾ', ಇವರ ಶಾಸನಗಳಲ್ಲಿ 'ತೇನೇದ ಮಖಿಲಮಂಬುವತಚಲಂ ದೃಷ್ಟ್ವಾ' ಎಂಬ ವಾಕ್ಯವು ಹೆಚ್ಚಾಗಿ ಕಂಡುಬರುತ್ತದೆ ಅಂದರೆ ದಾನ ಕೊಡುವಂತಹ ರಾಜನು ಅಖಿಲ ಭೂಲೋಕವು ನೀರಿನಂತೆ ಚಂಚಲವಾದುದನ್ನಾಗಿ ಮನಗಂಡು ಭೂದಾನವನ್ನು ನೀಡಿ ಪುಣ್ಯವನ್ನು ಸಂಪಾದಿಸಲು ದಾನವನ್ನು ನೀಡಿದನೆಂದು ಉಲ್ಲೇಖಿತವಾಗಿದೆ. ಗ್ರಾಮಗಳ ಸೀಮೆಯನ್ನು ಸಂಸ್ಕೃತದಲ್ಲಿಯೇ ಹೇಳಿದ್ದಾರೆ. ಶಾಸನದ ಕೊನೆಯಲ್ಲಿ 'ಸ್ವಸ್ತ್ಯಸ್ತು ಗೋ ಬ್ರಾಹ್ಮಣೇಭ್ಯ' ಎಂಬ ಮಂಗಳ ವಾಕ್ಯ ಕಂಡುಬರುತ್ತದೆ. ಶಾಸನಗಳಲ್ಲಿ [೬]ಗದ್ಯ ಶೈಲಿಯಲ್ಲೂ ಪದ್ಯಶೈಲಿಯಂತೆ ಚಮತ್ಕಾರವನ್ನು ಬಳಸಿದ್ದಾರೆ. ಉದಾ : **"ಸತು ಶಂಕರೋ ಪಿ ಅದಕ್ಷಾಧ್ವರ ಕೃಯಾ ವಿಧ್ವಂಸಿ, ಭೂನಂದೋಪಿ ಅಕ್ರೂರ ಗ್ರಹಃ, ರಾಜಷಿರಪಿ ವಿಜಿತಃ ವಿಶ್ವಾಮಿತ್ರಃ ಸತು ವಿಪು ಮಹಿಮಾರತ್ನಾವಾಸಃ ಕಥನ್ನ ವಿಷಾಧರಃ ಸ್ಫುರಿತ ಸುಮಹಾತೇಜೋರಾಶಿಕುತಃ"**

(ಈತನು ಶಂಕರನು(ಒಳ್ಳೆಯದನ್ನು ಮಾಡುವವನು) ಆದರೆ ದಕ್ಷರನ್ನು (ಶರಣಾಗತರನ್ನು) ನಾಶ ಮಾಡುವವವನಲ್ಲ. ಈತನು(ಭೂನಂದನಾದರೂ - ಮಂಗಳಗ್ರಹ) ಭೂಮಿಯಲ್ಲಿರುವವರಿಗೆ ಆನಂದ ಕೊಡುವವನಾದರೂ (ಕೆಟ್ಟಗ್ರಹನಲ್ಲ) ಆಶ್ರಯಿಸಿದವರಿಗೆ ಕ್ರೂರಿಯಲ್ಲ. ರಾಜರ್ಷಿಯಾಗಿದ್ದರೂ ವಿಶ್ವಾಮಿತ್ರರನ್ನುಮೀರಿದವನು (ವಿಶ್ವ ಅಮಿತ್ರ - ಕೆಟ್ಟ ರಾಜರನ್ನು ನಾಶ ಮಾಡಿದವನು) ....

ಚಿಕ್ಕಬಳ್ಳಾಪುರದ ಒಂದು ಶಾಸನದಲ್ಲಿ[೭] ರಾಜನು ಕಾಳಾಮುಖ ಪಂಗಡದ ಪ್ರಮುಖನಾದ ಕಾಳಶಕ್ತಿ ಗುರುವಿನ ಅಗ್ರ ಶಿಷ್ಯನಾದ ಈಶ್ವರದಾಸನಿಗೆ ದಾನ ನೀಡಿದ ಉಲ್ಲೇಖ ಬರುತ್ತದೆ.

ಗಂಗ ಅರಸನಾದ ಶ್ರೀಮಾಧವ ಮಹಾಧಿರಾಜನು 'ದತ್ತಕ ಸೂತ್ರ' ಗ್ರಂಥವನ್ನು ರಚಿಸಿರುವನು. 'ಕಿರಾತಾರ್ಜುನೀಯ ಪಂಚ ದಶ ಸರ್ಗ್ಗ ಟೀಕಾಕಾರ'ನೆಂದು ದುರ್ವಿನೀತನನ್ನು ಶಾಸನಗಳು ಉಲ್ಲೇಖಿಸುತ್ತದೆ. ಕಿರಾತಾರ್ಜುನೀಯ ಭಾರವಿಯ ರಚನೆಯಾಗಿದ್ದು, 'ಮಹಾಕಾವ್ಯ'ವೆಂಬ ಸ್ಥಾನವನ್ನು ಪಡೆದಿದೆ. ಇಂತಹ ಮಹಾಕಾವ್ಯದ ೧೫ನೆಯ ಸರ್ಗಕ್ಕೆ ಟೀಕೆಯನ್ನು ದುರ್ವಿನೀತನು ಬರೆದಿರುವನು. ೧೫ನೆಯ ಸರ್ಗವು ಆ ಮಹಾಕಾವ್ಯದಲ್ಲಿ ಪ್ರಧಾನವೂ ಅನೇಕ ಚಿತ್ರಕಾವ್ಯಗಳಿಂದ ಕೂಡಿದ್ದು ಕ್ಲಿಷ್ಟಕರವಾಗಿದೆ. ಇಂತಹ ಸರ್ಗಕ್ಕೆ ಟೀಕೆಯನ್ನು ಬರೆದಂತಹ ದುರ್ವಿನೀತನು ಸಂಸ್ಕೃತ ವಿದ್ವಾಂಸನೆಂದು ತೀರ್ಮಾನಿಸಬಹುದಾಗಿದೆ. ಕೃಷ್ಣರಾಜನಗರ ತಾಲೂಕಿನ ಸಾಲಿಗ್ರಾಮದಲ್ಲಿ ದೊರಕಿದ ಶಾಸನವು ಗಂಗರಸ 'ಶಿವಮಾರದೇವ' ಅನೇಕ ಶಾಸ್ತ್ರಗಳಲ್ಲಿ ವಿದ್ವಾಂಸನೆಂದು ತಿಳಿಸಿ ಹಲವು ಗ್ರಂಥಗಳ ಉಲ್ಲೇಖವನ್ನು ಮಾಡಿದೆ. ಉದಾ : 'ಫಣಿಸುತ ಮತ', 'ಸಾಮಜ ತಂತ್ರ'(ಗಜಶಾಸ್ತ್ರ), 'ಅಶ್ವಶಾಸ್ತ್ರ', ಗಜದಂತ (ಸ್ವತಃ ರಾಜನೇ ಕರ್ತೃವಾಗಿರುವನು) ಇತ್ಯಾದಿ.[೮]

ಶಾಸನ ಲೇಖಕರು

ಸರ್ವಕಾಲಾಧಾರ ಭೂತನೂ, ಚಿತ್ರಕಲಾಭಿಜ್ಞನೂ ಆದ ವಿಶ್ವಕರ್ಮಚಾರ್ಯನು ಗಂಗರಸರ ಕಾಲದ ಶಾಸನಗಳ ಪ್ರಸಿದ್ಧ ಶಾಸನ ಲೇಖಕನು. ಈತನನ್ನು ವಿಶ್ವಕರ್ಮ ಸಮಾನನೆಂದು ಬಣ್ಣಿಸಲಾಗಿದೆ. ಇದಲ್ಲದೆ, ಮಾರ್ಗಿಣ, ಮಾತೃವರ್ಮ, ಕೊಡಲರಾ ನಾಗಣ್ಣ, ಕೊಂಗುಣಿ ಪೆರುದಟ್ಟ, ಕುನಚಾರಿ ಮೊದಲಾದವರು ಈ ಕಾಲದ ಪ್ರಸಿದ್ಧ ಶಾಸನ ಲೇಖಕರು.

ಬಾದಾಮಿಯ ಚಾಲುಕ್ಯರು

ಬಾದಾಮಿಯ ಚಾಲುಕ್ಯರು ಕರ್ನಾಟಕದ ಇತಿಹಾಸದ ಭೂಪಟದಲ್ಲಿ ಅಚ್ಚಳಿಯದೇ ಇರುವಂತಹ ಸ್ಥಾನವನ್ನು ಪಡೆದಿದ್ದಾರೆ. 'ಇಮ್ಮಡಿ ಪುಲಿಕೇಶಿ' ಎಂಬಂತಹ ಶಬ್ದವೇ ಇಡಿಯ ವಂಶದ ಸ್ವರೂಪವನ್ನು, ಮಹತ್ವವನ್ನು ತಿಳಿಸಿದರೆ, 'ಐಹೊಳೆ ಶಾಸನ'ವು ಶಾಸನ ಪ್ರಪಂಚದ ಸಂಪೂರ್ಣ ಸ್ವರೂಪವನ್ನು ತೋರಿಸುತ್ತದೆ. ಬಾದಾಮಿಯನ್ನು ಕೇಂದ್ರವಾಗಿರಿಸಿಕೊಂಡು ೨೦೦ ವರ್ಷಗಳಷ್ಟು ಕಾಲ ಬಲಾಢ್ಯ ರಾಷ್ಟ್ರವಾಗಿ ಬಾಳಿದ ಈ ವಂಶವು ಭಾರತೀಯ ಇತಿಹಾಸದಲ್ಲಿ ಪ್ರಧಾನ ಸ್ಥಾನವನ್ನು ಪಡೆದಿದೆ.

ಸಂಸ್ಕೃತ ಶಾಸನಗಳು

ಬಾದಾಮಿಯ ಚಾಲುಕ್ಯರು ಯುದ್ಧರಂಗದಲ್ಲಿ ಹೇಗೋ ಸಾಹಿತ್ಯ ರಂಗದಲ್ಲೂ ಹಾಗೆಯೇ ಪರಿಣತರಾಗಿದ್ದರು. ಇದಕ್ಕೆ ಮಹಾಕೂಟಸ್ತಂಭ ಶಾಸನ, ಐಹೊಳೆ ಪ್ರಶಸ್ತಿ ಶಾಸನ ಮತ್ತು ಪಟ್ಟಕಲ್ಲು ಶಾಸನಗಳೇ ನಿದರ್ಶನವಾಗಿದೆ. ಶಾಸನ ಕಾವ್ಯದಲ್ಲಿ ರವಿಕೀರ್ತಿಯ ಐಹೊಳೆ ಶಾಸನವನ್ನು ಮೀರಿಸುವ ಶಾಸನಗಳಲ್ಲಿ ಕರ್ನಾಟಕದಲ್ಲಿ ತೀರಾ ಕಡಿಮೆ.[೧೦] ಇವರ ಕಾಲದ ಸಂಸ್ಕೃತ ಶಾಸನಗಳು ಕಾವ್ಯದೃಷ್ಟಿಯಿಂದ ಬಹಳ ಉನ್ನತವಾಗಿದೆ. ಐಹೊಳೆ ಶಾಸನವಂತೂ ಭಾರತಿಯ ಸಂಸ್ಕೃತ ಸಾಹಿತ್ಯ ಇತಿಹಾಸದಲ್ಲಿ ಪ್ರಮುಖವಾಗಿದೆ. ಇದು ಭಾರವಿ, ಕಾಳಿದಾಸರ ಕಾಲಗಣನೆಯನ್ನು ತಿಳಿಯಲು ಪ್ರಮುಖ ಸಾಧನವಾಗಿದೆ. ಇವರ ಕಾಲದ ಸಂಸ್ಕೃತ ಶಾಸನಗಳು ಗದ್ಯ ಮತ್ತು ಪದ್ಯ ಮಿಶ್ರಣವಾಗಿ ಕಂಡುಬರುತ್ತದೆ. ಈ ವಂಶದವರಿಂದ ಪ್ರಾರಂಭವಾದ ವರಾಹಾವತಾರಿಯ ಸ್ತುತಿಯು ಮೈಸೂರು ಅರಸರ ಶಾಸನಗಳವರೆಗೂ ಮುಂದುವರೆದಿದೆ.

ಜಯತ್ಯಾವಿಷ್ಕೃತಂ ವಿಷ್ಣೋ ವಾರಾಹಂ ಕ್ಷೋಭಿತಾರ್ಣವಂ ।
ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ ॥

(ಸಮುದ್ರದಲ್ಲಿ ಮುಳುಗಿದ ಭೂಮಿಯನ್ನು ಯಾರು ತನ್ನ ದಕ್ಷಿಣ ದಂಷ್ಟ್ರಾಗ್ರಗಳ ತುದಿಯಿಂದ ಎತ್ತಿ ವಿಶ್ರಾಂತಗೊಳಿಸಿದನೋ ಆತನು(ವಿಷ್ಣು) ಜಯಶಾಲಿಯಾಗುವನು.)

ಶ್ರೀಮತಾಂ ಸಕಲ ಭೂವನ ಸಂಸ್ತೂಯಮಾನ ಮಾನವ್ಯಾಸ ಗೋತ್ರಾಣಾಂ, ಹಾರೀತಿ ಪುತ್ರಾಣಾಂ, ಸಪ್ತ ಲೋಕ ಮಾತೃಭಿಸ್ಸಪ್ತ ಮಾತೃಭಿರಭಿವರ್ಧಿತಾನಾಂ, ಕಾರ್ತಿಕೇಯ ಪರಿರಕ್ಷಣ ಪ್ರಾಪ್ತ ಕಲ್ಯಾಣ ಪರಂಪರಾಣಾಂ...)

ಸಕಲ ಭುವನದ ಜನರಿಂದ ಸ್ತುತ್ಯಾರ್ಹರೂ, ಸ್ವಾಮಿ ಮಹಾಸೇನ ಮತ್ತು ಮಾತೃಗಣಗಳಿಂದ ಅಭಿಷಿಕ್ತರೂ, ಮಾನವ್ಯಸಗೋತ್ರಜರೂ, ಹಾರೀತಿಯ ಪುತ್ರರೂ,...)

ಈ ೨ ಭಾಗವು ಚಾಲುಕ್ಯರ ಶಾಸನಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ವಂಶಾವಳಿಯ ಭಾಗವು ಗದ್ಯವಾಗಿದ್ದು, ಕೊನೆಯ ಭಾಗ ಪದ್ಯವಾಗಿರುತ್ತದೆ. ಸಂಡೂರು ತಾಲೂಕಿನ ನಾರಿಹಳ್ಳದಲ್ಲಿ ದೊರೆತ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ದೇವನ ಶಾಸನವು (ಕ್ರಿ.ಶ.೧೦೪೭) ಬಹಳ ವಿಶೇಷವಾಗಿದ್ದು ಗದ್ಯ ಮತ್ತು ಪದ್ಯ(ವೃತ್ತಿ) ಮಿಶ್ರಣವಾಗಿದ್ದು, ಶಾಸನ ಶೈಲಿಯಲ್ಲಿ ವ್ಯತ್ಯಾಸವಿದೆ.[೧೧] ಎಕ್ಕೇರಿಯಲ್ಲಿ ದೊರೆತಿರುವ ಇಮ್ಮಡಿ ಪುಲಿಕೇಶಿಯ ಶಾಸನದ ಕೊನೆಯಲ್ಲಿ 'ಸ್ವಸ್ತ್ಯಸ್ತು ಲೇಖಕ ವಾಚಕಸ್ಯ' ಎಂದು ಲೇಖಕರಿಗೂ, ವಾಚಕರಿಗೂ ಸ್ವಸ್ತಿ ವಾಚನವನ್ನು ಮಾಡಲಾಗಿದೆ. ಬಾದಾಮಿಯ ಕೋಟೆಯ ಬಂಡೆಯಲ್ಲಿರುವ ಒಂದು ಶಾಸನವು ವಿಶೇಷವಾದ ವಿಚಾರವನ್ನು ತಿಳಿಸುತ್ತದೆ. ಶಾಲಿವಾಹನ ಶಕ ೪೬೫ನೆಯ ವರ್ಷದಲ್ಲಿ ಚಾಲಿಕ್ಯ ವಲ್ಲಭೇಶ್ವರನು ವಾತಾಪಿಯು ಅಜೇಯವಾಗಿ ಉಳಿಯಬೇಕೆಂದು ಭದ್ರವಾದ ಕೋಟೆಯನ್ನು ನಿರ್ಮಿಸಿದುದರ ವರ್ಣನೆಯನ್ನು ಮಾಡುತ್ತದೆ.

ಶಾಸನ ಲೇಖಕರು

'ನಿರವಧ್ಯ ಶ್ರೀ ಪುಣ್ಯವಲ್ಲಭ', 'ಜಯಕರ', 'ಶ್ರೀ ಜಯಸೇನ', 'ಶ್ರೀವಜ್ರವರ್ಮ', 'ತ್ರಿವಿಕ್ರಮ ಭಟ್ಟ' ಮೊದಲಾದವರು ಚಾಲುಕ್ಯರ ಕಾಲದ ಸಂಸ್ಕೃತ ಶಾಸನಗಳ ಲೇಖಕರಾಗಿದ್ದರು.

ಮಹಾಕೂಟ ಸ್ತಂಭ ಶಾಸನ

ಬಿಜಾಪುರ ವಸ್ತು ಸಂಗ್ರಹಾಲಯದಲ್ಲಿರುವಂತಹ ಈ ಸ್ತಂಭಶಾಸನವು [೧೨] ಕ್ರಿ.ಶ.೫೯೫ನೆಯ ಕಾಲಮಾನದ್ದಾಗಿದ್ದು ಚಾಲುಕ್ಯರಾಜ ಮಂಗಲೇಶನಿಗೆ ಸಂಬಂಧಿಸಿದುದಾಗಿದೆ. ಇದು ಸಂಪೂರ್ಣ ಗದ್ಯವಾಗಿದ್ದು, ಚಾಲುಕ್ಯ ವಂಶವನ್ನು ೧೬ ಸಾಲುಗಳಲ್ಲಿ ವರ್ಣಿಸಿದೆ. ಪ್ರಾರಂಭದಲ್ಲಿ ಚಾಲುಕ್ಯವಂಶದ ವರ್ಣನೆ ಇದ್ದು, ನಂತರ ಶ್ರೀ ವಿಜಯಸಿಂಹ ವಲ್ಲಭ, ರಣರಾಗ, ರಣವಿಕ್ರಮ, ಪುರು–ರಣ ಪರಾಕ್ರಮ, ಉರು-ರಣ ವಿಕ್ರಮ ಮಂಗಲೀಶರನ್ನು ಕ್ರಮವಾಗಿ ಉಲ್ಲೇಖಿಸಲಾಗಿದ್ದು, ೮ನೆಯ ಸಾಲಿನಿಂದ ಮಂಗಲೀಶನ ಪರಾಕ್ರಮವನ್ನು ವರ್ಣಿಸಲಾಗಿದೆ. ಇಲ್ಲಿ ಶಬ್ದಗಳನ್ನು ಬಹಳ ಲಲಿತವಾಗಿ ಬಳಸಲಾಗಿದ್ದು, ಮಂಗಲೀಶನನ್ನು ಶಿಬಿ, ಯುಧಿಷ್ಠಿರ, ವಾಸುದೇವ, ಮಾಂಧಾತ

ಮೊದಲಾದವರೊಂದಿಗೆ ಹೋಲಿಸಲಾಗಿದೆ. ಮಂಗಲೀಶನು ಉತ್ತರ ದೇಶದ ದಿಗ್ವಿಜಯದ ದ್ಯೋತಕವಾಗಿ ಮಹಾಕೂಟೇಶ್ವರ ದೇವಾಲಯದ ಮುಂಭಾಗದಲ್ಲಿ 'ವಿಜಯಸ್ತಂಭ'ವನ್ನು ನಿರ್ಮಿಸಿದನು ಎಂದು ವರ್ಣಿಸಲಾಗಿದೆ. ಗದ್ಯದ ಶೈಲಿಯನ್ನು ಗಮನಿಸಿದಾಗ ಯಾವುದೋ ಕವಿಯ ಪ್ರಭಾವ ಕಾಣಿಸುತ್ತದೆ. ಆದರೆ ಈ ಶಾಸನದಲ್ಲಿ ಕವಿಯ ಉಲ್ಲೇಖವಿಲ್ಲ.

ಐಹೊಳೆ ಶಾಸನ [೧೩]

ಐಹೊಳೆಯ ಬಳಿ ಗುಡ್ಡದ ಮೇಲಿರುವ ಮೇಗುತಿ ಎಂಬ ಜಿನ ದೇವಾಲಯದ ಗೋಡೆಯಲ್ಲಿರುವ ಈ ಶಾಸನವು ಬಾದಾಮಿ ಚಾಲುಕ್ಯ ಇಮ್ಮಡಿ ಪುಲಿಕೇಶಿಗೆ ಸಂಬಂಧಿಸಿದುದಾಗಿದೆ. ಪೂರ್ಣ ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನವು ಸಂಸ್ಕೃತ ಸಾಹಿತ್ಯಕ್ಕೂ ಮತ್ತು ಸಂಸ್ಕೃತ ಸಾಹಿತ್ಯ ಇತಿಹಾಸಕ್ಕೂ ಅಪಾರ ಕೊಡುಗೆಯನ್ನು ನೀಡಿದೆ. ಶಕವರ್ಷ ೫೫೬ಕ್ಕೆ ಸೇರಿದ ಈ ಶಾಸನವು ಸಪೂಣರ ಪದ್ಯಶೈಲಿಯಲ್ಲಿದೆ. ೩೭ ಶ್ಲೋಕಗಳಿದ್ದು ೧೯ ಸಾಲುಗಳಲ್ಲಿ ಕೆತ್ತಲಾಗಿದೆ. ಇದು ಶಿಲಾಶಾಸನವಾಗಿದ್ದು, 'ಪ್ರಶಸ್ತಿ ಶಾಸನ'ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ. ರವಿಕೀರ್ತಿಯು ಈ ಶಾಸನದ ಕರ್ತೃ. ಈ ಶಾಸನವು ೧೫ ವಿವಿಧ ಛಂದಸ್ಸುಗಳನ್ನು ಹೊಂದಿದೆ. ೫, ೨೯ ಮತ್ತು ೩೨ನೆಯ ಶ್ಲೋಕಗಳು ಶಾರ್ದೂಲ ವಿಕ್ರೀಡಿತ ಛಂದಸ್ಸಾಗಿದ್ದು, ಔಪಚ್ಛಂದಶಿಖಾ, ಮತ್ತೇಭವಿಕ್ರೀಡಿತಾ, ಮಾಲಿನೀ, ಪ್ರಹರ್ಷಿಣಿ ಮೊದಲಾದ ಅಪರೂಪದ ಛಂದಸ್ಸುಗಳು ಇಲ್ಲಿ ಕಂಡುಬರುತ್ತದೆ. ದ್ರಾವಿಡ ಭಾಷೆಯ 'ಳ' ಕಾರವನ್ನು ಬಳಸಿರುವುದು ಬಹಳ ವಿಶೇಷವಾಗಿದೆ. ಪುಲಿಕೇಶಿಯ ದಿಗ್ವಿಜಯವನ್ನು ವರ್ಣಿಸಲು ತೊಡಗಿರುವ ಈ ಶಾಸನವು ಯಾವುದೇ ಸಾಹಿತ್ಯ ಗ್ರಂಥಗಳಿಗಿಂತ ಕಡಿಮೆಯಿಲ್ಲ. ರವಿಕೀರ್ತಿಯು ಜೈನಕವಿಯಾಗಿದ್ದು ಪ್ರಾರಂಭದಲ್ಲಿ ಜಿನನ್ನು ಸ್ತುತಿಸಿದ್ದಾನೆ. ಆನಂತರ ೪ ಶ್ಲೋಕಗಳಲ್ಲಿ ಚಾಲುಕ್ಯ ರಾಜರಾದ 'ಸತ್ಯಾಶ್ರಯ', 'ಜಯಸಿಂಹ ವಲ್ಲಭ'ರ ವರ್ಣನೆಯಿದೆ. ಆನಂತರ ರಣರಾಗ, ಪುಲಿಕೇಶಿ, ಕೀರ್ತಿವರ್ಮ, ಮಂಗಳೇಶ ರಾಜರ ವರ್ಣನೆಯು ಮುಂದಿನ ೬ ಶ್ಲೋಕಗಳಲ್ಲಿ ಬಂದಿದೆ. ಇಲ್ಲಿ 'ಅಶ್ವಮೇಧ' ಶಬ್ದದ ಬದಲು 'ಹಯಮೇಧ'ವೆಂಬ ಶಬ್ದವನ್ನು ಬಳಸಲಾಗಿದೆ. ಮಂಗಳೇಶನು ರೇವತೀ ದ್ವೀಪವನ್ನು ವಶಪಡಿಸಿಕೊಳ್ಳಲು ನೌಕಾಸೇನೆಯನ್ನು ಕಟ್ಟಿದ್ದನೆಂಬ ಮಾಹಿತಿ ದೊರಕುತ್ತದೆ. ಆನಂತರ ಪುನಃ ಪುಲಿಕೇಶಿಯ ವರ್ಣನೆಯಿದ್ದು ತನ್ನ ಚಿಕ್ಕಪ್ಪನು ತನ್ನಲ್ಲಿ ಅಸೂಯೆಗೊಂಡಿರುವುದನ್ನು ಮನಗಂಡು ಅವನೊಂದಿಗೆ ಹೋರಾಡಿ ಜಯಶಾಲಿಯಾದನು. ಮುಂದೆ ೧೭ನೆಯ ಶ್ಲೋಕದಿಂದ ಪುಲಿಕೇಶಿಯ ದಿಗ್ವಿಜಯ ಯಾತ್ರೆಯು ಪ್ರಾರಂಭವಾಗುವುದು. ಇತಿಹಾಸದ ದೃಷ್ಟಿಯಿಂದ ಈ ಭಾಗವು ಅಮೂಲ್ಯವಾಗಿದೆ. ಬಾದಾಮಿ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಬೇರೆ ಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿದ್ದಂತಹ ರಾಜ ಮಹಾರಾಜರ ಸಂಕ್ಷಿಪ್ತ ಮಾಹಿತಿಯು ದೊರಕುತ್ತದೆ. ವನವಾಸಿಯ ಕದಂಬ, ಅಳುಪ, ಗಂಗ, ಮೌರ್ಯ ಮೊದಲಾದ ಪ್ರಬಲ ರಾಜರನ್ನು

ಸೋಲಿಸಿದ ಪುಲಿಕೇಸಿಯು ವನವಾಸಿಯನ್ನು ಆಕ್ರಮಣ ಮಾಡಿದಾಗ ಸಮುದ್ರದಂತಿರುವ ಈತನ ಸೈನ್ಯವು ಭೂಮಿಯಲ್ಲೆಲ್ಲಾ ಹರಡಿದಾಗ, ಒಂದು ಕ್ಷಣ 'ಸ್ಥಳದುರ್ಗ'ವು 'ಜಲದುರ್ಗ'ದಂತೆ ಕಂಡುಬಂದಿತು ಎಂಬ ಊಹೆಯು ಸುಂದರವಾಗಿದೆ. ಪುರಿಯನ್ನು ಆಕ್ರಮಣ ಮಾಡಿದಾಗ ಉಂಟಾದ ಸೊಬಗು ಈ ರೀತಿಯಾಗಿದೆ–

ಅಪರ ಜಲಧೇರ್ಲಕ್ಷ್ಮೀಂ ಯಸ್ಮಿನ್ ಪುರೀಂ ಪುರಭಿದ್ ಪ್ರಭೆ-
ಮದಗಜ ಘಟಾಕಾರೈರ್ನಾವಾಂ ಶತೈರವಮೃಂದತಿ ।
ಜಲದ ಪಟಲಾನೀಕಾಕೀರ್ಣ್ಣನ್ನವೋತ್ಪಲ ಮೇಚಕಂಜಲನಿಧಿ-
ರಿವ ವ್ಯೋಮ ವ್ಯೋಮ್ನ ಸ್ಸಮೋಭವದಂಬುಧಿಃ ॥

(ಪಶ್ಚಿಮ ಸಮುದ್ರದ ಲಕ್ಷ್ಮಿಯಾದ 'ಪುರಿ'ಯನ್ನು, ಪುರಭಿತ್ ನ ಪ್ರಭೆಯಂತೆ ಇರುವ ಮದಭರಿತ ಆನೆಗಳ ವಿನ್ಯಾಸದಂತಿರುವ ನೂರಾರು ಹಡಗುಗಳೊಂದಿಗೆ ಮುತ್ತಿಗೆ ಹಾಕಿದಾಗ, ಕಣ್ಣೀರನ್ನು ಸುರಿಸುತ್ತಿರುವ ಮೋಡಗಳಿಂದ ತುಂಬಿರುವ ಹೊಸ ಕಮಲದ ಪುಷ್ಪದಂತಿರುವ ಆಕಾಶವು ಸಮುದ್ರದಂತೆಯೂ ಮತ್ತು ಸಮುದ್ರವು ಆಕಾಶದಂತೆಯೂ ಕಂಡುಬಂದಿತು.)

'ಹರ್ಷೋರ್ಯೇನಚಕಾರಿ ಹರ್ಷ' - ಹರ್ಷವರ್ಧನನು ತನ್ನ ಹರ್ಷವನ್ನು ಕಳೆದುಕೊಂಡನು. ಗುಪ್ತವಂಶದ ಪ್ರಸಿದ್ಧ ದೊರೆ ಶ್ರೀಹರ್ಷವರ್ಧನನು ಅಪ್ರತಿಮ ಪರಾಕ್ರಮಿಯಾಗಿದ್ದರೂ ಪುಲಕೇಶಿಯ ಪರಾಕ್ರಮಕ್ಕೆ ಸರಿಸಾಟಿಯಾಗಲಿಲ್ಲ. ಕರ್ನಾಟಕದ ರಾಜರ ಪರಾಕ್ರಮವನ್ನು ಈ ಶ್ಲೋಕವು ಉಲ್ಲೇಖಿಸುತ್ತದೆ. ಇದರಿಂದ ಉತ್ತರ ಭಾರತದ ಇತಿಹಾಸವೂ ನಮಗೆ ತಿಳಿದಂತಾಗುತ್ತದೆ. ಕಳಿಂಗ ರಾಜನೂ ಕೂಡಾ ಈತನಿಗೆ ಶರಣಾದನು. ಈ ರೀತಿಯಾಗಿ ೩೨ನೆಯ ಶ್ಲೋಕದ ತನಕ ಈತನ ಪರಾಕ್ರಮದ ಚಿತ್ರಣವನ್ನು ಸುಂದರವಾಗಿ ವರ್ಣಿಸಲಾಗಿದೆ. ೩೩ ಮತ್ತು ೩೪ನೆಯ ಶ್ಲೋಕಗಳಲ್ಲಿ ಕಾಲದ ಉಲ್ಲೇಖವಿದೆ. ವಿಶೇಷವಾಗಿ ಭಾರತ ಯುದ್ಧವರ್ಷ ಅಥವಾ ಕಲಿಯುಗ ವರ್ಷವನ್ನು ಮತ್ತು ಶಕವರ್ಷವನ್ನು ಉಲ್ಲೇಖಿಸಲಾಗಿದೆ. ಶಕವರ್ಷ ೫೫೬ರ ತನಕ ಪುಲಿಕೇಶಿಯು ಆಳುತ್ತಿರಲು ಆತನ ಕೃಪಾಶೀರ್ವಾದದಿಂದ ರವಿಕೀರ್ತಿಯು ಜಿನಾಲಯವನ್ನು ನಿರ್ಮಿಸಿರುವನು. ಈ ಶಾಸನದ ಪ್ರಧಾನತೆಯಿರುವುದೇ ಕೊನೆಯ ಶ್ಲೋಕದಲ್ಲಿ –

'ಸವಿಜಯತಾಂ ರವಿಕೀರ್ತಿ ಕವಿತಾಶ್ರಿತಕಾಲಿದಾಸ ಭಾರವಿಕೀರ್ತಿ ॥'

(ತನ್ನ ಕೀರ್ತಿಯಿಂದ ಕಾಳಿದಾಸ ಮತ್ತು ಭಾರವಿಯವರಿಗೆ ಸಮಾನನಾದವನಾದ ರವಿಕೀರ್ತಿಗೆ ಜಯವಾಗಲಿ)

ಇದು ಐತಿಹಾಸಿಕವಾಗಿ ಪ್ರಸಿದ್ಧವಾದ ಭಾಗವಾಗಿದೆ ಇದು ಕಾಳಿದಾಸ ಮತ್ತು ಭಾರವಿಯ ಕಾಲವನ್ನು ನಿರ್ಣಯಿಸಲು ಪ್ರಮುಖವಾಗಿದೆ. ಏಕೆಂದರೆ ಕಾಳಿದಾಸನ ಕಾಲಮಾನವೂ ಈಗಲೂ ಚರ್ಚಾಸ್ಪದವಾಗಿದೆ. ಈ ಶಾಸನದ ಸಾಹಿತ್ಯಶೈಲಿಯನ್ನು ಗಮನಿಸಿದರೆ ಇವರ ಕಾವ್ಯಗ್ರಂಥಗಳ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ.

ಪಟ್ಟದಕಲ್ಲು ಸ್ತಂಭ ಶಾಸನ [೧೪]

ಬಾದಾಮಿ ತಾಲುಕಿನ ಪಟ್ಟದಕಲ್ಲಿನ ಪಾಪನಾಥದೇವಾಲಯದ ಮುಂದೆ ಸ್ತಂಭದಲ್ಲಿ ಈ ಶಾಸನವನ್ನು ನಿಲ್ಲಿಸಲಾಗಿದೆ. ಬಾದಾಮಿ ಚಾಲುಕ್ಯರ ರಾಜ ಕೀರ್ತಿವರ್ಮನ ಕಾಲದ ಈ ಶಾಸನವು ಗದ್ಯಶೈಲಿಯಲ್ಲಿದೆ. ಪ್ರಾರಂಭದಲ್ಲಿ ಗಣಪತಿಯ ಪ್ರಾರ್ಥನೆಯಿದ್ದು, ಈ ಮಹಾ ಶಿಲಾಸ್ತಂಭವನ್ನು ನಿರ್ಮಿಸಿದುದರ ವರ್ಣನೆಯನ್ನು ತಿಳಿಸುತ್ತದೆ. ಕಾವ್ಯ ದೃಷ್ಟಿಯಿಂದ ಈ ಶಾಸನವೂ ಕೂಡ ಮಹತ್ವದ್ದಾಗಿದೆ.

ಕ್ರಿ.ಶ. ೮ ರಿಂದ ಕ್ರಿ.ಶ. ಹತ್ತನೆಯ ಶತಮಾನ

ಮಾನ್ಯಖೇಟದ ರಾಷ್ಟ್ರಕೂಟರು

ಕರ್ನಾಟಕದಲ್ಲಿ ರಾಷ್ಟ್ರಕೂಟರ ಯುಗವನ್ನು ಉಜ್ವಲಯುಗವೆಂದು ಕರೆಯುತ್ತಾರೆ. ಚಾಲುಕ್ಯರ ಕರ್ನಾಟಕ ಸಾಮ್ರಾಜ್ಯ ಸಂಘಟಕರಾದರೆ ರಾಷ್ಟ್ರಕೂಟರು ಅದನ್ನು ವೈಭವದ ಪರಾಕಾಷ್ಠೆಗೆ ತಲುಪಿಸಿದ ಕೀರ್ತಿಶಾಲಿಗಳು.[೧೫] ಅಮೋಘವರ್ಷ ನೃಪತುಂಗನ ನಂತರ ಪರಾಕ್ರಮಿಯೂ, ಸಾಹಿತ್ಯಪ್ರೇಮಿಯೂ ಆವಿರ್ಭವಿಸಿದಂತಹ ರಾಜಮನೆತನದವಿದಾಗಿದೆ. ಇವರ ಕಾಲದಲ್ಲಿ ಸಂಸ್ಕೃತ ಶಾಸನಗಳು ಪ್ರೌಢಹಂತಕ್ಕೆ ತಲುಪಿತ್ತು. ಇವರು ಗಂಗ ಅರಸರ ಶಾಸನಗಳನ್ನೇ ಅನುಸರಿಸಿದ್ದರು. ಪ್ರಾರ್ಥನಾ ಶ್ಲೋಕಗಳಲ್ಲಿ ಪದ್ಯವನ್ನು ಬಳಸಿದ್ದಾರೆ. ವಂಶಾವಳಿಯನ್ನು ಗದ್ಯಶೈಲಿಯಲ್ಲೇ ಹೇಳಲಾಗಿದೆ. ಇವರ ಶಾಸನಗಳಲ್ಲಿ ಕಂಡುಬರುವ ಪ್ರಸಿದ್ಧ ಪ್ರಾರ್ಥನಾ ಶ್ಲೋಕ ಈ ರೀತಿಯಾಗಿದೆ.

ಸರ್ವೋರ್ವ್ಯಾದ್ವೇದಸಾ ಧಾಮ ಯನ್ನಾಭಿಕಮಲ ಕೃತಂ ।
ಹರಶ್ಚ ಯೆಸ್ಯ ಕಾಂತೇಂದು ಕಲಯಾ ಕಮಲಂಕೃತಂ ॥

(ಯಾರ ನಾಭಿ ಕಮಲದಲ್ಲಿ ವೇದಗಳಿಗೆ ಧಾಮನಾದ ಬ್ರಹ್ಮನು ಅಲಂಕರಿಸಿರುವನೋ ಅಂತಹ ಹರಿಯು ಮತ್ತು ಚಂದ್ರನ ಕಲೆಯಿಂದಲಂಕೃತನಾದ ಹರನು ನಿಮ್ಮನ್ನು ರಕ್ಷಿಸಲಿ.)

ಹೆಚ್ಚಿನ ಶ್ಲೋಕಗಳಲ್ಲಿ ಶಕವರ್ಷಗಳನ್ನು ಬಳಸಲಾಗಿದೆ. ಗಂಗ ಅರಸರ ಶಾಸನಗಳಲ್ಲಿ ಬರುವಂತೆ 'ತೇನೇದಮನಿಲ ವಿದ್ಯುತ್ ಚಂಚಲಮವಲೋಕ್ಯಜೀವಿತಮಸಾರಂ' ಎಂಬ ವಾಕ್ಯವು ಹೆಚ್ಚಾಗಿ

ಪ್ರಯುಕ್ತವಾಗಿದ್ದು, ಇಲ್ಲಿಂದ ಮುಂದೆ ಗದ್ಯಭಾಗವಿರುತ್ತದೆ. ರಾಷ್ಟ್ರಕೂಟರ ಉತ್ಪತ್ತಿಯ ಕುರಿತಾದ ಒಂದು ಶ್ಲೋಕವು ಈ ರೀತಿಯಾಗಿದೆ.[೧೬]

ಕ್ಷಿತಿ ತಲ ತಿಲಕಸ್ತದನ್ವಯೇ ಚ ಕ್ಷತರಿಪುದಂತಿ ಘಟೋಜನಿಷ್ಟ ರಟ್ಟಃ ।
ತಮನುಚ ಸೂತ ರಾಷ್ಟ್ರಕೂಟ ನಾಮ್ನಾಭುವಿ ವಿದಿತೋಜನಿ ರಾಷ್ಟ್ರಕೂಟ ವಂಶಃ॥

(ಈ ವಂಶದಲ್ಲಿ ಭೂಮಂಡಲಕ್ಕೆ ತಿಲಕದಂತಿರುವವನೂ, ಶತ್ರುಗಳ ಆನೆಗಳ ದಂತವನ್ನು ಪುಡಿ ಮಾಡಿದವನಾದ ರಟ್ಟ ರಾಜನು ಜನಿಸಿದನು, ಇವನ ನಂತರ ಈ ವಂಶವನ್ನು "ರಾಷ್ಟ್ರಕೂಟ" ಎಂದು ಕರೆದರು.)

ಇವರ ಶಾಸನಗಳ 'ಕರ್ನಾಟಕ'ವೆಂಬ ಶಬ್ದ ಬಳಕೆಯಾಗಿದೆ. ಗ್ರಾಮಗಳ ಸೀಮೆಯನ್ನು ಹೇಳುವಾಗ 'ಆಘಾಟಾಃ' ಎಂಬ ಶಬ್ದವನ್ನು ಬಳಸಿದ್ದಾರೆ. ದಾನ ನೀಡಿದ ವಿಷಯದ ನಂತರ "ಅಸ್ಯದಾನಸ್ಯ ಸಾಕ್ಷಿಣಃ ಷಣ್ಣವತಿ ಸಹಸ್ರ ವಿಷಯಃ ಪ್ರಕೃತಯಃ" (ಈ ದಾನದ ಸಾಕ್ಷಿಗಳು ೯೬ ಸಾವಿರ ವಿಷಯಗಳ(ಪ್ರದೇಶ) ಜನರು) ಎಂಬ ವಾಕ್ಯವನ್ನು ಹೆಚ್ಚಾಗಿ ಬಳಸಲಾಗಿದೆ. ಸುಂದರವಾದ ವರ್ಣನೆಯುಳ್ಳ ಒಂದು ಶ್ಲೋಕವು ಈ ರೀತಿಯಾಗಿದೆ.

ಕೃತ್ವಾಸ್ಪದಂ ಹೃದಯ ಹಾರಿ ಜಘನ್ಯ ಭಾಗೇ
ಸ್ವೈರಂ ಪುನರ್ಮೃದು ವಿಮರ್ದ್ಯಚ ಮಧ್ಯದೇಶಂ ।
ಯಸ್ಯಾ ಸಮಸ್ಯ ಸಮರೇ ವಸುಧಾಂಗನಾಯಾಃ
ಕಾಂಚೀ ಪದೇ ಪದಮಕಾರಿ ಕರೇಣ ಭೂಯಃ ॥[೧೭]

(ಪ್ರಿಯತಮೆಯ ಸೊಂಟದ ಭಾಗವನ್ನು ಸ್ಪರ್ಶಿಸಿ ನಿಧಾನವಾಗಿ ಹೃದಯಕ್ಕೆ ಬಲು ಮನೋಹರವನ್ನುಂಟು ಮಾಡಿ ನಂತರ ಮೃದುವಾದ ಮಧ್ಯದೇಶ (ಸೊಂಟದ ಮೇಲ್ಭಾಗ)ವನ್ನು ಸ್ಪರ್ಶಿಸುವಂತೆ, ಯುದ್ಧದಲ್ಲಿ ಅಸಾಮಾನ್ಯವಾದ ಶ್ರೀದಂತಿದುರ್ಗನು ಸುಂದರವಾದ ಭೂಪ್ರದೇಶಗಳುಳ್ಳ ಕೆಳಭಾಗವನ್ನು(ಪೂರ್ವ ಕರ್ನಾಟಕ) ಪ್ರವೇಶಿಸಿ ನಿಧಾನವಾಗಿ ಮಧ್ಯದೇಶವಾದ ಕಾಂಚಿಯನ್ನು ತನ್ನ ಭುಜಬಲದಿಂದಲೇ ಪ್ರವೇಶಿಸಿದನು.)

೧. ಕೊಳಗಲ್ಲು ಶಾಸನ [೧೮]

೮೮೯ನೆಯ ಶಕ ವರ್ಷದ ರಾಷ್ಟ್ರಕೂಟ ಅರಸ ಖೊಟ್ಟಿಗನ ಕಾಲದ ಈ ಶಾಸನವು ವಿಶೇಷವಾಗಿದೆ. ಈ ಶಾಸನವು ದಾನ ಶಾಸನವಾಗಿರದೆ, ಕೊಲಗಲ(ಕೊಳಗಲ್ಲು) ಗ್ರಾಮದಲ್ಲಿ ದುರ್ಭಿಕ್ಷೆಮಲ್ಲ(ಖೊಟ್ಟಿಗ)ನು ಶರವಣ ಭವ ಷಣ್ಮುಖನ ಮೂರ್ತಿಯನ್ನು ಪ್ರತಿಷ್ಠಾಪಿಸಿದುದರ

ಉಲ್ಲೇಖವನ್ನು ನೀಡುವಂತಹ ತಾಮ್ರಶಾಸನವಾಗಿದೆ. ಶಾಸನದ ಪ್ರಾರಂಭದಲ್ಲಿ ದೇವರ ಪ್ರತಿಷ್ಠಾಪನೆಯ ತೇದಿಯಿದ್ದು, ನಂತರ ಖೊಟ್ಟಿಗನ ಉಲ್ಲೇಖವಿದೆ. ತದನಂತರ ಷಣ್ಮುಖನನ್ನು ಸ್ತುತಿಸುವಂತಹ ೧೦ ಶ್ಲೋಕಗಳಿವೆ. ಷಣ್ಮುಖ ವಿಗ್ರಹವಲ್ಲದೆ ಸೂರ್ಯ, ಬ್ರಹ್ಮ, ವಿಷ್ಣು, ಈಶ್ವರ, ಪಾರ್ವತಿ ಮತ್ತು ವಿನಾಯಕರ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಅದಲ್ಲದೆ, ಒಂದು ಕೆರೆ, ಮಠ ಮತ್ತು ಬಾವಿಯನ್ನು ನಿರ್ಮಿಸಿದುದರ ಉಲ್ಲೇಖವಿದೆ. ಈ ವಿಗ್ರಹವನ್ನು ಪ್ರತಿಷ್ಠಾಪಿಸಿದುದು 'ಗದಾಧರ' ಮುನಿಯು. ಶಾಸನದ ಕೊನೆಯಲ್ಲಿ ಇದನ್ನು ಪ್ರಶಸ್ತಿ ಎಂದು ಹೇಳಲಾಗಿದೆ. ಈ ಪ್ರಶಸ್ತಿಯನ್ನು ಬರೆದವನು ಕವಿ ಮಧುಸೂದನನು. ಈ ಶಾಸನವು ರಾಜನ ಧಾರ್ಮಿಕತೆ ಮತ್ತು ಸಾಮಾಜಿಕತೆಯನ್ನು ತೋರಿಸುತ್ತದೆ.

೨. ಸಾಲೋಟಗಿ ಶಾಸನ [೧೯]

ಈ ಶಾಸನವು ರಾಷ್ಟ್ರಕೂಟರ ಕಾಲದ ಇನ್ನೊಂದು ಪ್ರಸಿದ್ಧ ಶಾಸನವಾಗಿದೆ. ಕ್ರಿ.ಶ.೯೪೫ರ ಕಾಲದ ಅಕಾಲವರ್ಷದೇವನ ಈ ಶಾಸನವು ವಿದ್ಯಾಕೇಂದ್ರಗಳಿಗೆ ನೀಡಿದಂತಹ ದತ್ತಿಯನ್ನು ಉಲ್ಲೇಖಿಸುತ್ತದೆ. ವಿಶೇಷವಾಗಿ ಈ ಶಾಸನವು ಮೂರು ವಿಭಾಗಗಳಾಗಿದ್ದು, ಮೊದಲ ವಿಭಾಗವು ಸಂಸ್ಕೃತ ಮತ್ತು ೨ ಮತ್ತು ೩ನೆಯ ವಿಭಾಗವು ಕನ್ನಡ ಶಾಸನವಾಗಿದೆ. ಇನ್ನೊಂದು ವಿಶೇಷವೆಂದರೆ ಶಾಸನ ಪ್ರಾರಂಭದಲ್ಲಿ ಗರುಡನನ್ನು ಕುರಿತಾದ ಶ್ಲೋಕವಿದೆ.

ಜಯತ್ಯಾವಿಷ್ಕೃತಂ ವಿಷ್ಣೋರ್ವ್ವೈನತಾಪತ್ಯ ಮುತ್ತಮಂ ।
ಧೃತ ಲೋಕತ್ರಯಾತ್ಮೇಯ ತನುಭೃತ್ತನುಭೃದ್ವರಂ ॥

(ವಿನತೆಯ ಪುತ್ರನೂ ಮತ್ತು ಮೂರು ಲೋಕಗಳನ್ನು ತನ್ನ ಶರೀರದಂತೆ ಧರಿಸಿಕೊಂಡಿರುವ ಶ್ರೀ ವಿಷ್ಣುವಿನ ವಾಹನವಾದ ವೈನತೇಯ(ಗರುಡ)ನಿಗೆ ಜಯವಾಗಲಿ.)

ಶಾಸನವು ಶ್ಲೋಕ ರೂಪದಲ್ಲಿದ್ದು, ೩೫ ಶ್ಲೋಕಗಳನ್ನೊಳಗೊಂಡಿದೆ. ಇದನ್ನು ಸ್ತಂಭದ ಮೇಲೆ ಕೆತ್ತಲಾಗಿದೆ. ೯ನೆಯ ಶ್ಲೋಕದ ತನಕ ಅಕಾಲವರ್ಷನ ದಿಗ್ವಿಜಯದ ವರ್ಣನೆಯಿದೆ. ೧೦ನೆಯ ಶ್ಲೋಕದಿಂದ ಕರ್ಣಪುರಿ ಎಂಬ ವಿಷಯದಲ್ಲಿ 'ಪಾವಿಟ್ಟಿಗೆ' ಎಂಬ ಮನೋಹರವೂ, ಪ್ರಸಿದ್ದವೂ ಆದ ಗ್ರಾಮವಿದೆ. ಆ ಗ್ರಾಮದಲ್ಲಿ ಕಾಂಚನ ಮುದುವೋಲು ಎಂಬ ಪ್ರಸಿದ್ಧ ಗ್ರಾಮದಲ್ಲಿ ವಾಸಿಸುತ್ತಿರುವ ನಾರಾಯಣನಿಂದ ನಿರ್ಮಿಸಲ್ಪಟ್ಟ ಶಾಲೆಯಿದೆ. ಈ ಶಾಲೆಗೆ ನಾನಾ ಪ್ರದೇಶಗಳಿಂದ ಜನರು ಬರುತ್ತಾರೆ. ಬೇರೆ ಪ್ರದೇಶಗಳಿಂದ ಬಂದಂತಹ ವಿದ್ಯಾರ್ಥಿಗಳಿಗೆ ವೃತ್ತಿಯನ್ನು ಕಲ್ಪಿಸಲಾಗಿದೆ. ಈ ಪಾವಿಟ್ಟಿಗೆ ಗ್ರಾಮದ ಒಡೆಯನಾದ 'ಬುಧಚಕ್ರಾಯುಧ'ನಿಗೆ ಒಂದು ಗ್ರಾಮವನ್ನು ನೀಡಲಾಗಿದೆ. ಆತನು ಪಡೆದಂತಹ ಭೂಮಿಯನ್ನು ವಿಭಾಗ ಮಾಡಿ ಪುಷ್ಪೋದ್ಯಾನ, ವಿದ್ಯಾರ್ಥಿ ಸಂಘಕ್ಕಾಗಿ, ವಿದ್ಯಾರ್ಥಿಗಳ ಚೂಡಾಕರ್ಮ, ಉಪನಯನಗಳಿಗೆ ಮತ್ತು ವಿವಾಹದ ಸಂದರ್ಭಕ್ಕಾಗಿ ವಿಶೇಷ

ವೃತ್ತಿಯನ್ನು ಕಲ್ಪಿಸಲಾಗಿದೆ. ಕರ್ನಾಟಕದಲ್ಲಿ ವಿದ್ಯಾಕೇಂದ್ರಗಳಿಗೆ ನೀಡಿದಂತಹ ಶಾಸನಗಳಲ್ಲಿ ಪ್ರಮುಖಸ್ಥಾನವನ್ನು ಪಡೆದಿದೆ.

ಕಲ್ಯಾಣ ಚಾಲುಕ್ಯರು

ಕಡಿದು ಹೋಗಿದ್ದ ಚಾಲುಕ್ಯ ವಂಶದ ವೈಭವವನ್ನು ರಾಷ್ಟ್ರಕೂಟ ರಾಜ ಇಮ್ಮಡಿ ಕರ್ಕರಾಜನಿಂದ ಕ್ರಿ.ಶ.೯೭೩ ರಲ್ಲಿ ಕಸಿದುಕೊಂಡು ಚಾಲುಕ್ಯವಂಶಜನೆಂದು ಹೇಳಿಕೊಂಡಿರುವ ಇಮ್ಮಡಿ ತೈಲಪನು ಕಲ್ಯಾಣವನ್ನು ರಾಜಧಾನಿಯನ್ನಾಗಿಸಿಕೊಂಡು ಚಾಲುಕ್ಯ ವಂಶವನ್ನು ಪುನಃ ಪ್ರತಿಷಾ«ಪಿಸಿದನು. ಕನ್ನಡ ಸಾಹಿತ್ಯಲೋಕಕ್ಕೆ ಆಪಾರವಾದ ಕಾಣಿಕೆಯನ್ನು ಕೊಟ್ಟಂತಹ ಈ ಮನೆತನದಲ್ಲಿ ಆರನೆಯ ವಿಕ್ರಮಾದಿತ್ಯನೆಂಬ ಪರಾಕ್ರಮಿ ರಾಜನು ಜನಿಸಿದ್ದನು. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಸಂಸ್ಕೃತ ಸಾಹಿತ್ಯವು ಬಹಳ ಉನ್ನತ ಸ್ಥಾನವನ್ನು ತಲುಪಿತ್ತು. 'ವಿಕ್ರಮಾಂಕ ದೇವಚರಿತ'ವೆಂಬ ಬಿಲ್ಹಣನ ಮೇರುಕೃತಿಯು ಇದಕ್ಕೆ ಸಾಕ್ಷಿಯಾಗಿದೆ. ಇವರ ಕಾಲದಲ್ಲಿ ಸಂಸ್ಕೃತಕ್ಕಿಂತ ಕನ್ನಡ ಶಾಸನಗಳೇ ಅಧಿಕವಾಗಿ ದೊರೆಯುತ್ತದೆ.

ಸಂಸ್ಕೃತ ಶಾಸನಗಳು

ಕಲ್ಯಾಣ ಚಾಲುಕ್ಯರು ಬಾದಾಮಿಯ ಚಾಲುಕ್ಯರ ವಂಶದವರೇ ಆದುದರಿಂದ ಕಲೆ, ಸಂಸ್ಕೃತಿ, ಸಂಪ್ರದಾಯಗಳಲ್ಲಿ ಅವರನ್ನೇ ಅನುಸರಿಸಿದ್ದಾರೆ. ಇದೇ ರೀತಿಯಾಗಿ ಶಾಸನಗಳು ಕೂಡಾ ಬಾದಾಮಿಯ ಚಾಲುಕ್ಯರ ಶಾಸನಗಳನ್ನೇ ಹೋಲುತ್ತವೆ. ನೀಲಗುಂದದಲ್ಲಿ ದೊರೆತಂತಹ ಆರನೆಯ ವಿಕ್ರಮಾದಿತ್ಯನ ಶಾಸನವು ಇದನ್ನು ಶ್ರುತಪಡಿಸುತ್ತದೆ.[೨೦] ಗದ್ಯ ಮತ್ತು ಶ್ಲೋಕದ ನಂತರ ವಂಶಾವಳಿಯನ್ನು ಹೇಳಿ ಗದ್ಯ ರೂಪದಲ್ಲಿ ಪ್ರಾರ್ಥನಾ ಶ್ಲೋಕದ ನಂತರ ವಂಶಾವಳಿಯನ್ನು ಗದ್ಯ ರೂಪದಲ್ಲಿ ಹೇಳಲಾಗಿದೆ. ಈ ಶಾಸನ ಕಲ್ಯಾಣ ಚಾಲುಕ್ಯರು ತಾವು ಬಾದಾಮಿಯ ಚಾಲುಕ್ಯರ ವಂಶದಿಂದ ಬಂದವರೆಂಬುವುದನ್ನು ದೃಢಪಡಿಸುತ್ತದೆ. ಹಾಗಾಗಿ ಬಾದಾಮಿ ಚಾಲುಕ್ಯರ ವಂಶವನ್ನು ತಿಳಿಸಿ ನಂತರ, ಕಲ್ಯಾಣ ಚಾಲುಕ್ಯರ ವಂಶವನ್ನು ಉಲ್ಲೇಖಿಸಿದೆ. ಇವರು ತಮ್ಮ ಶಾಸನಗಳಲ್ಲಿ 'ಚಾಳುಕ್ಯ ವಿಕ್ರಮಶಕೆ'ಯನ್ನು ಬಳಸಿದ್ದಾರೆ. ಈ ಶಕವರ್ಷವು ಆರನೆಯ ವಿಕ್ರಮಾದಿತ್ಯನಿಂದ ಪ್ರಚಾರಕ್ಕೆ ಬಂದಿತು. ಅಧ್ಯಯನಕ್ಕೆ ಯೋಗ್ಯವಾದ ಈ ಶಾಸನವು ವಿಕ್ರಮಾದಿತ್ಯನು ಕಲ್ಯಾಣಪುರದಲ್ಲಿ ನೆಲೆಸಿರಲು ದ್ರಾವಿಡ ದೇಶದಿಂದ ಬಂದಂತಹ ಬ್ರಾಹ್ಮಣರಿಗೆ ನೀರುಗುಂದ(ನೀಲಗುಂದ) ಗ್ರಾಮವನ್ನು ದಾನ ನೀಡಿದ ಉಲ್ಲೇಖಬರುತ್ತದೆ. ಸಂಪೂರ್ಣವಾಗಿ ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನವನ್ನು ಧಾನಾಧಿಕಾರಿಯಾದ ಕಾಶ್ಮೀರಭಟ್ಟ ಮಲ್ಲಯ ಪಂಡಿತನಿಂದ ಬರೆಯಲಾಗಿದೆ. ಒಂದು ಶಾಪಾಶಯದ ಶ್ಲೋಕವು ಈ ರೀತಿಯಾಗಿದೆ.

ವಿಂಧ್ಯಾಟವಿಷ್ವತೋಯಾಸು ಶುಷ್ಕ ಕೋಟರ ಶಾಯಿನಃ ।

ಕೃಷ್ಣ ಸರ್ಪಾಹಿ ಜಾಯಂತೇ ಬ್ರಹ್ಮ ದೇಯಾಪಹಾರಿಣಃ ।

((ಯಾರು ಬ್ರಹ್ಮದೇಯವನ್ನು ಅಪಹರಿಸುವವರೋ) ಅವರು ವಿಂಧ್ಯ ಪರ್ವತಗಳಲ್ಲಿರುವ ಶುಷ್ಕ ಮರಗಳ ಪೊಟರೆಯಲ್ಲಿ ವಾಸಿಸುವ ಕೃಷ್ಣ ಸರ್ಪಗಳಾಗಿ ಹುಟ್ಟುವರು.)

ಕ್ರಿ.ಶ. ೧೧ ರಿಂದ ೧೩ ನೆಯ ಶತಮಾನದವರೆಗೆ

ದ್ವಾರಸಮುದ್ರದ ಹೊಯಿಸಳರು

ಕರ್ನಾಟಕದ ಅಚ್ಚಕನ್ನಡಿಗ ರಾಜಮನೆತನವೆಂಬ ಉಪಾಧಿಯನ್ನು ಹೊಂದಿರುವ ಹೊಯಸಳರು ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿಸಿಕೊಂಡು ಕ್ರಿ.ಶ. ೧೦ನೆಯ ಶತಮಾನದಿಂದ ೧೩ನೆಯ ಶತಮಾನದ ತನಕ ಆಳಿದರು. ವಿಷ್ಣುವರ್ಧನನಂತಹ ಅಪ್ರತಿಮ ವೀರನನ್ನು ಕರ್ನಾಟಕ ಇತಿಹಾಸಕ್ಕೆ ನೀಡಿದ ರಾಜಮನೆತನ ಇದಾಗಿದೆ. ದ್ವೈತ ಮತದ ಸ್ಥಾಪಕರಾದ ಮಧ್ವಾಚಾರ್ಯರಿಗೆ ಮತ್ತು ವೈಷ್ಣವ ಮತ ಸ್ಥಾಪಕರಾದ ರಾಮಾನುಜಾಚಾರ್ಯರಿಗೆ ಆಶ್ರಯವನ್ನು ನೀಡಿ ಆ ತತ್ವಗಳ ಪೋಷಣೆಯನ್ನು ನೀಡಿದ ಪಾವನ ರಾಜವಂಶವಾಗಿದೆ. ಲೌಕಿಕ ಸಾಹಿತ್ಯಕ್ಕಿಂತಲೂ ಧರ್ಮಶಾಸ್ತ್ರ ವಿಷಯಕ ಗ್ರಂಥಗಳಿಗೇ ಈ ಕಾಲದಲ್ಲಿ ಹೆಚ್ಚಿನ ಪ್ರಾಧಾನ್ಯ ದೊರೆದಿತ್ತು.[೨೧] ದ್ವೈತ, ವಿಶಿಷ್ಟಾದ್ವೈತ ಮತಗಳಲ್ಲದೇ ಅದ್ವೈತ, ವೀರಶೈವಧರ್ಮ ಮತ್ತು ಜೈನ ಧರ್ಮಗಳು ಕೂಡ ಈ ಕಾಲದಲ್ಲಿ ಹೆಚ್ಚಿನ ಪೋಷಣೆಗಳನ್ನು ಪಡೆದವು.

ಹಿಂದೆ ತಿಳಿಸಿದಂತೆ ಅಚ್ಚಕನ್ನಡಿಗ ರಾಜಮನೆತನವಾದ ಈ ವಂಶವು ಕನ್ನಡಕ್ಕೆ ಹೆಚ್ಚು ಪ್ರೋತ್ಸಾಹವನ್ನು ನೀಡಿದರು. ಆ ದೃಷ್ಟಿಯಿಂದಲೋ ಏನು ಈ ಕಾಲದಲ್ಲಿ ಸಂಸ್ಕೃತ ಶಾಸನಗಳು ಕಡಿಮೆ ಪ್ರಮಾಣದಲ್ಲಿ ದೊರಕುತ್ತವೆ. ಈ ಹಂತದಲ್ಲಿ ಸಂಸ್ಕೃತ ಶಾಸನಗಳಿಗೆ ಕನ್ನಡದ ಪ್ರಭಾವ ಅಧಿಕವಾಗಿ ಕಂಡುಬರುತ್ತದೆ. ಏಕೆಂದರೆ ಗ್ರಾಮದ ಸೀಮೆಗಳನ್ನು ಸ್ಪಷ್ಟವಾಗಿ ಜನರಿಗೆ ತಿಳಿಯಲೆಂದು ಕನ್ನಡ ಭಾಷೆಯಲ್ಲಿಯೇ ನೀಡಿದ್ದಾರೆ.

ಸಂಸ್ಕೃತ ಶಾಸನಗಳ ಸ್ವರೂಪ

ಈ ಕಾಲದ ಎಲ್ಲಾ ಶಾಸನಗಳು ಕಾವ್ಯಮಯವಾಗಿದ್ದು ಗ್ರಾಮದ ಸೀಮೆಗಳು ಮಾತ್ರ ಹಳೆಗನ್ನಡ ಗದ್ಯಶೈಲಿಯಲ್ಲಿದೆ. ಶಾಸನದ ಪ್ರಾರಂಭದಲ್ಲಿ ವಿಷ್ಣುವನ್ನು ಅದರಲ್ಲೂ ವರಾಹವತಾರವನ್ನು ಬಹುವಾಗಿ ವರ್ಣಿಸಲಾಗಿದೆ. ವಿಷ್ಣುವಿನ ವರಾಹವತಾರವನ್ನು ವಿವಿಧ ರೀತಿಯ ಶ್ಲೋಕಗಳಲ್ಲಿ ಚಿತ್ರಿಸಲಾಗಿದೆ. ಬೇಲೂರಿನ ಶಾಸನದಲ್ಲಿರುವ ಪ್ರಸಿದ್ಧ ಶ್ಲೋಕ ಈ ರೀತಿಯಾಗಿದೆ.

ಶ್ರೀಮತ್ರೈಲೋಕ್ಯ ಪೂಜ್ಯಾಯ ಸರ್ವಕರ್ಮಸು ಸಾಕ್ಷಿಣೇ ।
ಫಲದಾಯ ನಮೋ ನಿತ್ಯಂ ಕೇಶವಾಯ ಶಿವಾಯ ಚ ।[೨೨]

(ತ್ರೈಲೋಕ್ಯ ಪೂಜಿತರೂ, ಎಲ್ಲಾ ಕರ್ಮಗಳಿಗೆ ಸಾಕ್ಷಿಗಳೂ, ನಿತ್ಯವೂ ಫಲವನ್ನು ಕೊಡುವವರೂ ಆದ ಕೇಶವ ಮತ್ತು ಶಿವರಿಗೆ ನಮಸ್ಕಾರಗಳು.)

ಇವರ ವಂಶಾವಳಿಯ ಉತ್ಪತ್ತಿಯು ಪೌರಾಣಿಕವಾಗಿದೆ. ಬ್ರಹ್ಮನ ನಾಭಿಕಮಲದಿಂದ ಅತ್ರಿಯು, ಅತ್ರಿಯಿಂದ ಚಂದ್ರನು, ಚಂದ್ರನಿಂದ ಬುಧನೂ, ಬುಧನಿಂದ ಪುರೂರವನೂ, ಇವನಿಂದ ಆಯುವೂ, ಅವನಿಂದ ನಹುಷನೂ, ನಹುಷನಿಂದ ಯಯಾತಿಯೂ, ಯಯಾತಿಯಿಂದ ಯದುವು ಜನಿಸಿದನು. ಈ ವಂಶದಲ್ಲಿ ಸಳನು ಜನಿಸಿದನು. ಮುಂದೆ ಈತನಿಂದಲೇ ಹೊಯಿಸಳವೆಂಬ ಹೆಸರು ಪ್ರಸಿದ್ಧಿಯಾಯಿತು. ಈ ವಿಚಾರವು ಎಲ್ಲಾ ಶಾಸನಗಳಲ್ಲಿ ದೊರೆಯುತ್ತದೆ. ಚಾಲುಕ್ಯ ಅರಸರ ಶಾಸನಗಳಲ್ಲಿ ವಿಷಯಾನುಕ್ರಮಣಿಕಗಳು ಒಂದು ಹಂತಕ್ಕೆ ತಲುಪಿದ್ದವು. 'ಪಲ್ಲಿ' ಶಬ್ದವು ಹಳ್ಳಿ ಎಂಬ ಅರ್ಥದಲ್ಲಿ ಬಳಸಲಾಗಿದೆ. ಶಾಸನದ ಕೊನೆಯಲ್ಲಿ ಷರಾ ಹಾಕುವ ಕ್ರಮವೂ ಕೂಡಾ ಇಲ್ಲಿಂದ ಪ್ರಾರಂಭವಾಗಿದೆ. ದ್ವಿರುಕ್ತಿ ಉಳ್ಳಂತಹ ಸುಂದರ ಚಿತ್ರ ಕಾವ್ಯವು ಈ ರೀತಿಯಾಗಿದೆ.[೨೩]

ಭೇದಂ ಭೇದಂ ಕರಿವರ ಘಟಾಂ ಶತ್ರುಸೈನ್ಯಸ್ಯ ವೀರಃ ।
ಖಂಡಂ ಖಂಡಂ ಯುಧಿಹಯಗಣಾನ್ಸಾದಿನೋ ಯಶ್ಚ ಬಾಲ್ಯೇ ।
ಭಂಗಂ ಭಂಗಂ ಪೃಥುರಥಚಯಾ ನ್ವೀರಯೋಧಾಧಿರೂಡಾನ್ ।
ಚೇದಂ ಚೇದಂ ನರವರ ಶಿರಾಂ ಸ್ಯೇಷ ಕೇಳಿಂ ಕರೋತಿ ॥

(ಶತ್ರು ಸೈನ್ಯದ ಮದಗಜಗಳನ್ನು ಭೇದಿಸಿ ಭೇದಿಸಿ, ಕುದುರೆಗಳ ಸಮೂಹವನ್ನು ಖಂಡಿಸಿ ಖಂಡಿಸಿ, ವೀರ ಯೋದರಿಂದ ಆಶ್ರಿತವಾದಂತಹ ರಥಗಳನ್ನು ಪುಡಿ ಪುಡಿ ಮಾಡಿ ಮತ್ತು ವೀರ ಯೋಧರ ಶಿರಸ್ಸನ್ನು ಛಿದ್ರ ಛಿದ್ರಗೊಳಿಸಿ ಚೆಂಡಾಡುವುದು ಈತನಿಗೆ (ನಾರಸಿಂಹ) ಆಟಕ್ಕೆ ಸಮಾನವಾದುದಾಗಿದೆ.)

ರಾಜರಿಗೆ ಗೌರವ ಸೂಚಿಸುವಾಗ ಅಥವಾ ಬಿರುದನ್ನು ಹೇಳುವಾಗ ಸಂಸ್ಕೃತ ಶಬ್ದವನ್ನೇ ಬಳಸಿ ಕೊನೆಗೆ ಕನ್ನಡದ ಪ್ರತ್ಯಯವನ್ನು ಸೇರಿಸುತ್ತಿದ್ದರು ಉದಾ : 'ಕೇರಳನರೇಶ್ವರ ಹಾಳಾಹಳನುಂ', 'ಲಾಳವಿಷಯಕಾಳಭೈರನುಂ'. ಶಕವರ್ಷಗಳನ್ನು ಶಬ್ದಗಳಲ್ಲಿ ಹೇಳಿ ಪುನಃ ಅಂಕೆಯಲ್ಲೂ ಹೇಳುವ ಕ್ರಮ ಕಂಡುಬರುತ್ತದೆ. ಹೊಯ್ಸಳ ವೀರಬಲ್ಲಾಳನ ಒಂದು ಶಾಸನದಿಂದ[೨೪] ಹೊಯ್ಸಳರು ಶೈವಸಿದ್ಧಾಂತಕ್ಕೂ ಪ್ರೋತ್ಸಾಹ ಕೊಡುತ್ತಿದ್ದರೆಂದು ತಿಳಿಯುತ್ತದೆ. ವೀರಬಲ್ಲಾಳನು ''ಕಾಳಮುಖಾಚಾರ್ಯ" ಸೋಮೇಶ್ವರ ದೇವನ ಶಿಷ್ಯನಾದ ಸಿದ್ಧಾಂತಿ ಚಂದ್ರಭೂಷಣ

ಪಂಡಿತದೇವನಿಗೆ ಭೂದಾನವನ್ನು ನೀಡಿದ ಉಲ್ಲೇಖ ಬರುತ್ತದೆ. ಇದೇ ಶಾಸನದ ಕೊನೆಯಲ್ಲಿ ಬರುವಂತಹ ಭೂದಾನದ ಮಹತ್ವವನ್ನು ತಿಳಿಸುವ ಶ್ಲೋಕ ಈ ರೀತಿಯಾಗಿದೆ.

ಗಣ್ಯಂತೇ ಪಾಂಸವೋ ಭೂಮೇರ್ಗ್ಗಣ್ಯಂತೇ ವೃಷ್ಟಿಬಿಂದವಃ |
ನ ಗಣ್ಯತೇ ವಿಧಾತ್ರಾಪಿ ಧರ್ಮಸಂರಕ್ಷಣೇ ಫಲಂ ||

(ಭೂಮಿಯಲ್ಲಿರುವ ದೂಳಿನ ಕಣಗಳನ್ನು ಎಣಿಸಬಹುದು, ಮಳೆ ಹನಿಗಳನ್ನು ಎಣಿಸಬಹುದು ಆದರೆ ಧರ್ಮಸಂರಕ್ಷಣೆಯಿಂದ ಉಂಟಾಗುವ ಫಲವನ್ನು ವಿಧಾತಾರನಿಂದಲೂ ಎಣಿಸಲಾಗದು.) ಈ ಶಾಸನದ ಸ್ವರೂಪಕ್ಕೆ 'ಶಾಸನ ಪದ್ಧತಿಃ' ಎಂಬ ಸುಂದರ ಹೆಸರನ್ನು ನೀಡಲಾಗಿದೆ.

ಅಧೀನ ರಾಜಕುಲಗಳು

ಚಂಗಾಳ್ವರು : ಚಂಗಾಳ್ವರು ಮೈಸೂರು ಜಿಲ್ಲೆಯ ಪಶ್ಚಿಮ ಭಾಗಗಳನ್ನು, ಕೊಡಗನ್ನು ಬಹುಕಾಲ ಆಳಿದರು. ಈ ವಂಶಕ್ಕೆ ಸಂಬಂಧಿಸಿದ ಒಂದು ಸಂಸ್ಕೃತ ಶಾಸನವು ಪಿರಿಯಾಪಟ್ಟಣದ ಹಿರೇಮಳಲಿಯಲ್ಲಿ ದೊರಕಿದೆ. ಚಂದ್ರವಂಶದಲ್ಲಿ ಹುಟ್ಟಿದ ರಾಜ ಚಂಗಾಳ್ವನು ಇರುವನು, ಇವನ ವಂಶದಲ್ಲಿ 'ನಾಗ', 'ರಂಗ', 'ಪಿರ್ಯಾನ್ನ', 'ನಂಜ' ಎಂಬ ರಾಜರು ಜನಿಸಿದರು. ಶೈವ ಸಿದ್ಧಾಂತ ಕೋವಿದನಾದ ನಂಜನ ಸಹೋದರನಾದ ರಾಜ ಮಹದೇವನು 'ಅನ್ನದಾನಿ ಲಿಂಗ' ದೇವರಿಗೆ 'ಹಿರ್ಯಮಳಲಿ' ಗ್ರಾಮವನ್ನು ದಾನ ಮಾಡಿದ ಉಲ್ಲೇಖ ನೀಡುತ್ತದೆ.

ಉಚ್ಚಂಗಿಯ ಪಾಂಡ್ಯರು : ನೊಳಂಬವಾಡಿಯ ಅರಸರಾಗಿದ್ದಂತಹ ಪಾಂಡ್ಯರನ್ನು ಉಲ್ಲೇಖಿಸುವಂತಹ ಒಂದು ಸಂಸ್ಕೃತ ಶಾಸನವನ್ನು ಹರಪನಹಳ್ಳಿ ತಾಲೂಕಿನ ಬಾಗಳಿ ಗ್ರಾಮದ ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ದೊರಕಿದೆ. ಈ ಸಂಸ್ಕೃತ ಶಾಸನವು ಪಾಂಡ್ಯರ ಸಂಪೂರ್ಣ ವಂಶಾವಳಿಯನ್ನು ತಿಳಿಸುತ್ತದೆ. ಈ ಶಾಸನವು ಪ್ರೌಢವಾದ ಸಾಹಿತ್ಯವನ್ನು ಹೊಂದಿದೆ.

ದೇವಗಿರಿಯ ಯಾದವರು : ೧೩ನೆಯ ಶತಮಾನದಲ್ಲಿ, ಪ್ರಾಬಲ್ಯಕ್ಕೆ ಬಂದಂತಹ ದೇವಗಿರಿಯ ಯಾದವ ವಂಶವನ್ನು 'ಸೇವುಣ'ರೆಂದೂ ಕರೆಯುತ್ತಾರೆ. ಈ ವಂಶಕ್ಕೆ ಸಂಬಂಧಿಸಿದ ಸಂಸ್ಕೃತ ಶಾಸನಗಳು ದೊರಕುತ್ತವೆ. ಪ್ರಧಾನವಾಗಿ ೪ ಶಾಸನಗಳು ದೊರಕಿವೆ. ಎಲ್ಲವೂ ತಾಮ್ರ ಶಾಸನಗಳಾಗಿವೆ. ಈ ಎಲ್ಲಾ ಶಾಸನಗಳು ಸಾಹಿತ್ಯ ದೃಷ್ಟಿಯಿಂದ ಪ್ರೌಢವಾಗಿದ್ದ ಹೊಯ್ಸಳರ ಶಾಸನಗಳನ್ನು ಅನುಸರಿಸುತ್ತಿರುವಂತಿದೆ. ಎಲ್ಲಾ ಶಾಸನಗಳು ಪದ್ಯ ಶೈಲಿಯಲ್ಲಿದ್ದು ಸುಂದರ ರಚನೆಯಾಗಿದೆ.

ಮಹಾಮಂಡಳೇಶ್ವರರು

ರಾಜರ ದಿಗ್ವಿಜಯ ಯಾತ್ರೆಗಳಲ್ಲಿ, ಕ್ಷೇತ್ರದಲ್ಲಿಯೂ ಪ್ರಧಾನ ಪಾತ್ರವನ್ನು ವಹಿಸಿದಂತಹ ಮಹಾಮಂಡಲೇಶ್ವರರು ಆಡಳಿತದಲ್ಲಿ 'ಮಹಾಪ್ರಧಾನ', 'ದಂಡನಾಯಕ' ಮೊದಲಾದ ಸ್ಥಾನವನ್ನು ಅಲಂಕರಿಸಿದ್ದರು. 'ಶಿಲಾಹಾರ'ರು ಕರ್ನಾಟಕದ ಮಹಾಮಂಡಳೇಶ್ವರರಲ್ಲಿ ಪ್ರಧಾನರು. ಇವರ ಕಾಲದ ಸಂಸ್ಕೃತ ಶಾಸನಗಳು ದೊರಕುತ್ತವೆ. ಇವರ ಶಾಸನಗಳಲ್ಲಿ ರಾಷ್ಟ್ರಕೂಟರ ಶಾಸನಗಳ ಪ್ರಭಾವವಿದೆ. ತಮ್ಮನ್ನು ವಿದ್ಯಾಧರಾಧಿಪತಿ ಜೀಮೂತವಾಹನನ ವಂಶಜರೆಂದು ಹೇಳಿಕೊಂಡಿದ್ದಾರೆ.

<u>ಕ್ರಿಶ ೧೩ ರಿಂದ ಕ್ರಿ.ಶ. ೧೭ನೆಯ ಶತಮಾನದವರೆಗೆ</u>

ವಿಜಯನಗರದ ಅರಸರು

ವಿಜಯನಗರದ ಸಾಮ್ರಾಜ್ಯದ ಬಗ್ಗೆ ವರ್ಣನೆ ಮಾಡುವುದು ಈ ಅಧ್ಯಯನದಲ್ಲಿ ಅಸಾಧ್ಯವಾದ ಮಾತಾಗಿದೆ. ಹಿಂದೂ ಸಾಮ್ರಾಜ್ಯವನ್ನು ಪ್ರತಿಷಾ«ಪಿಸಿ ಹಿಂದೂ ಧರ್ಮವನ್ನು ಬಲಪಡಿಸಬೇಕೆಂಬ ಸದುದ್ದೇಶದಿಂದ ಸ್ಥಾಪನೆಯಾದ ಈ ಸಾಮ್ರಾಜ್ಯವು ಭಾರತೀಯ ಇತಿಹಾಸದಲ್ಲಿ ಭದ್ರವಾದ ಸ್ಥಾನವನ್ನು ಪಡೆದಿದೆ. ಕರ್ನಾಟಕ ಎಂದ ಕೂಡಲೇ ನೆನಪಾಗುವುದು 'ವಿಜಯನಗರ', ರಾಜರು ಎಂದ ಕೂಡಲೇ ನೆನಪಾಗುವುದು ಕೃಷ್ಣದೇವರಾಯ. ಧಾರ್ಮಿಕ, ರಾಜನೀತಿಕ, ಸಾಂಸ್ಕೃತಿ ಮತ್ತು ಸಾಹಿತ್ಯಿಕ ವಿಚಾರಗಳಲ್ಲಿ 'ಸುವರ್ಣಯುಗ'ವನ್ನು ಹೊಂದಿದ ಕಾಲವಿದಾಗಿದೆ. ಅದೇ ರೀತಿಯಾಗಿ ಶಾಸನ ಪ್ರಪಂಚದಲ್ಲೂ ಕೂಡಾ ಈ ಕಾಲವನ್ನು 'ಸುವರ್ಣಯುಗ'ವೆಂದು ಹೇಳಬಹುದು. ಈ ರಾಜರ ಆಳ್ವಿಕೆಯಲ್ಲಿ ಬಹುಪಾಲು ಶಾಸನಗಳು ಬೆಳಕಿಗೆ ಬಂದಿವೆ. ಅದರಲ್ಲಿ ಶ್ರೀಕೃಷ್ಣದೇವರಾಯನ ಪಾತ್ರ ಬಹುವಾಗಿದೆ. ಸಂಗಮ, ಸಾಳುವ, ತುಳುವ ಮತ್ತು ಅರವೀಡು ಎಂಬಂತಹ ನಾಲ್ಕು ರಾಜಮನೆತನಗಳು ವಿಜಯನಗರ ಸಾಮ್ರಾಜ್ಯವನ್ನು ಆಳಿದ್ದಾರೆ. ಈ ನಾಲ್ಕು ವಂಶಕ್ಕೆ ಸಂಬಂಧಿಸಿದ ಶಾಸನಗಳು ದೊರೆಯುತ್ತವೆ.

ವಿಜಯನಗರ ಅರಸರ ಕಾಲವು ಇತಿಹಾಸದಲ್ಲಿ ಸುವರ್ಣಯುಗವಾಗಿರುವಂತೆ ಸಂಸ್ಕೃತ ಶಾಸನ ಕ್ಷೇತ್ರದಲ್ಲೂ ಸುವರ್ಣಯುಗವನ್ನು ಹೊಂದಿದೆ. ಅಧಿಕ ಸಂಸ್ಕತ ಶಾಸನಗಳು ಈ ಅರಸರ ಅವಧಿಯಲ್ಲೇ ದೊರಕಿದೆ. ವಿಜಯನಗರ ಅರಸರ ೪ ಮನೆತನದವರ ಶಾಸನಗಳು ಭಿನ್ನ ಭಿನ್ನವಾಗಿದೆ. ಶ್ರೀಕೃಷ್ಣದೇವರಾಯನಿಗೆ ಸಂಬಂಧಿಸಿದ ಶಾಸನಗಳು ಅಧಿಕವಾಗಿ ಕಂಡುಬರುತ್ತದೆ. ಸಂಸ್ಕೃತ ಶಾಸನಗಳು ಪೂರ್ಣ ಸ್ವರೂಪಕ್ಕೆ ಬಂದಂತಹ ಕಾಲವಿದಾಗಿದೆ. ಹಲವಾರು ಐತಿಹಾಸಿಕ ಮಹತ್ವವನ್ನು ಪಡೆದಂತಹ ಶಾಸನಗಳು ಈ ಕಾಲದಲ್ಲಿ ದೊರಕುತ್ತವೆ. ಶಾಸನಗಳ ಪ್ರಾರಂಭದಲ್ಲಿ 'ನಮಸ್ತುಂಗ ಶಿರಶ್ಚುಂಬಿ.....' ಎಂಬ ಪ್ರಸಿದ್ಧ ಶ್ಲೋಕವಿದೆ. ಇದರ ನಂತರ ಪೌರಾಣಿಕ ಹಿನ್ನಲೆಯುಳ್ಳ ವಂಶಾವಳಿ ಇರುತ್ತದೆ. ಕೃಷ್ಣದೇವರಾಯನ ಎಲ್ಲಾ ಶಾಸನಗಳು ಒಂದೇ ರೀತಿಯದಾಗಿದೆ. ಎಲ್ಲಾ ಶಾಸನಗಳಲ್ಲಿ ದಾನ ಕೊಡುವ ರಾಜನ ವರ್ಣನೆಯ ನಂತರ ಆ ರಾಜನು 'ಸಃ ವಿಜಯನಗರೇ ರತ್ನ ಸಿಂಹಾಸನಸ್ಥಃ'

ಎಂದು ವಿಜಯನಗರ ರಾಜಧಾನಿಯ ಸ್ಪಷ್ಟ ಚಿತ್ರಣವಿದೆ. ಶಕವರ್ಷಗಳ ಉಲ್ಲೇಖವನ್ನು ನೇರವಾಗಿ ಸಂಖ್ಯೆಗಳ ಉಲ್ಲೇಖದಿಂದಲೂ ಮತ್ತು ವಸ್ತುಗಳ ಸಂಖ್ಯೆಯ ಆಧಾರದಲ್ಲೂ (ಸೂರ್ಯ-೧, ಕಣ್ಣು-೨ ಇತ್ಯಾದಿ) ಹೇಳಲಾಗಿದೆ. ಎಲ್ಲಾ ಶಾಸನಗಳನ್ನು ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಕೊಡಲಾಗಿದೆ. 'ಹಳ್ಳಿ' ಶಬ್ದವನ್ನು ಹೆಚ್ಚಾಗಿ ಬಳಸಲಾಗಿದೆ. (ಉದಾ : ಬೊಮ್ಮನಹಳ್ಳಿ). ದಾನ ನೀಡಿದ ಅಗ್ರಹಾರದ ಸ್ವರೂಪವನ್ನು (ನಿಧಿ ನಿಕ್ಷೇಪ ಪಾಷಾಣ...) ಸುಂದರವಾಗಿ ಚಿತ್ರಿಸಲಾಗಿದೆ. ಹಳ್ಳಿಗಳ ಹೆಸರನ್ನು ಹೇಳುವಾಗ ಸವರ್ಣ ದೀರ್ಘ ಸಂಧಿಯನ್ನು ಬಳಸಲಾಗಿದೆ. (ಉದಾ : ಮೊದಲವಾಡೀತಿ). ಶಾಸನ ಲೇಖಕರ ಹೆಸರನ್ನು ಶಾಸನದ ಕೊನೆಯಲ್ಲಿ ಹೇಳದೆ ಶಾಪಾಶಯಕ್ಕಿಂತ ಮೊದಲು ತಿಳಿಸುತ್ತಾರೆ. ಶಾಸನ ರಚಿಸಿದವನೂ, ಶಾಸನ ಕಂಡರಿಸಿದವನ ಹೆಸರನ್ನೂ ತಿಳಿಸುತ್ತಿದ್ದರು.

ಕಮಲಾಪುರದಲ್ಲಿ ದೊರಕಿದ ಕೃಷ್ಣದೇವರಾಯ ಕಾಲದ ತಾಮ್ರ ಶಾಸನವು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಸಂಪೂರ್ಣ ಸಂಸ್ಕೃತ ಶಾಸನವಾಗಿದ್ದು, ೧೧ ಹಲಗೆಯನ್ನುಳ್ಳ ದೊಡ್ಡ ಶಾಸನವಾಗಿದೆ.[೨೫] ಕೃಷ್ಣದೇವ ರಾಯನು ವ್ಯಾಸತೀರ್ಥರಿಗೆ ಭೂದಾನವನ್ನು ನೀಡಿರುವನು, ಈ ಭೂದಾನವನ್ನು ವ್ಯಾಸತೀರ್ಥರು ವೃತ್ತಿಯನ್ನಾಗಿ ಪರಿವರ್ತಿಸಿ ಉಳಿದ ಬ್ರಾಹ್ಮಣರಿಗೆ ವಿಭಾಗಿಸಿ ನೀಡುತ್ತಾರೆ. ಈ ರೀತಿಯಾಗಿ ವಿಭಾಗಿಸಿ ನೀಡಿದ ಬ್ರಾಹ್ಮಣರಲ್ಲಿ ಪುರಂದರ ದಾಸ ಮತ್ತು ಅವರಿಬ್ಬರ ಪುತ್ರರ ಉಲ್ಲೇಖವಿರುತ್ತದೆ. ಶೃಂಗೇರಿಯಲ್ಲಿರುವಂತಹ ಶಾಸನವು 'ವಿದ್ಯಾರಣ್ಯ' ಮುನಿಗಳನ್ನು ವರ್ಣಿಸಿದೆ.[೨೬] ಶ್ಲೋಕ ಈ ರೀತಿಯಾಗಿದೆ

ಕಿಂ ಬ್ರಹ್ಮಾನ ಚತುರ್ಮುಖಿ ಕಿಮುಹರಿರ್ದ್ದೋಷ್ಣೋರ್ನಚಾಂಮ್ರೇಡಿತಂ ।
ಕಿಂ ವಾ ಶಂಭುರಸೌನದೃಷ್ಟಿವಿಷಯೇ ವೈಷಮ್ಯಮಾಲಕ್ಷತ ।
ಇತ್ಯಾಲೋಚ್ಯ ಚಿರವಿನಿಶ್ಚಿತಧಿಯಃ ಪಶ್ಚಾದಿಪಶ್ಚಿದ್ಗಣ ।
ವಿದ್ಯಾರಣ್ಯಂ ಗುರುಂ ಕಿಮಪ್ಯವಯ ವಿಜ್ಯೋತಿಃ ಪರಂಮನ್ವತೇ ॥

(ಈತನು ಬ್ರಹ್ಮನೇ? ಆದರೆ ಈತನು ಚತುಮುರ್ಖನಲ್ಲ, ಈತನು ವಿಷ್ಣುವೇ? ಆದರೆ ಈತನು ಚತುರ್ಭುಜನಲ್ಲ, ಈತನು ಶಂಭುವೋ? ಆದರೆ ಈತನ ಕಣ್ಣಿನಲ್ಲಿ ಯಾವುದೇ ವೈಪರೀತ್ಯವಿಲ್ಲ - ಈ ರೀತಿಯಾಗಿ ಆಲೋಚಿಸಿದ ವಿದ್ವಾಂಸರು ಬಹಳವಾಗಿ ಚರ್ಚಿಸಿ ತ್ರಿಮೂರ್ತಿಗಳಿಗಿಂತಲೂ ಮಿಗಿಲಾಗಿ 'ವಿದ್ಯಾರಣ್ಯ' ಗುರುವನ್ನು ಜಗತ್ತಿನ ಜ್ಯೋತಿಯೆಂದು ತಿಳಿದರು.)

ಹೆಗ್ಗಡದೇವನ ಕೋಟೆ ತಾಲೂಕು ತಗರೆಯ ಶಾಸನದಲ್ಲಿ [೨೭] ಕರ್ನಾಟಕವನ್ನು ಈ ರೀತಿ ವರ್ಣಿಸಿದ್ದಾರೆ. "ಪಂಚಾಶತ್ಕೋಟಿ ವಿಸ್ತೀರ್ಣ ಭೂಮಂಡಲಾಂತವರ್ತಿ ಶ್ರೀಮತ್ ಕರ್ನಾಟ ದೇಶ ಶಿಖಾಮಣಿ" (೫೦ ಕೋಟಿ ವಿಸ್ತೀರ್ಣವಾದ ಭೂಮಂಡಲದ ಶಿಖಾಮಣಿಯಂತಿರುವ ಕರ್ನಾಟ ದೇಶದಲ್ಲಿ.) ಕೃಷ್ಣರಾಜಗರ ತಾಲೂಕಿನ ಹೆಬಸೂರಿನಲ್ಲಿ ದೊರೆತ ಶಾಸನವು [೨೮] ಸಂಗಮ

ವಂಶದ ಉತ್ಪತ್ತಿಯನ್ನು ತಿಳಿಸಿದರೆ, ನಂಜನಗೂಡು ತಾಲೂಕು, ಗಜ್ಜಿಗನಹಳ್ಳಿಯ ಶಾಸನವು [೨೯] ಅರವೀಡು ವಂಶದ ಉತ್ಪತ್ತಿಯನ್ನು ತಿಳಿಸಿದೆ. ಹೆಗ್ಗಡದೇವನ ಕೋಟೆ ತಾ, ಸರಗೂರಿನ ಶಾಸನವು [೩೦] ಸಾಳುವ ವಂಶದ ಉತ್ಪತ್ತಿಯನ್ನು ತಿಳಿಸಿದೆ. ಕೃಷ್ಣದೇವರಾಯನ ಎಲ್ಲಾ ಶಾಸನಗಳಲ್ಲಿ ತುಳುವ ವಂಶದ ಉತ್ಪತ್ತಿಯು ದೊರೆಯುತ್ತದೆ. ತುಳುವ ವಂಶದ ಶಾಸನಗಳಲ್ಲಿ 'ಬಿರುದು' ಶಬ್ದವನ್ನು ಬಳಸಲಾಗಿದೆ. ಹಂಪಿಯಲ್ಲಿ ಗಜಶಾಲೆಯ ಹಿಂದೆ ಇರುವ ಜೈನ ಬಸದಿಯ ಗೋಡೆಯಲ್ಲಿರುವ ಅಭಿನವ ದೇವರಾಜನನ್ನು ಉಲ್ಲೇಖಿಸುವ ಒಂದು ಶಾಸನವು ಹಂಪಿಯಲ್ಲಿ 'ಕ್ರಮುಕ ಕರ್ಣಾಪಣ ಬೀದಿ'ಯ ಮಾಹಿತಿಯನ್ನು ಕೊಡುತ್ತದೆ. ಅದೇ ರೀತಿಯಾಗಿ ಹಂಪಿಯ ವೈಭವವನ್ನು ಈ ರೀತಿಯಾಗಿ ವರ್ಣಿಸಿದೆ [೩೧]

ದೇಶಃ ಕರ್ಣಾಟನಾಮಾಭೂದಾವಾಸಃ ಸರ್ವ ಸಂಪದಾಂ ।
ವಿಡಂಬಯತಿ ಯಃ ಪುರೋಡಾಶಾಶನಾಶ್ರಯಂ ।
ವಿಜಯನಗರೀತಿ ತಸ್ಮಿನ್ನಗರೀ ನಗರೀತಿ ರಮ್ಯಹರ್ಮ್ಯಾಸ್ತೇ
ನಗರೀಷು ನಗರೀ ಯಸ್ಯಾ ನಗರೀಯಸ್ಯೇವ ಗುರುಭಿರೈಶ್ವರ್ಯೈಃ ।
ಕನಕೋಜ್ವಲಸಾಲ ರಶ್ಮಿಜಾಲೈಃ ಪರಿಖಾಂಬು ಪ್ರತಾಬಿಂಬಿತೈರಲಂ ।
ಯಾ ವಸುದೇವ ವಿಭಾತಿ ಬಾಡಾಬಾರ್ಚ್ಚಿರ್ವೃತ ರತ್ನಾಕರ ಮೇಖಲಾಪರೀತಾ॥

(ಎಲ್ಲಾ ಸಂಪತ್ತುಗಳಿಂದ ಕೂಡಿದ 'ಕರ್ನಾಟ'ವೆಂಬ ಭೂಪ್ರದೇಶವಿದೆ. ಈ ನಗರವು ಸ್ವರ್ಗವನ್ನೇ ಪರಿಹಾಸ್ಯಗೊಳಿಸುವಂತಿತ್ತು. ಈ ದೇಶದಲ್ಲಿ 'ವಿಜಯನಗರ'ವೆಂಬ, ದೊಡ್ಡ ದೊಡ್ಡ ಅರಮನೆಗಳಿಂದ ಕೂಡಿದ, ನಗರಗಳಿಗೆ ನಗರವಾದ ಮತ್ತು ಐಶ್ವರ್ಯಗಳಿಂದ ತುಂಬಿ ತುಳುಕುವಂತಹ ನಗರಿವಿದೆ.)

ಹಂಪಿಯ ಗಾಣಿಗಿತ್ತಿ ಬಸದಿಯ ಮುಂದಿನ ಸ್ತಂಭದಲ್ಲಿರುವ ಶಾಸನವು ವಿಜಯನಗರದ ವೈಭವವನ್ನು ಈ ರೀತಿಯಾಗಿ ವರ್ಣಿಸುತ್ತದೆ.[೩೨]

ಅಸ್ತಿ ವಿಸ್ತೀರ್ಣ ಕರ್ಣಾಟ ದಾರಾ ಮಂಡಲ ಮಧ್ಯಗಃ ।
ವಿಷಯಃ ಕುಂತಲೋ ನಾಮ್ನಾ ಭೂಕಾಂತಾಕುಂತಲೋಪಮಃ ।
ವಿಚಿತ್ರ ರತ್ನರುಚಿರಂ ತತ್ರಾಸ್ತಿ ವಿಜಯಾಭಿದಂ ।
ನಗರಂ ಸೌಧ ಸಂದೋಹಃ ದರ್ಶಿತಾ ಕಾಂಡ ಚಂದ್ರಿಕಂ ।
ಮಣಿ ಕುಟ್ಟಿಮ ವೀಥೀಷು ಮುಕ್ತಸೈಕತ ಸೇತುಭಿಃ ।
ದಾಬೂನಿ ನಿರುಂಧಾನಾ ಯತ್ರಕ್ರೀಡಂತಿ ಬಾಲಿಕಾಃ ।

(ವಿಸ್ತೀರ್ಣವಾದ 'ಕರ್ಣಾಟ' ದೇಶದ ಮಧ್ಯದಲ್ಲಿರುವ, ಭೂಕಾಂತೆಗೆ ಕುಂತಲದಂತಿರುವ ಕುಂತಳ ಎಂಬ ವಿಷಯದಲ್ಲಿ, ವಿಚಿತ್ರವಾದ ರತ್ನಗಳಿಂದ ಸುಂದರವಾಗಿ ಕಂಡುಬರುವ ಸೌಧ

ಸಮೂಹಗಳಿಂದ ಸುಂದರವಾಗಿರುವ, ರತ್ನಖಚಿತವಾದ ಬೀದಿಗಳಲ್ಲಿ, ಮುತ್ತುಗಳೆಂಬ ಮರಳುಗಳಿಂದ ನಿರ್ಮಿಸಲ್ಪಟ್ಟ ಸೇತುವೆಗಳಲ್ಲಿ ಬಾಲಿಕೆಯರು ಕ್ರೀಡಿಸುತ್ತಿರುವರು.)

ಸಂಸ್ಕೃತ ಶಾಸನಗಳಲ್ಲಿ ಶಾಸನಗಳನ್ನು ರಚಿಸಿದವರ ಹೆಸರನ್ನು 'ಸಭಾಪತಿ'ಯೆಂದು, ಅವರ ಮೃದುವಾದ ವಾಕ್ಯಗಳನ್ನನುಪರಿಸಿ ನಲ್ಲಣನ ಪುತ್ರನಾದ ವೀರಣನು ಶಾಸನವನ್ನು ಕಂಡರಿಸಿದನೆಂದು ತಿಳಿದುಬರುತ್ತದೆ.

ಮೈಸೂರು ಒಡೆಯರು

ಕ್ರಿ.ಶ. ೧೫೬೫ರಲ್ಲಿ ತಾಳೀಕೋಟೆಯಲ್ಲಿ ನಡೆದ ಯುದ್ಧದ ನಂತರ ನಶಿಸಿ ಹೋದ ವಿಜಯನಗರದ ಸಾಮಂತ ರಾಜ್ಯಗಳಾಗಿದ್ದ ಹಲವಾರು ಚಿಕ್ಕಪುಟ್ಟ ಸಂಸ್ಥಾನಗಳು ಸ್ವತಂತ್ರವಾಗಿ ತಲೆಯೆತ್ತಿದವು. ಈ ರೀತಿಯಾಗಿ ತಲೆ ಎತ್ತಿದ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನಕ್ಕೆ ಅಗ್ರಸ್ಥಾನ ಸಲ್ಲುತ್ತದೆ. ಈ ಅವಧಿಯು ಭಾರತೀಯ ಇತಿಹಾಸದಲ್ಲಿ ಹಲವಾರು ಅನಿರೀಕ್ಷಿತ ಬದಲಾವಣೆಗಳಾದವು. ಉತ್ತರ ಭಾರತದಲ್ಲಿ ಮಹಮ್ಮದೀಯರ ಆಳ್ವಿಕೆ, ಮಧ್ಯಭಾರತದಲ್ಲಿ ಶಿವಾಜಿಯ ಆಳ್ವಿಕೆ ಮತ್ತು ಪೋರ್ಚುಗೀಸ್, ಬ್ರಿಟಿಷರ ಆಳ್ವಿಕೆ ಹೀಗೆ ಹಲವಾರು ಮಹತ್ತರ ಬದಲಾವಣೆಗಳಾದವು. ಮೈಸೂರಿನ ಒಡೆಯರ ಉದಯವು ಕರ್ನಾಟಕದಲ್ಲಾದ ಮಹತ್ತರ ಬದಲಾವಣೆಯಾಗಿದೆ. ಕದಂಬ, ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ರಾಜಕುಲಗಳಿಂದ ಪೋಷಿತರಾಗಿ, ಸಾಮಂತರಾಗಿದ್ದಂತಹ ಈ ರಾಜಮನೆತನವು ಆಧುನಿಕ ಕರ್ನಾಟಕ ವಿಕಾಸಕ್ಕೆ ಮಹತ್ತರವಾದಂತಹ ಕೊಡುಗೆಯನ್ನು ನೀಡಿದೆ. ಈ ರಾಜಮನೆತನದ ಶಾಸನಗಳನ್ನು ಈ ರೀತಿಯಾಗಿ ಗಮನಿಸಬಹುದಾಗಿದೆ.

ಮೈಸೂರಿನ ಅರಸರ ಸಂಸ್ಕೃತ ಶಾಸನಗಳು ಸರಳ ಸಂಸ್ಕೃತ ಭಾಷೆಯನ್ನು ಹೊಂದಿದ್ದು ಪದ್ಯಶೈಲಿಯಲ್ಲಿದೆ. ಅನುಷ್ಟುಪ್ ಛಂದಸ್ಸಿನ ಬಳಕೆ ಅಧಿಕವಾಗಿದ್ದು, ಗ್ರಾಮಗಳ ಉಲ್ಲೇಖವು ಸಂಸ್ಕೃತ ಭಾಷೆಯಲ್ಲೇ ಕಂಡುಬರುತ್ತದೆ. ಇವರು ರಾಮಾನುಜಾಚಾರ್ಯರ ಅನುಯಾಯಿಗಳಾಗಿದ್ದುದರಿಂದ ಶಾಸನದ ಪ್ರಾರಂಭದಲ್ಲಿ **'ಶ್ರೀರಾಮಾನುಜಾಯನಮಃ'** ಎಂಬ ವಾಕ್ಯವು ಬರುತ್ತದೆ. ಶಾಸನಗಳಿಗೆ ವಿಜಯನಗರದರಸರ ಶೈಲಿಯ ಪ್ರಭಾವವು ಅಧಿಕವಾಗಿ ಕಂಡುಬರತ್ತದೆ ವಿಜಯನಗರದರಸರ ಶಾಸನಗಳ ವಿಷಯಾನುಪೂರ್ವಿಯು ಯಾವ ರೀತಿಯಾಗಿ ಕಂಡುಬರುವುದೋ ಅದೇ ಇಲ್ಲಿಯೂ ಮುಂದುವರಿದಿದೆ. ವಿಜಯನಗರದ ಪ್ರಾರ್ಥನಾ ಶ್ಲೋಕಗಳೇ ಇಲ್ಲಿಯೂ ಕಂಡುಬರುವುದು. ಕೆಲವು ಶಾಸನಗಳಲ್ಲಿ 'ಶುಕ್ಲಾಂ ಬರಧರಂ ವಿಷ್ಣುಂ...' ಇತ್ಯಾದಿ ಪ್ರಚಲಿತ ಶ್ಲೋಕಗಳನ್ನು ಬಳಸಲಾಗಿದೆ. 'ಅಸ್ತಿಕ್ಷೀರ ಮಯಾದ್ದೇವಂ ಮಥ್ಯ....' ಇದು ಪ್ರಚಲಿತದಲ್ಲಿರುವ ವಂಶಾವಳಿಯ ವರ್ಣನೆಯಾಗಿದೆ. ರಾಜರು ತಾವು ಚಂದ್ರವಂಶದಿಂದ ಬಂದವರು. ತಮ್ಮ ಸಂತತಿಯು ದ್ವಾರಕಾ ನಗರಿಯಲ್ಲಿದ್ದು,

ಅದರಲ್ಲಿ ಕೆಲವರು ಕರ್ನಾಟಕ ದೇಶಕ್ಕೆ ಬಂದು ಇಲ್ಲಿಯೇ ನೆಲೆಸಿದರು. ಈ ರೀತಿಯಾಗಿ ಮಹಿಪೂರ ಪುರ ಪ್ರದೇಶದಲ್ಲಿ ನೆಲಸಿದಂತಹ ಇವರ ಸಂತತಿಯಲ್ಲಿ ಹಲವಾರು ರಾಜರು ಜನಿಸಿದರು. ಈ ರೀತಿಯಾಗಿ ವಂಶಾವಳಿಯು ಮುಂದುವರಿಯುತ್ತದೆ. ತಿರುಮಕೂಡಲು ನರಸೀಪುರದಲ್ಲಿ ದೊರಕಿದಂತಹ ಕೃಷ್ಣರಾಯನ ಕಾಲದ ಶಾಸನವು [೩೨]ಬಹಳ ಮಹತ್ವದ್ದಾಗಿದೆ. ಈ ಶಾಸನವು ೧೬ ಹಲಗೆಯನ್ನು ೧೩೫೦ ಸಾಲುಗಳನ್ನು ಹೊಂದಿರುವ ಬೃಹತ್ ತಾಮ್ರಶಾಸನವಾಗಿದೆ. ಈ ಶಾಸನದ ಪ್ರಾರಂಭದಲ್ಲಿ ೭ ಪ್ರಾರ್ಥನಾ ಶ್ಲೋಕಗಳಿವೆ. ಮೈಸೂರು ಅರಮನೆಯಲ್ಲಿರುವ ಒಂದು ಶಾಸನವು ಮೈಸೂರು ಅರಸರ ವಂಶಾವಳಿಯನ್ನು ಹೇಳುವಂತಹ ಚೂರ್ಣಿಕೆಯಾಗಿದೆ. ಇವರ ಕಾಲದಲ್ಲಿ ಚಾಮುಂಡೇಶ್ವರಿ ಮೊದಲಾದ ದೇವಾಲಯಗಳಿಗೆ ಬೆಳ್ಳಿಯ ತಟ್ಟೆ, ಹರಿವಾಣ ಮೊದಲಾದ ಕಾಣಿಕೆಗಳನ್ನು ನೀಡಿದಂತಹ ಉಲ್ಲೇಖಗಳುಳ್ಳ ಸ್ಮಾರಕ ಶಾಸನಗಳು ದೊರಕುತ್ತವೆ. ಇವರ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವಂತಹ ಗ್ರಾಮಗಳ ಹೆಸರು ಇತ್ತೀಚಿನ ಹೆಸರುಗಳಿಗನುಗುಣವಾಗಿದೆ. ರಾಜರ ಬಿರುದನ್ನು ಹೇಳುವಾಗ ಕನ್ನಡ ಮಿಶ್ರಿತವಾದ ಶಬ್ದಗಳನ್ನು ಬಳಸುತ್ತಿದ್ದರು. ಉದಾ : 'ಬಿರುದೆಂತೆಂಬರ ಗಂಡ', 'ರಾಯರಹತ್ತು ಮಿಂಡ', 'ಮೂರು ರಾಯರ ಗಂಡ' ಇತ್ಯಾದಿ. ಇವರ ಕಾಲದ ಸಂಸ್ಕೃತ ಶಾಸನಗಳಲ್ಲಿ ಎರಡು ಅರ್ಥಗಳು ಬರುವಂತಹ ಶ್ಲೋಕಗಳು ಹೆಚ್ಚಾಗಿ ಪ್ರಯುಕ್ತವಾಗಿದೆ. ಮೈಸೂರಿನ ರಾಜ ಬೆಟ್ಟದ ಚಾಮರಾಜರನ್ನು ವರ್ಣಿಸುವಾಗ 'ಅರಿಗೋಧೂಮಘರಟ್ಟ'(ಅರಿಗಳನ್ನು ಪುಡಿಮಾಡುವುದರಲ್ಲಿ ಗೋದಿ ಹಿಟ್ಟನ್ನು ಮಾಡುವ ಯಂತ್ರದಂತಿರುವವನು) ಎಂಬ ಶಬ್ದವನ್ನು ಬಳಸಲಾಗಿದೆ.

ಪಾಂಡವ ಪುರದ ತೊಣ್ಣೂರಿನ ಒಂದು ಶಾಸನದಲ್ಲಿ [೩೪] ರಾಜ(ಚಿಕದೇವರಾಯ)ನನ್ನು ಈ ರೀತಿಯಾಗಿ ವರ್ಣಿಸಲಾಗಿದೆ.

ಏಕೋನ ಷೋಡಶಕಲಾಃ ಕುಲಕಂದಮಿಂದು ರೇಕೈಕ ಶೋಷ್ಯತಿ ಸೃಜನ್ನಮಶಃ ಕೃಶೋಭೂತ್ ।
ಹೇಮಾದ್ರಿ ಭಾಗಕಲಿತಾನಿ ಮಹಾನ್ತಿದಾಯನ್ದಾಯಂ ಸಷೋಡಶತುಲಾ ಪ್ರಭೃತೀನಿ ಚೇಂದೇ ॥

(೧೬ ಕಲೆಗಳಲ್ಲಿ ಒಂದೊಂದನ್ನೇ ಕಳೆದುಕೊಂಡು ಚಂದ್ರನು ಕೃಶನಾಗುವನು, ಆದರೆ ಈತನು ತುಲಾ ಮೊದಲಾದ ೧೬ ಮಹಾದಾನಗಳನ್ನು ಪ್ರತಿನಿತ್ಯವೂ ನೀಡುತ್ತಾ ಪ್ರತಿನಿತ್ಯವೂ ಕಲಾ ವೃದ್ಧಿಯನ್ನು ಹೊಂದುತ್ತಿರುವನು.)

'ತಿರುಮಲಾಚಾರ್ಯ'ನನ್ನು ಹೆಚ್ಚಿನ ಶಾಸನಗಳಲ್ಲಿ ಶಾಸನ ಲೇಖಕನೆಂದು ಗುರುತಿಸಲಾಗಿದೆ.

ಇತರ ರಾಜವಂಶಗಳು

ಸಾಮಂತ ರಾಜಕುಲಗಳು

ಪ್ರಸಿದ್ಧ ರಾಜಮನೆತನಗಳಿಗೆ ಅಧೀನರಾಗಿರುವಂತಹ, ಅವರನ್ನೇ ಆಶ್ರಯಿಸಿರುವಂತಹ ಮತ್ತು ಅವರ ರಾಜ್ಯಾಡಳಿತಕ್ಕೆ ಒಳಪಟ್ಟಿರುವ ರಾಜಕುಲಗಳನ್ನು ಸಾಮಂತರೆಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಅಭೀರರು, ಮೈದುಂಬರು, ಬಾಣರು, ನೊಳಂಬರು, ಅಲೂಪರು, ಪುನ್ನಾಟರು, ಶಾಂತಾರರು ಮೊದಲಾದ ಸಾಮಂತರ ರಾಜಕುಲಗಳಿದ್ದವು. ಇಂತಹ ರಾಜಕುಲಗಳೂ ಕೂಡಾ ಕರ್ನಾಟಕದ ಇತಿಹಾಸದಲ್ಲಿ ಪ್ರಧಾನ ಪಾತ್ರವನ್ನುವಹಿಸಿವೆ. ಇಂತಹ ಸಾಮಂತರ ಆಳ್ವಿಕೆಯಲ್ಲೂ ಹಲವಾರು ಶಾಸನಗಳು ದೊರಕುತ್ತವೆ. ಇದರಲ್ಲಿ ನೊಳಂಬ, ಪುನ್ನಾಟ ಮತ್ತು ಶಾಂತಾರರ ಕಾಲದ ಕೆಲವು ಶಾಸನಗಳು ದೊರೆಯುತ್ತದೆ.

ನೊಳಂಬರು : ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಬಲ್ಲಕುಂದೆಯಲ್ಲಿ ದೊರಕಿದ (ಕೆ.ಯು.ಇ.ಎಸ್ -೧) ಒಂದು ಶಾಸನವು ಈ ವಂಶದ ಮೊದಲನೆಯ ರಾಜನೆಂದು ಕರೆಯಲ್ಪಡುವ ಚಿತ್ರವೆಡಂಗ 'ನೊಳಂಬಾಧಿರಾಜ'ನನ್ನು ಉಲ್ಲೇಖಿಸುತ್ತದೆ. ನೊಳಂಬಾಧಿರಾಜನ ನಿಯೋಗಿಯಾದ ಶ್ರೀಧರಾರ್ಯ್ಯನು ಶ್ರೀ ಬಲ್ಲಕುಂದೆ ತೀರ್ಥದಲ್ಲಿ ವಾಸಿಸುತ್ತಿರಲು ಶಿಲಾಮಯ ದೇವಾಲಯ ನಿರ್ಮಿಸಿದನೆಂದು ಈ ಶಾಸನ ಉಲ್ಲೇಖಿಸುತ್ತದೆ.

ಪುನ್ನಾಟರು : ಗಂಗ ರಾಜರ ಅಧೀನರಾಗಿದ್ದಂತಹ ಪುನ್ನಾಟವು ಮೈಸೂರು ಪ್ರದೇಶದ ಒಂದು ಭಾಗವಾಗಿದೆ. ಇವರನ್ನು ಕುರಿತಾದ ಕೇವಲ ಒಂದೇ ಶಾಸನವು ದೊರಕಿದೆ. ಯಳಂದೂರು ತಾಲೂಕಿನ ಮಾಂಬಳ್ಳಿಯಲ್ಲಿ (ಎಪಿಗ್ರಾಫೀಯಾ ಕರ್ನಾಟಕ-೪) ದೊರಕಿದ ಸಂಸ್ಕೃತ ಶಾಸನವು ಇವರ ವಂಶವನ್ನು ಚಿತ್ರಿಸಿದೆ. ಈ ತಾಮ್ರ ಶಾಸನದಲ್ಲಿ ಪುನ್ನಾಟ ರಾಜ ಮನೆತನದ ೫ ರಾಜರನ್ನು ಉಲ್ಲೇಖಿಸಿದೆ. ಇದು ಅಪೂರ್ಣವಾಗಿದೆ.

ಶಾಂತಾರರು : ನಗರ ತಾಲೂಕಿನ 'ಹುಂಚ'ವನ್ನು ರಾಜಧಾನಿಯನ್ನಾಗಿರಿಸಿಕೊಂಡು ಆಳಿದ ಈ ರಾಜವಂಶವು ಸ್ವತಂತ್ರರಾಗಿ ಆಳಿದಂತೆ ಕಂಡುಬರುತ್ತದೆ. ನರಸಿಂಹರಾಜಪುರ ತಾಲೂಕಿನ ಬಾಳೇ ಹೊನ್ನೂರಿನಲ್ಲಿ ದೊರೆತ ಶಾಸನವು ಶಾಂತರ ದೊರೆ ಮಾರನನ್ನು ಉಲ್ಲೇಖಿಸುತ್ತದೆ. ಈತನನ್ನು ಶಾಂತಾರ ಕುಲವನ್ನರಳಿಸುವ ಸೂರ್ಯನೆಂದು ಉಲ್ಲೇಖಿಸಲಾಗಿದ್ದು, ಶಾಸನವು ಅಪೂರ್ಣವಾದಂತೆ

ಕಂಡುಬರುತ್ತದೆ. ಈ ಶಾಸನದಲ್ಲಿ ತುಂಗಾ ನದಿಯನ್ನು ಸುಂದರವಾಗಿ ವರ್ಣಿಸಲಾಗಿದೆ.

ಪಾಠೀನ ಲೋಚನ ರಥಾಂಗ ಪಯೋಧರಾಯಾಃ
ನೀರೇರುಹಾನನ ಶಿಳೀಮುಖಕುನ್ತಳಾಯಾಃ ।
ದಿರ್ಘೋರ್ಮಿ ಬಾಹುಕಳಹಂಸ ವಿಳಾಸಯಂನ್ತ್ಯಾ-
ತುಂಗೇತಿ ಪುಣ್ಯಸರಿತೋ ಲಸತಿ ಪ್ರವಾಹಃ ॥

(ಮೀನುಗಳೇ ಕಣ್ಣುಗಳು, ರಥಾಂಗಗಳೇ(ಚಕ್ರವಾಕ್ಷಿ ಪಕ್ಷಿಗಳು) ಸ್ತನಗಳು, ತಾವರೆಗಳೇ ಮುಖಗಳು, ದುಂಬಿಗಳೇ ಮುಂಗುರುಳು, ದೀರ್ಘವಾದ ತೆರೆಗಳೇ ಬಾಹುಗಳು, ಕಲಹಂಸಗಳ ವಿಲಾಸವೇ ಕಲರವವಾಗಿ ಉಳ್ಳ ತುಂಗಾನದಿಯ ಪ್ರವಾಹವು ಹರಿಯುತ್ತಿದೆ.)

ಕಲ್ಯಾಣದ ಕಳಚುರ್ಯರು : ಕಲ್ಯಾಣದ ಮುಮ್ಮಡಿ ತೈಲಪನಿಂದ ಅಧಿಪತ್ಯವನ್ನು ಕಿತ್ತುಕೊಂಡು ೨೫ ವರ್ಷಕಾಲ ಆಳಿದಂತಹ ಈ ವಂಶಕ್ಕೆ ಸಂಬಂಧಿಸಿದಂತೆ ೨ ಸಂಸ್ಕೃತ ಶಾಸನಗಳು ದೊರೆಯುತ್ತವೆ. ಕೊಪ್ಪಳಜಿಲ್ಲೆಯ ಯಲಬುರ್ಗಾ ತಾಲೂಕಿನಲ್ಲಿ ದೊರೆತ ಶಾಸನವು ಕಳಚುರಿಯ ಸಂಪೂರ್ಣ ವಂಶಾವಳಿಯನ್ನು ಕೊಡುತ್ತದೆ. ತಾಮ್ರ ಶಾಸನವಾಗಿರುವ ಈ ಶಾಸನವು ಪದ್ಯ ಶೈಲಿಯಲ್ಲಿದ್ದು ಕಲ್ಯಾಣದ ಚಾಳುಕ್ಯರ ಶೈಲಿಯನ್ನೇ ಅನುಕರಿಸುತ್ತದೆ. (ಕೆ.ಯು.ಇ.ಎಸ್ .ಸಂ.೨)

ಕೆಳದಿಯ ನಾಯಕರು : ವಿಜಯನಗರದ ಪತನಾನಂತರ ಹಿಂದೂ ಧರ್ಮ ಸಂಸ್ಕೃತಿಗಳನ್ನು ಪೋಷಿಸಿಕೊಂಡು ಬಂದವರಲ್ಲಿ ಕೆಳದಿಯ ನಾಯಕರು ಅಗ್ರಗಣ್ಯರು. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಕೆಳದಿ ಎಂಬ ಗ್ರಾಮದಲ್ಲಿ ರಾಜ್ಯವನ್ನು ಸ್ಥಾಪಿಸಿದ ಇವರು ೨೦೦ ವರ್ಷಗಳ ತನಕ ಸಮರ್ಥ ನಾಯಕರಂತೆ ಆಳಿದರು. ಈ ವಂಶದ ರಾಜರ ಹೆಸರಲ್ಲಿ 'ನಾಯಕ' ಶಬ್ದವು ಕಂಡುಬರುತ್ತದೆ. ಈ ರಾಜವಂಶದ ಪ್ರಧಾನರಾಜನಾದ ವೀರಭದ್ರ ನಾಯಕನ ಕಾಲದ ಒಂದು ಸಂಸ್ಕೃತ ಶಾಸನವು ಶಿವಮೊಗ್ಗ ಜಿಲ್ಲೆಯಲ್ಲಿ ದೊರಕಿದೆ. ಸಂಸ್ಕೃತ ಮತ್ತು ಕನ್ನಡ ಮಿಶ್ರಿತವಾದ ತಾಮ್ರ ಶಾಸನವು ವೀರಭದ್ರ ನಾಯಕನು ರಾಮಕೃಷ್ಣನೆಂಬ ಮಂತ್ರಿಗೆ ತ್ರಿಯಂಬಕಪುರವೆಂಬ ಗ್ರಾಮವನ್ನು ದಾನ ನೀಡಿದ ಉಲ್ಲೇಖ ಬರುತ್ತದೆ.(ಇ.ಸಿ.-೧೩)

ಇತರ ರಾಜರ ಕಾಲದ ಸಂಸ್ಕೃತ ಶಾಸನಗಳು

೧. ಬೇಲೂರು ತಾಲೂಕಿನ ಹೆರಗು ಎಂಬಲ್ಲಿ ಹೈದರಲಿಯ ಕಾಲದ ಒಂದು ಸ್ಮಾರಕ ಶಾಸನವು ದೊರಕುತ್ತದೆ. ಹೈದರಾಲಿಯು ಆಳುತ್ತಿರಲು ಕೇಶವ ದೇವಾಲಯಕ್ಕೆ ಸ್ಥಿರವಾದ ಕಲಶವನ್ನು ಪ್ರತಿಷ್ಠಾಪಿಸಿದನೆಂಬ ಉಲ್ಲೇಖ ಬರುತ್ತದೆ.

೨. ಬೀದರ್ ತಾಲೂಕಿನಲ್ಲಿ ಒಂದು ಕಲ್ಲಿನಲ್ಲಿ ಬಹುಮನಿ ಸುಲ್ತಾನ ಅಹ್ಮದ್‌ನ ಕಾಲದ ಒಂದು ಶಿಲಾಶಾಸನ ದೊರೆತಿದೆ.[೩೫] ಇದರ ಪ್ರಾರಂಭದಲ್ಲಿ ಬ್ರಹ್ಮನ ಪ್ರಾರ್ಥನೆಯಿದ್ದು, ನಂತರ ಅಹ್ಮದನ ವಂಶಾವಳಿಯಿದ್ದು ಕ್ಲಿಷ್ಟವಾದ ಶಬ್ದವನ್ನು ಛಂದಸ್ಸಿಗನುಗುಣವಾಗಿ ಬಳಸಲಾಗಿದೆ. ಅಹ್ಮದನು ಒಂದು ಬಾವಿಯನ್ನು ನಿರ್ಮಿಸಿದುದರ ಉಲ್ಲೇಖ ಇಲ್ಲಿ ಬರುತ್ತದೆ. ಈ ಶಾಸನವು ಧಾರ್ಮಿಕ ಭಾವನೆಯನ್ನು ಮತ್ತು ಸಾಮಾಜಿಕ ಮಹತ್ವವನ್ನು ಬಿಂಬಿಸುತ್ತದೆ.

೩. ವಿಜಯನಗರ ಅರಸರ ಮಂತ್ರಿಯಾಗಿದ್ದಂತಹ ಬಯಕಾರ ರಾಮಪ್ಪಯ್ಯನು ಕುರಿತಾದ ಸಂಸ್ಕೃತ ಶಾಸನಗಳು ಬಳ್ಳಾರಿಯ ಜಿಲ್ಲೆಯಲ್ಲಿ ದೊರಕುತ್ತದೆ. ೨೦ಕ್ಕಿಂತಲೂ ಅಧಿಕ ಸಂಸ್ಕೃತ ಶಾಸನಗಳು ದೊರಕುತ್ತವೆ. ಆದರೆ ಈ ಎಲ್ಲಾ ಶಾಸನಗಳು ಒಂದೇ ರೀತಿಯಾಗಿದ್ದು ಪ್ರಾರಂಭದ ಭಾಗವಷ್ಟೇ ವ್ಯತ್ಯಾಸವಾಗಿದ್ದು ಅದು ಕನ್ನಡದಲ್ಲಿದೆ. ಬಯಕಾರ ರಾಮಪ್ಪಯ್ಯನು ತನ್ನ ಕುಟುಂಬದ ಸದಸ್ಯರ ಹೆಸರಲ್ಲಿ ಹಲವಾರು ಕೆರೆಗಳನ್ನು ನಿರ್ಮಿಸಿದುದರ ಉಲ್ಲೇಖ ನೀಡುತ್ತದೆ. ಇದು ಸಾಮಾಜಿಕವಾಗಿ ಬಹಳ ಮಹತ್ವವನ್ನು ಹೊಂದಿದೆ.

೪. ವಿಜಯನಗರದರಸ ಬುಕ್ಕನ ಮಹಾಪ್ರಧಾನನಾಗಿದ್ದ ಗೋವೆಯ ರಾಜ ಮಾಧವನ ಕುಕ್ಕೆ ಸುಬ್ರಹ್ಮಣ್ಯದ ತಾಮ್ರಶಾಸನವು[೩೬] ಅಧ್ಯಯನ ಯೋಗ್ಯವಾದ ಶಾಸನವಾಗಿದೆ.(ಎ.ಇಂಡಿಕಾ.ಸಂ.೪೨) ಸಂಪೂರ್ಣ ಸಂಸ್ಕೃತ ಭಾಷೆ ಮತ್ತು ನಾಗರಿ ಲಿಪಿಯಲ್ಲಿರುವಂತಹ ಈ ಶಾಸನವು ಗದ್ಯ ಮತ್ತು ಪದ್ಯ ಮಿಶ್ರಿತವಾಗಿದೆ. ಕುಕ್ಕೆ ಸುಬ್ರಹ್ಮಣ್ಯದೇವರ ವಿವಿಧ ಪೂಜೆ ನೈವೇದ್ಯ, ನಿವೇದನೆ ಇತ್ಯಾದಿ ದೈನಂದಿನ ಸೇವೆಗಳಿಗಾಗಿ ವಿವಿಧ ಗ್ರಾಮಗಳಿಂದ ಕ್ರಯಕ್ಕೆ ತೆಗೆದುಕೊಂಡು ಸಣ್ಣ ಪ್ರದೇಶಗಳನ್ನಾಗಿ ನಿರ್ಮಿಸಿ ಅದನ್ನು ದೇವಾಲಯಕ್ಕೆ ಅರ್ಪಿಸಿದ ಉಲ್ಲೇಖವಿದೆ. ಆ ಕಾಲದಲ್ಲಿ ಪ್ರಚಲಿತದಲ್ಲಿದ್ದಂತಹ ಭೂಪ್ರಮಾಣ ಮತ್ತು ಹಣದ ಸ್ವರೂಪವನ್ನು ಅಭ್ಯಾಸ ಮಾಡಬಹುದಾಗಿದೆ. ಸುತ್ತಮುತ್ತಲಿನ ಗ್ರಾಮಗಳ ಮತ್ತು ಆ ಗ್ರಾಮಗಳ ಒಡೆಯರ ಬಗ್ಗೆಯೂ ವಿಶೇಷ ಅಧ್ಯಯನ ಮಾಡಲಾಗಿದೆ. ಒಬ್ಬ ರಾಜನು ಒಂದೇ ದೇವಾಲಯಕ್ಕೆ ವಿವಿಧ ಪ್ರದೇಶಗಳನ್ನು ದಾನ ನೀಡಿರುವುದು ವಿಶೇಷವಾಗಿದೆ.

ಜೈನ ಸಂಸ್ಕೃತ ಶಾಸನಗಳು. ೨೭

ಕರ್ನಾಟಕವು ಕಲೆ, ಸಂಸ್ಕೃತಿ ಮತ್ತು ಸಂಪ್ರದಾಯಗಳ ನಾಡಾಗಿರುವಂತೆ ಧಾರ್ಮಿಕ ವಿಷಯಗಳಿಗೂ ಪ್ರಧಾನತೆಯನ್ನು ನೀಡಿದೆ. ಇಲ್ಲಿ ಎಲ್ಲಾ ಧರ್ಮಗಳು ಬೆಳೆದು ವಿಕಾಸವನ್ನು ಹೊಂದಿದೆ. ಹಾಗಾಗಿ ಕರ್ನಾಟಕವು ಧಾರ್ಮಿಕ ಸಹಿಷ್ಣುತೆಯನ್ನು ಪಡೆದಂತಹ ನಾಡಾಗಿದೆ. ಹಿಂದೂ ಧರ್ಮವಲ್ಲದೆ ಜೈನ ಮತ್ತು ಬೌದ್ಧ ಧರ್ಮಗಳೂ ಕೂಡಾ ವಿಕಾಸವನ್ನು ಇಲ್ಲಿ ಕಂಡಿವೆ. ಜೈನ ಧರ್ಮವು ಬಹಳ ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಪ್ರಚಾರಕ್ಕೇ ಬಂದಿತ್ತು, ಅದಲ್ಲದೆ ಉತ್ತರ ಭಾರತದ ಅನೇಕ ಜೈನ ಯತಿಗಳು ಕರ್ನಾಟಕದ ಜೈನ ಕೇಂದ್ರಗಳಿಗೆ ಯಾತ್ರೆಯನ್ನು ಕೈಗೊಂಡಿದ್ದರು. ಆದ್ದರಿಂದ ಕರ್ನಾಟಕವು ಜೈನರ ಧಾರ್ಮಿಕ ಚಟುವಟಿಕೆಗಳನ್ನು ನಡೆಸಲು ಪ್ರಧಾನ ನೆಲೆಯಾಗಿ ಪರಿಣಮಿಸಿತು. ಹಾಗಾಗಿ ಜೈನರು ಕರ್ನಾಟಕದಲ್ಲಿ ಪ್ರತಿಯೊಂದು ಕ್ಷೇತ್ರಗಳಲ್ಲೂ ತಮ್ಮದೇ ಪ್ರಭಾವವನ್ನು ಬೀರಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕಂತೂ ಅಪಾರವಾದಂತಹ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ರಚನೆಯಾದಂತಹ ಹಲವಾರು ಪ್ರಾಚೀನ ಗ್ರಂಥಗಳ ಲೇಖಕರು ಜೈನಾರಗಿದ್ದಾರೆ. ಜೈನರು ಕನ್ನಡ ಸಾಹಿತ್ಯವಲ್ಲದೆ ಸಂಸ್ಕೃತ ಸಾಹಿತ್ಯ ಕ್ಷೇತ್ರಕ್ಕೂ ಕೂಡಾ ಅಪಾರವಾದಂತಹ ಕಾಣಿಕೆಯನ್ನ ನೀಡಿದ್ದಾರೆ. ಹಲವಾರು ಪ್ರಸಿದ್ಧ ಕೃತಿಗಳ ಕರ್ತೃಗಳು ಜೈನರಾಗಿದ್ದಾರೆ. ಕರ್ನಾಟಕದ ಶಾಸನ ಪ್ರಪಂಚದಲ್ಲಿ ಉನ್ನತ ಸ್ಥಾನದಲ್ಲಿರುವ ಐಹೊಳೆ ಶಾಸನದ ಕರ್ತೃವೂ ಜೈನನಾಗಿದ್ದಾನೆ. ಜೈನರಿಗೆ ಸಂಬಂಧಿಸಿದ ಶಾಸನಗಳು ಕನ್ನಡದಲ್ಲಿ ಮಾತ್ರವಲ್ಲದೆ ಸಂಸ್ಕೃತ ಭಾಷೆಯಲ್ಲೂ ದೊರಕುತ್ತದೆ. ಜೈನರ ಪ್ರಸಿದ್ಧ ಯಾತ್ರಾಸ್ಥಳವಾದ ಶ್ರವಣಬೆಳಗೊಳದಲ್ಲಿ ಮಾತ್ರವಲ್ಲದೆ ಇತರ ಹಲವಾರು ಸ್ಥಳಗಳಲ್ಲಿಯೂ ಶಾಸನಗಳು ದೊರಕುತ್ತವೆ. ಜೈನರಿಗೆ ಸಂಬಂಧಿಸಿದ ಶಾಸನಗಳು ಶಿಲಾಶಾಸನ ಮತ್ತು ಸ್ಮಾರಕ ಶಾಸನಗಳೇ ಅಧಿಕವಾಗಿ ದೊರಕುತ್ತವೆ. ಹಂಪಿಯಲ್ಲಿ ದೊರಕಿದಂತಹ ಎರಡು ಜೈನ ಶಾಸನಗಳು ವಿಜಯನಗರ ಸಾಮ್ರಾಜ್ಯದ ರಾಜಧಾನಿಯನ್ನು ಸುಂದರವಾಗಿ ವರ್ಣಿಸುತ್ತದೆ. ಜೈನರಿಗೆ ಸಂಬಂಧಿಸಿದ ಸ್ತಂಭ ಶಾಸನಗಳು ದೊರಕುತ್ತದೆ. ಶ್ರವಣಬೆಳಗೊಳವನ್ನು ಹೊರತು ಪಡಿಸಿ ಇತರ ಸ್ಥಳಗಳಲ್ಲಿಯೂ ೫೦ಕ್ಕೂ ಹೆಚ್ಚು ಶಾಸನಗಳು ದೊರಕುತ್ತವೆ.

ಜೈನರಿಗೆ ಸಂಬಂಧಿಸಿದ ಸಂಸ್ಕೃತ ಶಾಸನಗಳು ಜೈನ ಧರ್ಮದ ಇತಿಹಾಸವನ್ನ ತಿಳಿಯಲು ಪ್ರಧಾನವಾದ ಆಕರವಾಗಿದೆ. ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಬೇರೂರಿದಷ್ಟು ಜೈನ ಧರ್ಮವು ಬೇರೆ ರಾಜ್ಯಗಳಲ್ಲಿ ಬೇರೂರಲಿಲ್ಲ. ಪ್ರಾಚೀನ ಕರ್ನಾಟಕದಲ್ಲಿ ಜೈನ ಧರ್ಮವೂ ಒಂದು ಪ್ರಬಲವಾದ ಧರ್ಮವಾಗಿತ್ತು ಹಾಗಾಗಿ ದಕ್ಷಿಣ ಭಾರತದ ಜೈನ ಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನ ಧರ್ಮದ ಇತಿಹಾಸವೇ ಆಗಿದೆಯೆಂದು ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. ಜೈನ ಧರ್ಮಕ್ಕೆ ಸಂಬಂಧಿಸಿದ ಹೆಚ್ಚಿನ ಶಾಸನಗಳು ಕರ್ನಾಟಕದಲ್ಲೇ ದೊರಕುತ್ತವೆ.

ಜೈನ ಧರ್ಮಕ್ಕೆ ಸಂಬಂಧಿಸಿದ ತಾಮ್ರ ಶಾಸನಗಳು ದೊರಕುವುದು ಬಹಳ ವಿರಳ, ಹೆಚ್ಚಾಗಿ ಬಂಡೆಯ ಮೇಲೆ, ನಿಷಿಧಿಯ (ಸಮಾಧಿ) ಮೇಲೆ, ಶಿಲೆಗಳ ಮೇಲೆ ಕಂಡು ಬರುತ್ತವೆ. ಹೆಚ್ಚಿನ ಸಂಸ್ಕೃತ ಶಾಸನಗಳು ನಿಷಿಧಿ ಶಾಸನಗಳಾಗಿದ್ದು ಅವುಗಳು ಜೈನ ಯತಿಗಳಿಗೆ ಸಂಬಂಧಿಸಿದುದಾಗಿದೆ. ಅವುಗಳಲ್ಲಿ ಹೆಚ್ಚಿನವು ಜೈನ ಗುರು ಪರಂಪರೆಯ ವೃತ್ತಾಂತವನ್ನು ನೀಡುತ್ತದೆ. ಈ ದಾಖಲೆಗಳು ಆಳುವ ಅರಸರಿಗೆ ಮತ್ತು ಪ್ರಮುಖರಿಗೆ ಸಂಬಂಧಿಸಿದಂತೆ ಗತಕಾಲದ ಕೆಲವು ಘಟನೆಗಳನ್ನು ಉಲ್ಲೇಖಿಸುತ್ತವೆ. ಜೈನ ಸಂಸ್ಕೃತ ಶಾಸನಗಳು ಹೆಚ್ಚಾಗಿ ಜಿನಾಲಯವನ್ನು ನಿರ್ಮಿಸಿದಂತಹ ವಿಷಯಗಳನ್ನು ತಿಳಿಸುತ್ತವೆ. ಇದಲ್ಲದೆ ಜೈನ ಯತಿಗಳು ನಿಷಿಧಿಗೆ ಹೋದಂತಹ ವಿಚಾರಗಳನ್ನು ವಿವರವಾಗಿ ತಿಳಿಸುತ್ತದೆ. ಜೈನ ಯತಿಗಳನ್ನು ಹೇಳುವಾಗ ಅವರ ಗುರು ಪರಂಪರೆಯನ್ನು ತಿಳಿಸುತ್ತದೆ. ಜೈನ ಯತಿಗಳ ಪರಂಪರೆಯಲ್ಲಿ ಸಂಘಗಳು, ಗಣಗಳು, ಗಚ್ಛಗಳು, ಅನ್ವಯಗಳು ಬರುತ್ತವೆ. ಮೂಲ ನಂದಿ, ಯಾಪನೀಯ ಮೊದಲಾದ ಸಂಘಗಳು, ಬಲಾತ್ಕಾರ, ದೇಶೀಯ ಮೊದಲಾದ ಗಣಗಳು, ಪುಸ್ತಕ, ಚಿತ್ರಕೂಟ ಮೊದಲಾದ ಗಚ್ಛಗಳೂ, ಕೊಂದಕುಂದ ಮೊದಲಾದ ಅನ್ವಯಗಳು ಕಂಡು ಬರುತ್ತವೆ. ಇವುಗಳಲ್ಲಿ ಪ್ರಧಾನವಾದುದು ಸಂಘವಾಗಿದೆ, ಅದರ ಶಾಖೆಗಳು ಗಣಗಳು, ಗಣಗಳ ಶಾಖೆ ಗಚ್ಛಗಳು, ಗಚ್ಛಗಳ ಶಾಖೆ ಅನ್ವಯಗಳಾಗಿವೆ. ಇಂತಹ ಸಂಘಗಳ, ಗಚ್ಛಗಳ ಉಲ್ಲೇಖಗಳು ಶಾಸನಗಳಲ್ಲಿ ಕಂಡು ಬರುತ್ತವೆ. ಇಂತಹ ಶಾಸನಗಳ ವಿಸ್ತ್ರತವಾದ ಅಧ್ಯಯನದಿಂದ ಜೈನ ಯತಿಗಳ ಪರಂಪರೆಯನ್ನು ಮಾತ್ರವಲ್ಲದೇ ಜೈನ ಧರ್ಮವನ್ನು ಅಧ್ಯಯನ ಮಾಡಬಹುದಾಗಿದೆ.

ಇಂತಹ ಜೈನ ಗುರುಗಳ ಉಲ್ಲೇಖಗಳುಳ್ಳ ಶಾಸನಗಳನ್ನು ಅಧ್ಯಯನ ಮಾಡಿದರೆ ಅವರು ರಚಿಸಿದಂತಹ ಅನೇಕ ಮಹಾ ಗ್ರಂಥಗಳನ್ನು ಅಧ್ಯಯನ ನಡೆಸಬಹುದು. ಕೊಂದಾಕುಂದಾನ್ವಯದ ಉಮಾಸ್ವಾತಿಯವರು ತತ್ವಾರ್ಥ ಸೂತ್ರಿಯ ಕರ್ತೃವೆಂದೂ ಆ ಕೃತಿಗೆ ಶಿವಕೋಟಿ ಎಂಬುವವರು ತತ್ವಾರ್ಥವನ್ನು ಬರೆದಿರುವರೆಂದು ಶ್ರವಣಬೆಳಗೊಳ [೩೮]ದ ಶಾಸನವು ತಿಳಿಸುತ್ತದೆ. ವಜ್ರ ನಂದಿ ಮುನಿಯು 'ನವ ಸ್ತೋತ್ರ' ಗ್ರಂಥವನ್ನು, ಸುಮತಿ ದೇವನು 'ಸುಮತಿ ಶತಕ'ವನ್ನೂ, ದಯಾಪಾಲನು 'ರೂಪಸಿದ್ಧಿ' ಎಂಬ ಗ್ರಂಥವನ್ನು ರಚಿಸಿರುವರೆಂದು, ಮುಂದಿನಿಂದ ಹಿಂದಕ್ಕೂ, ಹಿಂದಿನಿಂದ ಮುಂದಕ್ಕೂ ಓದಲು ಸಾಧ್ಯವಾಗುವ ರೀತಿಯಲ್ಲಿ ಶ್ರುತ ಕೀರ್ತಿಯು 'ರಾಘವ ಪಾಂಡವೀಯ' ಎಂಬ ಕೃತಿಯನ್ನು ರಚಿಸಿರುವನೆಂದು ಶಾಸನಗಳಿಂದ ತಿಳಿದು ಬರುತ್ತದೆ. ಇದಲ್ಲದೆ ಜೈನ ಗುರುಗಳು ಅನೇಕ ಪವಾಡಗಳನ್ನು ಮಾಡಿ ತೋರಿಸಿರುವರೆಂಬಂತಹ ವಿಚಾರಗಳೂ ಶಾಸನಗಳಿಂದ ದೊರಕುತ್ತವೆ. ಜೈನ ಸನ್ಯಾಸಿನಿಯರ ವಿಚಾರಗಳೂ ಕೂಡ ಜೈನರ ಶಾಸನಗಳಿಂದ ತಿಳಿದು ಬರುತ್ತದೆ. ಗಂಗರ ಕಾಲದಿಂದ ಆರಂಭಿಸಿ ಮೈಸೂರು ಒಡೆಯರ ಕಾಲದವರೆಗೆ ಹಲವಾರು ಜೈನ ಸಂಸ್ಕೃತ ಶಾಸನಗಳು ದೊರಕುತ್ತವೆ. ಜೈನರ ಕಾಲದ ಸಂಸ್ಕೃತ ಶಾಸನಗಳನ್ನು ವಿಶೇಷವಾಗಿ ಅಧ್ಯಯನವನ್ನು ಮಾಡಬಹುದಾಗಿದೆ.

ಜೈನ ಸಂಸ್ಕೃತ ಶಾಸನಗಳ ಸ್ವರೂಪ.

ಜೈನರ ಸಂಸ್ಕೃತ ಶಾಸನಗಳು ಭಾಷಾ ಶಾಸ್ತ್ರದ ದೃಷ್ಟಿಯಿಂದ ಪ್ರೌಢವಾಗಿ ರಚಿತವಾಗಿದೆ. ಹೆಚ್ಚಿನ ಸಂಸ್ಕೃತ ಶಾಸನಗಳು ಶ್ರವಣಬೆಳಗೊಳದಲ್ಲಿ ದೊರಕುತ್ತದೆ. ಎಫಿಗ್ರಾಫಿಯಾ ಕರ್ನಾಟಿಕಾದ ೨ನೆಯ ಸಂಪುಟವನ್ನು ಶ್ರವಣಬೆಳಗೊಳದ ಶಾಸನಗಳಿಗೆ ಮೀಸಲಿಡಲಾಗಿದೆ. ಶ್ರವಣಬೆಳಗೊಳದ ಪ್ರದೇಶದಲ್ಲಿ ದೊರಕಿದ ಹಲವಾರು ಶಾಸನಗಳಲ್ಲಿ ಸಂಸ್ಕೃತ ಭಾಷೆಯನ್ನು ಬಳಸಿದ್ದಾರೆ. ಕೆಲವು ಶಾಸನಗಳಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡನ್ನೂ ಬಳಸಿದ್ದಾರೆ. ಕೆಲವು ಶಿಲಾ ಶಾಸನಗಳು ಸಂಪೂರ್ಣವಾಗಿ ಸಂಸ್ಕೃತ ಭಾಷೆಯಲ್ಲಿದ್ದು ಕಾವ್ಯಾತ್ಮಕವಾಗಿದೆ.

ಶ್ರೀ ಮತ್ಪರಮಗಂಭೀರ ಸ್ಯಾದ್ವಾದಾಮೋಘ ಲಾಂಛನಂ ।
ಜೀಯಾತ್ತ್ರೈ ಲೋಕ್ಯನಾಥಸ್ಯ ಶಾಸನಂ ಜಿನ ಶಾಸನಂ ॥

(ಶ್ರೀಮತ್ ಪರಮ ಗಂಭೀರವಾದ ಸ್ಯಾದ್‌ವಾದಕ್ಕೆ ಅಮೋಘವಾದ ಲಾಂಛನದಂತಿರುವ ತ್ರೈಲೋಕ್ಯನಾಥನ ಜಿನ ಶಾಸನವು ಬಹಳ ಕಾಲದ ತನಕ ಉಳಿಯಲಿ.)

ಇದು ಪ್ರಸಿದ್ಧವಾದ ಜಿನ ಸ್ತುತಿಯಾಗಿದ್ದು ಹಲವಾರು ಶಾಸನಗಳಲ್ಲಿ ಪ್ರಯುಕ್ತವಾಗಿದೆ. **ಭದ್ರಮಸ್ತು ಜಿನ ಶಾಸನಾಯ** ಎಂಬಂತಹ ಮಂಗಳವಾಕ್ಯವು ಹೆಚ್ಚಾಗಿ ಕಂಡು ಬರುತ್ತವೆ. ಹೆಚ್ಚಿನ ಸಂಸ್ಕೃತ ಶಾಸನಗಳು ಒಂದಕ್ಕಿಂತ ಒಂದು ಭಿನ್ನವಾಗಿದ್ದು ವಿವಿಧ ವಿಷಯಗಳನ್ನು ಪ್ರಚುರ ಪಡಿಸುತ್ತವೆ. ಕಾವ್ಯಾತ್ಮಕವಾಗಿದ್ದು ವಿವಿಧ ಛಂದಸ್ಸುಗಳಿಂದ ಕೂಡಿ ಪ್ರೌಢವಾಗಿ ವಿಕಾಸ ಹೊಂದಿದೆ. ಅಧ್ಯಯನದ ದೃಷ್ಟಿಯಿಂದ ಜೈನ ಸಂಸ್ಕೃತ ಶಾಸನಗಳನ್ನು ವಿಶೇಷವಾದ ವಿಷಯವನ್ನಾಗಿ ಬಳಸಬಹುದಾಗಿದೆ.

ಜೈನ ಶಾಸನಗಳು: ಜೈನರಿಗೆ ಸಂಬಂಧಿಸಿದ ಶಾಸನಗಳಲ್ಲಿ [೬೯]ಹಂಪಿಯಲ್ಲಿ ದೊರೆಯುವ ಎರಡು ಶಾಸನಗಳು ಬಹಳ ಮಹತ್ವವನ್ನು ಪಡೆದಿದೆ. ಹಂಪಿಯಲ್ಲಿ ಆನೆಸಾಲಿ (ಗಜ ಶಾಲೆ)ನ ಹಿಂದೆ ಇರುವ ಜೈನ ಬಸದಿಯ ಗೋಡೆಯಲ್ಲಿರುವ ಮತ್ತು ಗಾಣಿಗಿತ್ತಿ ಬಸದಿಯ ಮುಂದಿನ ಮಾನಸ್ತಂಭದಲ್ಲಿರುವ ಶಾಸನಗಳು ಜೈನ ಶಾಸನಗಳಿಗೆ ಕೈಗನ್ನಡಿಯಂತಿದೆ. ವಿಜಯ ನಗರದ ಅರಸರು ಜೈನ ಧರ್ಮದ ಪೋಷಕರಾಗಿದ್ದರೂ, ಜೊತೆಗೆ ಅನೇಕ ಜಿನಾಲಯಗಳನ್ನು ನಿರ್ಮಿಸಿದರೆಂಬ ವಿಷಯವು ದೊರೆಯುತ್ತದೆ. ವಿಜಯನಗರದ ಅರಸರು ಜಿನಾಲಯಗಳನ್ನು ಕಟ್ಟಿಸಿದರೆಂಬ ವಿಷಯಗಳನ್ನು ತಿಳಿಸುವ ಸಂದರ್ಭದಲ್ಲಿ ವಿಜಯನಗರ ವೈಭವವನ್ನು ವರ್ಣಿಸಿರುವುದು ಈ ಜೈನ ಶಾಸನದ ವಿಶೇಷತೆಯಾಗಿದೆ. ಗಜ ಶಾಲೆಯ ಹಿಂದಿರುವ ಜೈನ ಬಸದಿಯಲ್ಲಿರುವ ಶಾಸನವು ಗದ್ಯ ಮತ್ತು ಪದ್ಯ ಮಿಶ್ರಿತವಾಗಿದ್ದು ಸುಂದರವಾದ ರಚನೆಯಾಗಿದೆ. ಶೈಲಿಯನ್ನು ಗಮನಿಸಿದಾಗ ಪ್ರಸಿದ್ಧ ಕವಿಯ ರಚನೆಯಂತೆ ಕಂಡು ಬಂದರೂ ಈ ಶಾಸನದಲ್ಲಿ ಶಾಸನ ಕವಿಯ ಉಲ್ಲೇಖವಿಲ್ಲ

ಈ ಶಾಸನದಲ್ಲಿರುವ ಕವಿತ್ವಕ್ಕೊಂದು ಉದಾಹರಣೆ ಹೀಗೆದೆ.

ವಿಶ್ವಸ್ಮಿನ್ವಿಜಯ ಕ್ಷಿತೀಶ ಜನುಷಃ ಶ್ರೀ ದೇವರಾಜೇಶಿತುರ್ಲಕ್ಷ್ಮೀ ।
ಕೀರ್ತ್ತಿಸಿತಾಂಬುಜಂ ಕಲಯತೇ ಶೌರ್ಯ್ಯಾಖ್ಯ ಸೂರ್ಯೋದಯಾತ್ ॥
ಆಶಾ ಯತ್ರ ಪಲಾಶತಾಮುಪಗತಾಃ ಸ್ವರ್ಣಾಚಲಾ ಕರ್ಣ್ಣಿಕಾ ।
ಭೃಂಗಾ ದಿಕ್ಷು ಮತಂಗಜಾ ಜಲಧಹೋ ಮಾರಂದ ಬಿಂದೂತ್ಕರಾಃ ॥

ವಿಶ್ವದಲ್ಲಿ ಜಯವನ್ನು ಸಂಪಾದಿಸಿರುವ, ದೇವರಾಜನೆಂಬ ಶೌರ್ಯದ ಸೂರ್ಯನು ಉದಯವಾದ ಮೇಲೆ ಕೀರ್ತಿಯೆಂಬ ಬಿಳಿಯ ತಾವರೆಯು ಅರಳಿತು. ಈ ತಾವರೆಗೆ ದಿಕ್ಕುಗಳೇ ಪಲ್ಲವಗಳಾದವು. ಸ್ವರ್ಣಾಚಲವೇ ಮೊಗ್ಗಾಯಿತು. ದಿಗ್ಗಜಗಳೇ ಭೃಂಗಗಳೂ ಮತ್ತು ಸಮುದ್ರಗಳೇ ಹೂವಿನ ಮೇಲಿರುವ ಕಣಗಳಂತಾಯಿತು.

ಗಾಣಿಗಿತ್ತಿ ಬಸದಿಯಲ್ಲಿರುವ ಸಂಸ್ಕೃತ ಶಾಸನವೂ[೬೦] ಕೂಡಾ ಕಾವ್ಯಮಯವಾಗಿದ್ದು ಶ್ರೇಷ್ಠಕವಿಯ ರಚನೆಯಾಗಿದೆ. ಇಲ್ಲಿಯೂ ಕೂಡಾ ಕವಿಯ ಉಲ್ಲೇಖ ಕಂಡು ಬರುವುದಿಲ್ಲ. ಈ ಶಾಸನದಲ್ಲಿ ಜಿನ ಮುನಿಗಳ ವಿಸ್ತಾರವಾದ ವಂಶಾವಳಿಯಿದೆ.

ತಿರುಮ ಕೂಡಲು ನರಸೀಪುರ ತಾಲೂಕಿನಲ್ಲಿರುವ ಜೈನ ಸ್ತಂಭ ಶಾಸನವು ಸಂಪೂರ್ಣ ಸಂಸ್ಕೃತ ಭಾಷೆಯಲ್ಲಿದ್ದು ಜೈನ ಸಂಸ್ಕೃತ ಶಾಸನಗಳಲ್ಲಿ ದೊಡ್ಡ ಶಾಸನವೆನ್ನಬಹುದಾಗಿದೆ. ಈ ಸ್ತಂಭ ಶಾಸನದಲ್ಲಿ ೧೫೫ ಸಾಲುಗಳಿದ್ದು ಕೆಲವು ಸಾಲುಗಳು ಅಸ್ಪಷ್ಟವಾಗಿದೆ. ಜೈನಕ ಮುನಿಗಳಿಗೆ ಸಂಬಂಧಿಸಿದ ಹಲವು ಮಹತ್ತರ ವಿಷಯಗಳನ್ನು ತಿಳಿಸುವಂತಹ ಈ ಶಾಸನದಲ್ಲಿ ೨೪ನೆಯ ತೀರ್ಥಂಕರರನ್ನು ಸ್ತುತಿಸುತ್ತಿದೆ.

ನಿರ್ಧೂಯ ಪೂತಿ ಮಲಲೇಪ ಮಲಂ
ಕಳಂಕ ಮಾಲೋಕ ತತ್ತ್ರಿಜಗತಿ ಪ್ರತಿಪೂಜಿತೋಯಃ ।
ಶ್ರೀ ವರ್ಧ ಮಾನ ಇತಿ ಪಶ್ಚಿಮ ತೀರ್ಥ ನಾಥೋ
ಭವ್ಯಾತ್ಮನಾಂ ದಿಶತು ಸಂತತ ಮಿಷ್ಟ ಪುಷ್ಟಂ ॥

ಯಾರ ಕನ್ನೋಟದಿಂದಲೇ ಜಗತ್ತಿನ ಎಲ್ಲಾ ಕಳಂಕಗಳು, ದೋಷಗಳೂ ನಾಶವಾಗುವವೋ, ಯಾರು ಮೂರು ಲೋಕಗಳಲ್ಲಿ ಪೂಜಿತನೋ, ಅಂತಹ 'ಶ್ರೀ ವರ್ಧಮಾನ' ಎಂಬ ಪಶ್ಚಿಮ (ಕೊನೆಯ) ತೀರ್ಥನಾಥನು ನಿರಂತರವಾಗಿ ಪುಷ್ಟಿಯನ್ನೂ ಇಷ್ಟಾರ್ಥವನ್ನು ನೀಡಲಿ.

ಬೇಲೂರು ತಾಲೂಕಿನ ಹಳೇಬೀಡಿನಲ್ಲಿ ಜೈನರಿಗೆ ಸಂಬಂಧಿಸಿದ ಒಂದು ನಿಷಿಧಿ ಶಾಸನವು ದೊರೆಯುತ್ತದೆ. ಈ ಶಾಸನವು ನಿಷಿಧಿ ಶಾಸನಗಳಲ್ಲಿ ಅಪರೂಪದ ಶಾಸನವಾಗಿದ್ದು 'ಬಾಹುಬಲಿ' ಎಂಬ ಮುನಿಯ ಅಗ್ರಶಿಷ್ಯನಾದ ಅರ್ಹನಂದಿ ಮುನೀಂದ್ರರು ನಿಷಿಧಿಗೆ ಹೋದಂತಹ ವಿಷಯವನ್ನು ತಿಳಿಸುತ್ತದೆ. ಈ ಮುನಿಯು ತನ್ನ ಅಂತ್ಯವು ಸನ್ನಿಹಿತವಾದುದನ್ನು ಮನಗಂಡು ಮೂರು ದಿನಗಳ ಕಾಲ ನಿರಾಹಾರ ವೃತವನ್ನಾಚರಿಸಿ ಮೋಕ್ಷಕ್ಕೆ ಹೋದ ವಿಚಾರ ತಿಳಿಸುತ್ತದೆ. ಚಾಮರಾಜ ನಗರ ತಾಲೂಕಿನ, ಮಲೆಯೂರಿನಲ್ಲೂ ಇಂತಹ ೪ ನಿಷಿಧಿ ಶಾಸನಗಳು ದೊರಕುತ್ತವೆ.

ಉಪಸಂಹಾರ

ಈ ಅಧ್ಯಯನದ ದೃಷ್ಟಿಯಿಂದ ಈ ಅಧ್ಯಾಯವು ಬಹಳ ಮುಖ್ಯವಾಗಿದ್ದು, ಸಂಸ್ಕೃತ ಶಾಸನಗಳ ವಿಸ್ತಾರವನ್ನು, ವಿಶೇಷತೆಯನ್ನು, ವಿಕಾಸವನ್ನು ನೋಡಿದಂತಾಗುತ್ತದೆ. ಕದಂಬರ ಕಾಲದಲ್ಲಿ ಪ್ರಾರಂಭವಾದ ಸಂಸ್ಕೃತ ಶಾಸನಗಳ ಪ್ರಯಾಣವು ಮುಂದೆ ಮೈಸೂರು ಅರಸರ ಕಾಲದವರೆಗೆ ಹೇಗೆ ವಿಸ್ತಾರವನ್ನು ಹೊಂದಿತೆಂದು ನಾವು ಸ್ಪಷ್ಟವಾಗಿ ನೋಡಬಹುದಾಗಿದೆ. ಪ್ರಸಿದ್ಧ ರಾಜ ಮನೆತನಗಳಲ್ಲದೆ, ಮಹಾಮಂಡಳೇಶ್ವರರು, ಸಾಮಂತರ ಅರಸರು ಮತ್ತು ಪಾಳೆಯಗಾರರು ಸಂಸ್ಕೃತ ಶಾಸನಗಳಿಗೆ ನೀಡಿದಂತಹ ಕಾಣಿಕೆಯನ್ನು ಈ ಅಧ್ಯಾಯನದಲ್ಲಿ ನೋಡಿದಂತಾಗಿದೆ. ಕೇವಲ ದಾನಗಳ ಉಲ್ಲೇಖವನ್ನು ಮಾಡಲು ಹೊರಟ ಶಾಸನಗಳು ಐತಿಹಾಸಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ದೃಷ್ಟಿಯಿಂದ ಪಡೆದಂತಹ ಉನ್ನತ ಸ್ಥಾನವನ್ನು ಚರ್ಚಿಸಿದಂತಾಗಿದೆ. ಕರ್ನಾಟಕದ ಪ್ರಸಿದ್ಧ ರಾಜರುಗಳಿಗೆ ಸಂಬಂಧಿಸಿದ ಸಂಸ್ಕೃತ ಶಾಸನಗಳು ದೊರೆಕಿದೆ. ಹಾಗಾಗಿ ಅವರಿಗೆ ಸಂಸ್ಕೃತ ಭಾಷೆಯ ಮೇಲೆ ಇದ್ದಂತಹ ಕಳಕಳಿಯನ್ನು, ಪ್ರೀತಿಯನ್ನು ನೋಡಿದಂತಾಗಿದೆ.

ಅಡಿ ಟಿಪ್ಪಣಿಗಳು

೧. ಬನವಾಸಿ ಕದಂಬರು – ಬಾ.ರಾ.ಗೋಪಾಲ್ ಪು.ಸಂ ೭

೨. ಬನವಾಸಿ ಕದಂಬರು – ಬಾ.ರಾ. ಗೋಪಾಲ್ ಪು.ಸಂ. ೪೫

೩. ಶಾಸನ ಪರಿಭಾಷೆ – ಎಸ್. ಎಮ್. ಹಿರೇಮಠ ಪು.ಸಂ.೩೦

೪. ಕರ್ನಾಟಕ ಇತಿಹಾಸ ದರ್ಶನ – ಪು.ಸಂ ೩೭

೫. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೪ ಚಾಮರಾಜ ನಗರ ತಾ, ಕೆರೆ ಹಳ್ಳಿ ಸಂ.೩೫೪

೬. ಇನ್‌ಸ್ಕ್ರಿಪ್ಷನ್ ಆಫ್ ವೆಸ್ಟರ್ನ್ ಗಂಗಾಸ್–ಕುಕುನೂರ್ ಪ್ಲೇಟ್ಸ್ ಆಫ್ ಮಾರಸಿಂಹ ೨

೭. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೫ ಕೃಷ್ಣರಾಜ ನಗರ ತಾ, ಸಾಲಿಗ್ರಾಮ ಸಂ.೪೯

೮. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೧೭ ಚಿಕ್ಕ ಬಳ್ಳಾಪುರ ತಾ, ಹೊಸ ಶಾಸನಗಳು – ಸಂ ೬೬

೯. ಎಫಿಗ್ರಾಪಿಯಾ ಕರ್ನಾಟಿಕಾ – ಸಂ.೫ ಕೃಷ್ಣರಾಜ ನಗರ ತಾ, ಸಾಲಿಗ್ರಾಮ ಸಂ.೪೯

೧೦. ಕರ್ನಾಟಕ ಇತಿಹಾಸ ದರ್ಶನ – ಪು.ಸಂ. ೧೧೧೯

೧೧. ಕೆ.ಯು.ಇ.ಎಸ್ – ಸಂ.೧ ಸಂಡೂರು ತಾ, ನಾರಿಹಳ್ಳ ಸಂ.೧೭

೧೨. ಕೆ.ಯು.ಇ.ಎಸ್ – ಸಂ.೯ ಬಾಗಲಕೋಟೆ ತಾ, ಬಾದಾಮಿ ಸಂ.೩೩೭

೧೩. ಕೆ.ಯುಇ.ಎಸ್ – ಸಂ.೯ ಬಾಗಲಕೋಟೆ ತಾ, ಬಾದಾಮಿ ಸಂ.೪೧೦

೧೪. ಕೆ.ಯು.ಇಎಸ್ – ಸಂ.೯ ಬಾಗಲಕೋಟೆ ತಾ, ಬಾದಾಮಿ ಸಂ.೪೧೦

೧೫. ಕರ್ನಾಟಕ ಇತಿಹಾಸ ದರ್ಶನ – ಪು.ಸಂ.೯೦

೧೬. ಎಪಿಗ್ರಾಫಿಯಾ ಇಂಡಿಕಾ – ಸಂ.೪ – ಕರ್ಹಾಡ್ ಪ್ಲೇಟ್ಸ್ ಆಫ್ ಕೃಷ್ಣ – III

೧೭. ಎಫಿಗ್ರಾಫಿಯಾ ಇಂಡಿಕಾ – ಸಂ.೪ – ಕರ್ಹಾಡ್ ಪ್ಲೇಟ್ಸ್ ಆಫ್ ಕೃಷ್ಣ – III

೧೮. ಎಪಿಗ್ರಾಫಿಯಾ ಇಂಡಿಕಾ – ಸಂ.೨೧ ಕೊಳಗಲ್ಲು ಇನ್‌ಸ್ಕ್ರಿಪ್ಷನ್ ಆಫ್ ಖೊಟ್ಟಿಗ

೧೯. ಎಫಿಗ್ರಾಫಿಯಾ ಇಂಡಿಕಾ – ಸಂ.೪ ಸಾಲೋತಿಗಿ ಸ್ತಂಭ ಶಾಸನ

೨೦. ಎಫಿಗ್ರಾಫಿಯಾ ಇಂಡಿಕಾ – ಸ.೧೨ ನೀಲಗುಂದ ಪ್ಲೇಟ್ಸ್ ಆಪ್ ವಿಕ್ರಮಾದಿತ್ಯ ೬

೨೧. ಕರ್ನಾಟಕ ಇತಿಹಾಸ ದರ್ಶನ – ಪು.ಸಂ. ೧೧೧೩

೨೨. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೯ ಬೇಲೂರು ಸಂ.೧೬

೨೩. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೯ ಬೇಲೂರು ಸಂ.೧೭೦

೨೪. ಎಫಿಗ್ರಾಫಿಯಾ ಇಂಡಿಕಾ – ಸಂ.೬ ಗದಗ ಇನ್‌ಸ್ಕ್ರಿಪ್ಷನ್ ಆಫ್ ವೀರ ಬಲ್ಲಾಳ

೨೫. ಎಫಿಗ್ರಾಫಿಯಾ ಇಂಡಿಕಾ – ಸಂ.೩೧ ಕಮಲಾಪುರ ಪ್ಲೇಟ್ಸ್ ಆಫ್ ಕೃಷ್ಣದೇವರಾಯ

೨೬. ಎಫಿಗ್ರಾಪಿಯಾ ಕರ್ನಾಟಿಕಾ – ಸಂ.೧೧ ಶೃಂಗೇರಿ ಸಂ.೩೨

೨೭. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೩ ಹೆಗ್ಗಡ ದೇವನ ಕೋಟೆ ಸಂ.೧೪೯

೨೮. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೫ ಕೃಷ್ಣರಾಜ ನಗರ ತಾ, ಹೆಬಸೂರು ಸಂ.೭೭

೨೯. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೩ ನಂಜನಗೂಡು ತಾ, ಗಜ್ಜಿಗನ ಹಳ್ಳಿ ಸಂ.೨೧೨

೩೦. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೩ ಹೆಗ್ಗಡದೇವನ ಕೋಟೆ ಸಂ.೮೯

೩೧. ಕೆ.ಯು.ಇ.ಎಸ್ – ಸಂ.೩ ಹಂಪಿ ಶಾಸನಗಳು ಸಂ.೩೨೭

೩೨. ಕೆ.ಯು.ಇ.ಎಸ್ – ಸಂ.೩ ಹಂಪಿ ಶಾಸನಗಳು ಸಂ.೩೯೬

೩೩. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೫ ತಿರುಮ ಕೂಡಲು ನರಸೀಪುರ ಸಂ.೧೬

೩೪. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೬ ಪಾಂಡವ ಪುರ ಸಂ.೯

೩೫. ಕೆ.ಯು.ಇ.ಎಸ್ – ಸಂ.೮ ಬೀದರ್ ತಾ, ಸಂ.೧೭

೩೬. ಎಫಿಗ್ರಾಫಿಯಾ ಇಂಡಿಕಾ – ಸಂ.೪೨

೩೭. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೨ ಶ್ರವಣಬೆಳಗೊಳ ಶಾಸನಗಳು

೩೮. ಎಫಿಗ್ರಾಫಿಯಾ ಕರ್ನಾಟಿಕಾ – ಸಂ.೨ ಶ್ರವಣಬೆಳಗೊಳ ಸಂ.೩೬೦

೩೯. ಕೆ.ಯು.ಇ.ಎಸ್ – ಸಂ.೩ ಹಂಪಿ ಶಾಸನಗಳು

೪೦. ಕೆ.ಯು.ಇ.ಎಸ್ – ಸಂ.೩ ಹಂಪಿ ಶಾಸನಗಳು

ಅಧ್ಯಾಯ ೫

ಸಂಸ್ಕೃತ ಶಾಸನಗಳ ವಿಷಯ ವೈವಿಧ್ಯತೆ
ಮತ್ತು
ಕನ್ನಡ ಶಾಸನಗಳ ಮೇಲೆ ಅದರ ಪ್ರಭಾವ

ಅಧ್ಯಾಯ ೫

ಸಂಸ್ಕೃತ ಶಾಸನಗಳ ವಿಷಯ ವೈವಿಧ್ಯತೆ ಮತ್ತು ಕನ್ನಡ ಶಾಸನಗಳ ಮೇಲೆ ಅದರ ಪ್ರಭಾವ

ಪೀಠಿಕೆ

ಹಿಂದಿನ ಅಧ್ಯಯಗಳಲ್ಲಿ ಸಂಸ್ಕೃತ ಶಾಸನಗಳ ವಿಕಾಸವನ್ನು ನಾವು ವಿವಿಧ ಹಂತಗಳಲ್ಲಿ ಗಮನಿಸಿದೆವು. ಅದರೊಂದಿಗೆ ಪ್ರಾರ್ಥನಾ ಶ್ಲೋಕಗಳಲ್ಲಿ ಮತ್ತು ಶಾಪಾಶಯದ ಭಾಗಗಳಲ್ಲಿ ಬಂದಂತಹ ವಿಷಯಗಳ ವಿಶೇಷತೆಯನ್ನು ಹಿಂದಿನ ಅಧ್ಯಾಯಗಳಲ್ಲಿ ನೀಡಲಾಗಿದೆ. ಆದರೂ ಕರ್ನಾಟಕದ ಸಂಸ್ಕೃತ ಶಾಸನಗಳು ಸಾಹಿತ್ಯಕ್ಕೆ ಮತ್ತು ಸಾಹಿತ್ಯ ಪ್ರಕಾರಕ್ಕೆ ಅಪಾರ ಕೊಡುಗೆಗಳನ್ನು ನೀಡಿವೆ. **'ಗದ್ಯಂ ಕವೀನಾಂ ನಿಕಷಂ ವದಂತಿ'** ಎಂಬ ಮಾತಿದೆ ಇದರರ್ಥ ಗದ್ಯವು ಕವಿಗಳಿಗೆ ಒರೆಗಲ್ಲಿದ್ದಂತೆ' ಆದರೆ ಕಠಿಣವಾದ ಗದ್ಯ ಸಾಹಿತ್ಯದಲ್ಲೂ ಕೂಡಾ ಅನೇಕ ಚಮತ್ಕಾರಿ ಕಾವ್ಯ ಅಂಶಗಳನ್ನು ಕಾಣಬಹುದು. ಗದ್ಯವೂ ಕೂಡಾ ಪದ್ಯ ಸಾಹಿತ್ಯದಂತೆ ಮನೋಹರವಾಗಿದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಸಾಹಿತ್ಯದ ವೈವಿಧ್ಯತೆಯನ್ನು ತಿಳಿಸಲಾಗುವುದು.

ಗದ್ಯ ಸಾಹಿತ್ಯದ ಪ್ರಕಾರದಲ್ಲಿ ಅದರಲ್ಲೂ ಶಾಸನಗಳಲ್ಲಿ ಗಂಗರ ಶಾಸನಗಳು ಶ್ರೇಷ«ವಾಗಿದೆ. ಇವರ ಕಾಲದ ಶಾಸನಗಳಲ್ಲಿ ಬಹುಪಾಲು ಗದ್ಯಶೈಲಿಯಲ್ಲಿದೆ, ಗದ್ಯಶೈಲಿಯಲ್ಲಿರುವ ಒಂದು ವಿಶೇಷತೆಯು ಈ ರೀತಿಯಾಗಿದೆ.

"ಸತು ಪಿತಾಮಹ ಇವ ಅನೇಕ ರಾಜಹಂಸಸಂಸೇವಿತಃ, ಪದ್ಮಾವಾಸಶ್ಚ, ಮಧುಮಥನ ಇವ ತ್ರಿಲೋಕಾಧಿಪಃ ವಿಕ್ರಮ ಕ್ಷಿಪ್ತ ಬಲರಿಪುಹೀನ ಸ್ಥಿತಿಃ ಧೂರ್ಜಟಿ ರಿವಾವಿನಶ್ವರೇಶ್ವರಃ ಭಾವೋ ವೀರಭದ್ರಶ್ಚ ಕಾರ್ತಿಕೇಯ ಇವ ಸಕಲ ಜಗದುದೀರಿತ ಸ್ವಾಮಿಶಬ್ದಃ ಶಕ್ತಿ ಸಂಪನ್ನಶ್ಚ..."[೧]

(ಪಿತಾಮಹಾನಂತೆ(ಬ್ರಹ್ಮ) ಅನೇಕ ರಾಜಹಂಸಗಳಿಂದ (ಅನೇಕ ರಾಣಿಯರಿಂದ) ಸೇವಿತನೂ, ಪದ್ಮಳೊಂದಿಗೆ ವಾಸಿಸುವವನೂ(ರಾಜ ಲಕ್ಷ್ಮಿಯೊಂದಿಗೆ ಯಾವಾಗಲು ಇರುವವನೂ), ಮಧುಮಥನ (ವಿಷ್ಣು)ನಂತೆ ಮೂರು ಲೋಕಕ್ಕೆ ಅಧಿಪತಿಯೂ, ಬಲಿಗೆ ರಿಪು ವಿನಂತಿರುವವನೂ (ಬಲಿಷ« ರಿಪುಗಳನ್ನು ಸೋಲಿಸಿದವನೂ) ದೂರ್ಜಟಿ (ಶಿವ)ಯಂತೆ ಅವಿನಾಶವಾದ ಈಶ್ವರತ್ವ ಉಳ್ಳವನೂ ((ಭೂಭಾರವನ್ನು ಧರಿಸಿದವನು) ವೀರಭದ್ರನೂ (ಬಲಿಷ«ವಾದ ಪರಾಕ್ರಮ ಉಳ್ಳವನೂ) ಕಾರ್ತಿಕೇಯನಂತೆ ಸಕಲ ಲೋಕದಿಂದ ಸ್ತುತಿಸಲ್ಪಡುವವನೂ...)

ಈತನು (ಮಾರಸಿಂಹ) ಸತತವಾಗಿ ಕಮಲಾನಂದ ಕರನಾಗಿದ್ದರೂ ಪ್ರಚಂಡ ಕಿರಣನಾಗಿರಲಿಲ್ಲ. ಪುಣ್ಯಜನರಿಂದ ಕೂಡಿದವನಾಗಿದ್ದರೂ ಕೂಡಾ ಅನ್ಯಶಂಸನು, ಮದಭರಿತ ಆನೆಗಳ ಮೇಲೆ ಕುಳಿತುಕೊಂಡಿದ್ದರೂ ಅತ್ಯಂತ ಗುಣ ಸ್ವಭಾವದವನು, ಪ್ರಿಯ ಧನುಸ್ಸನ್ನು ಹೊಂದಿದ್ದರೂ ಬಾಣಗಳನ್ನು ಹೊಂದಿರಲಿಲ್ಲ, ದಂಡ ನೀತಿಯನ್ನು ಅನುಸರಿಸಿದ್ದರೂ ಕೂಡಾ ಯಾರಿಗೂ ದಂಡ ಪ್ರಯೋಗವನ್ನು ಮಾಡಿರಲಿಲ್ಲ...

ಈ ಗದ್ಯಭಾಗದಲ್ಲಿ ವಿರೋಧಾಭಾಸವನ್ನು ಬಳಸಿದ್ದಾರೆ. ಸಂಸ್ಕೃತ ಭಾಗವನ್ನು ಗಮನಿಸಿದಾಗ ಒಮ್ಮೆ ರಾಜನನ್ನು ಒಂದು ವಸ್ತುವಿಗೆ ಹೋಲಿಸಿ ನಂತರ ಕೂಡಲೇ ಅದು ಅವನಲ್ಲಾ ಎಂದು ನಿರಾಕರಿಸುವಂತಹ ಭಾಗ ಇಲ್ಲಿ ವಿಶೇಷವಾಗಿದೆ. ಆದರೆ ಇಲ್ಲಿ ಬಳಸಿದಂತಹ ಶಬ್ದಗಳ ಶೈಲಿಯನ್ನು ಗಮನಿಸಿದಾಗ ಅದರ ನಿಜಾಂಶ ಅರಿವಾಗುತ್ತದೆ. ಇಲ್ಲಿ ರಾಜನನ್ನು 'ಕಮಲಾನಂದಕರ' ಎಂದು ಸೂರ್ಯನಿಗೆ ಹೋಲಿಸಿ ನಂತರ 'ಅಚಂಡಕರ' ಎಂದು ನಿರಾಕರಿಸಲಾಗಿದೆ. ವಸ್ತುತಃ ಇಲ್ಲಿ ಅರ್ಥವನ್ನು ಹೀಗೆ ಕೂಡಿಸಬೇಕಾಗುತ್ತದೆ. ಈತನು ಜನರಿಗೆ ಆನಂದವನ್ನುಂಟು ಮಾಡುವವನಾಗಿದ್ದರೂ ಜನರಿಗೆ ಸಂತಾಪವನ್ನುಂಟು ಮಾಡುತ್ತಿರಲಿಲ್ಲ. ಪುಣ್ಯ ಜನರಿಂದ ಸೇವಿತನಾದರೂ ಅನ್ಯಶಂಸನು ಅದರ ಉಗ್ರನಾಗಿರಲಿಲ್ಲ. ಮದಭರಿತವಾದ ಆನೆಗಳ ಮೇಲೆ ಕುಳಿತುಕೊಂಡಿದ್ದರಿಂದ ಇವನಿಗೆ ಮದವೇರಬೇಕಿತ್ತು ಆದರೆ ಹಾಗಾಗಲಿಲ್ಲ. ತನಗೆ ಪ್ರಿಯವಾದ ಧನುಸ್ಸನ್ನು ಹೊಂದಿದ್ದರೂ ಮಾರ್ಗಣ (ಬಿಲ್ಲು)ಗಳನ್ನು ಹೊಂದಿರಲಿಲ್ಲ. ಧನುಸ್ಸಿದ್ದು ಬಾಣಗಳು ಇಲ್ಲದೇ ಹೋದರೆ ಹೇಗಾದೀತು? ವಸ್ತುತಃ ಇಲ್ಲಿ ಬಿಲ್ಲುಗಾರಿಕೆಯನ್ನು ಬಲ್ಲವನಾಗಿದ್ದರು ನೀತಿ ಮಾರ್ಗದಿಂದ ಅದರ ಪ್ರಯೋಗವನ್ನು ಮಾಡುತ್ತಿದ್ದನೆಂಬ ಅರ್ಥವಾಗಿದೆ.

ಗಂಗ ಅರಸರ ಕಾಲದ ಹಲವಾರು ಶಾಸನಗಳಲ್ಲಿ ಇಂತಹ ಚಮತ್ಕಾರಿ ಗದ್ಯಶೈಲಿಯನ್ನು ಕಾಣಬಹುದಾಗಿದೆ.

ಅದೇ ರಾಜನ ವರ್ಣನೆ ಹೀಗೆ ಸೊಗಸಾಗಿ ಬಂದಿದೆ-

"ಯಶ್ಚ ಸತತ ಸಂಪಾದಿತ ಕಮಲಾನಂದ ಕರೋಪಿ ಅಚಂಡಕರಃ । ಪುಣ್ಯಜನ ಸತ್ವ ಸಮೇತೋಪಿ ಅನೃಶಂಸ ಮಾನಸ ಮತ್ತ ಮಾತಂಗ ಸೈಂದಲಾಳಿತೋಪಿ, ಅತಿಗುಣಿ ಸ್ವಭಾವಃ, ಪ್ರಿಯಧನುರಪಿ ಅಮಾರ್ಗಣಃ, ಸಮನುಷ್ಠಿತ ದಂಡನ ನೀತಿರಪಿ ಅದಂಡ ಕ್ರಮಾಗತಿಃ..."[೨]

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಮುಖ್ಯ ಕಾರಣರಾದ ವಿದ್ಯಾರಣ್ಯರ ಮಹತ್ವವನ್ನು ತಿಳಿಸುವಂತಹ ಮಹತ್ತರವಾದ ಶ್ಲೋಕವೂ ಶೃಂಗೇರಿಯಲ್ಲಿರುವ ಶಾಸನವು [೩] ತಿಳಿಸುತ್ತದೆ. ವಿಜಯನಗರ ಅರಸ ಹರಿಹರ ಕಾಲದ ಈ ಶಾಸನದಲ್ಲಿ ವಿದ್ಯಾರಣ್ಯರನ್ನು ಸ್ತುತಿಸುವ ಶ್ಲೋಕವು ಈ ರೀತಿಯಾಗಿದೆ.

ಸೂಕ್ಷ್ಮಾವಾದನ ಪಾಯಿನೀ ಪರಚಿದಾನಂದಾತ್ಮಿಕಾ ।
ಯಾಪರಾ ಯಾ ಪಶ್ಯಂತ್ಯಪಿ ಬರ್ಹಿಣೋಡುರಸವದ್ವರ್ಣಾನ್ಬಹೂನ್ಬಿಭ್ರತೀ ।
ಸಂಜಲ್ಪಾತ್ಮತಯಾ ವಿಕಲ್ಪ ಶಬಲಾ ಯಾ ಮಧ್ಯಮಾ ।
ತಾ ಬಹಿರ್ವಿದ್ಯಾತೀರ್ಥ ಮುನೇರ್ನಿರೂಪಣ ವಿಧೌ ಕ್ವಾಸ್ತೇ ಪುನಃ ವೈಖರೀ॥

(ಸೂಕ್ಷ್ಮವಾಗಿ ಹಾಡಲು ಯೋಗ್ಯವಾದ ಚಿರಪರಿಚಿತವಾದ ಮತ್ತು ಆನಂದವನ್ನುಂಟು ಮಾಡುವ 'ಪರಾ' ರೂಪವಾದ ನಾದವು ಶಕ್ತವಾದೀತೇ? ಅಥವಾ ನವಿಲಿನ ಗರಿಗಳ ವಿವಿಧ ವರ್ಣಗಳಂತೆ, ನಕ್ಷತ್ರಗಳ ಬಣ್ಣದಂತೆ ಮತ್ತು ವಿವಿಧ ರಸಗಳಂತೆ ವಿವಿಧ ವರ್ಣಗಳುಳ್ಳ 'ಪಶ್ಯಂತಿ' ರೂಪವಾದ ನಾದವು ಶಕ್ತ ವಾದೀತೇ? ಮಕ್ಕಳ ತೊದಲು ನುಡಿಯಂತೆ ಇರುವ ಮಧ್ಯಮಾ ನಾದವು ಶಕ್ತವಾದೀತೇ? ಅಥವಾ ವೈಖರೀ ನಾದವು ಶಕ್ತವಾದಿತೇ? ವಿದ್ಯಾತೀರ್ಥ ಮುನಿಯ ನಿರೂಪಣೆ ಮಾಡಲು ಯಾವ ನಾದ ಶಕ್ತವಾದೀತು?

ವಿದ್ಯಾರಣ್ಯ ಮುನಿಗಳು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಪ್ರಧಾನ ಶಕ್ತಿಯಾಗಿದ್ದಾರೆ. ಅವರನ್ನು ಕುರಿತಾದ ಶಾಸನಗಳು ಬಹಳ ವಿರಳವಾಗಿದೆ. ಶೃಂಗೇರಿಯಲ್ಲಿ ದೊರೆತ ಒಂದು ಶಾಸನವು ಅವರ ಮಹತ್ವವನ್ನು ಹೀಗೆ ಸಾರುತ್ತಿದೆ. 'ಪರಾ', 'ಪಶ್ಯಂತಿ', ಮಧ್ಯಮಾ ಮತ್ತು ವೈಖರಿ ಇವುಗಳು ನಾದದ ಪ್ರಕಾರಗಳಾಗಿವೆ. ನಮ್ಮ ಧ್ವನಿ ಅಂಗಗಳಲ್ಲಿ ಹುಟ್ಟುವಂತಹ ಧ್ವನಿಯು 'ಪರಾ', 'ಪಶ್ಯಂತಿ' ಮತ್ತು 'ಮಧ್ಯಮಾ' ಎಂಬಂತಹ ಮೂರು ರೂಪಗಳನ್ನು ಪಡೆದು ಕೊನೆಗೆ ವೈಖರೀ ನಾದವಾಗಿ ಬಾಯಿಯಿಂದ ಹೊರಹೊಮ್ಮುತ್ತದೆ. ಇಂತಹ ನಾದಗಳೇ ವಿದ್ಯಾತೀರ್ಥರನ್ನು ವರ್ಣಿಸಲಸಾಧ್ಯವಾದಾಗ ಬೇರೆ ಯಾವ ನಾದವು ಶಕ್ತವಾದೀತು?. ಇಂತಹ ನಾದಗಳ ಸ್ವರೂಪವನ್ನು ಈ ಶ್ಲೋಕವು ತಿಳಿಯಪಡಿಸುತ್ತದೆ. ಭಾಷಾಶಾಸ್ತ್ರದ ದೃಷ್ಟಿಯಿಂದ ಮಹತ್ವ ಪಡೆದ ಶ್ಲೋಕವಿದಾಗಿದೆ.

ಮೈಸೂರು ಅರಸ ಕೃಷ್ಣರಾಜನನ್ನು ಒಂದು ಶಾಸನವು ಈ ರೀತಿಯಾಗಿ ವರ್ಣಿಸಿದೆ.[೪]

ಅಲಂಕ್ರಿಯಾಂಗೀಷ್ವಿಹ ರುಕ್ಮಿಣೀಯಂ
ವಕ್ತ್ರಾಂಬುಜೇ ವಾಗಿಯ ಮತ್ರ ಸತ್ಯಾ ।
ಶ್ರೀಕೃಷ್ಣರಾಜೇ ಬಲಭದ್ರ ಯೋಗೋ –
ಪ್ಯಸೌ ಸ್ಫುಟಂ ಶಾಂಸತಿ ಕೃಷ್ಣಭಾವಂ ॥

(ಮುಖಾರವಿಂದದಲ್ಲಿ ರುಕ್ಮಣೀಯತ್ಮವೂ (ಬಂಗಾರದಂತಹ ತೇಜಸ್ಸು), ಮಾತಿನಲ್ಲಿ ಸತ್ಯತೆಯು (ಸತ್ಯಭಾಮಾ) ಮತ್ತು ಬಲಿಷ್ಠವಾದ ಭುಜಗಳನ್ನು(ಬಲಭದ್ರ) ಹೊಂದಿದುದರಿಂದ ಕೃಷ್ಣರಾಜನಲ್ಲಿ ಸ್ಪಷ್ಟವಾಗಿ ಶ್ರೀಕೃಷ್ಣನ ರೂಪವು ಕಂಡುಬರುತ್ತಿತ್ತು.)

ಈ ಶ್ಲೋಕದಲ್ಲಿ ಕೃಷ್ಣರಾಜನನ್ನು ಶ್ರೀಕೃಷ್ಣನಿಗೆ ಅನ್ವರ್ಥವಾಗಿ 'ರುಕ್ಮಣೀಯತ್ವ', 'ಸತ್ಯತ್ವ' ಮತ್ತು 'ಬಲಭದ್ರ' ಎಂಬ ಶಬ್ದಗಳ ಬಳಕೆ ಮಾಡಲಾಗಿದೆ.

ಮೈಸೂರು ಒಡೆಯ ಕಂಠೀರವ ನರಸರಾಜನನ್ನು ವಿಷ್ಣುವಿನ ಹತ್ತು ಅವತಾರಗಳೊಂದಿಗೆ ಹೋಲಿಸಿರುವುದು ಬಹಳ ಸುಂದರವಾಗಿ ಒಂದು ಶಾಸನದಲ್ಲಿ[೫] ಈ ರೀತಿಯಾಗಿ ಚಿತ್ರಿತವಾಗಿದೆ.

ವೇದಸ್ಯೋದ್ಧರಣಾಜ್ಜಗಂ ನಿವಹನಾದ್ಗೋತ್ರಾಭಿವೃದ್ಧೇ ಸ್ತಥಾ ।
ಭಕ್ತಾಹ್ಲಾದನತೋ ಬಲಿಪ್ರಮಥನಾಚ್ಛ ತೃಕ್ಷಯಾತ್ಸತ್ಯತಃ ।
ಮ್ಲೇಂಛಾನಾಂ ಹನನಾದ್ಭುಜ ಪ್ರಬಲತೋ ಧರ್ಮಾಳಿಗೋಪಾಲನಾತ್ ।
ಏಕತ್ರೈವ ಹರೇರ್ದಶಾಕೃತಿಧರಃ ಕಂಠೀರವ ಕ್ಷ್ಮಾಪತಿಃ ॥

(ವೇದಗಳ ಉದ್ಧಾರ ಮಾಡಿದುದರಿಂದ (ವೇದ ಶಾಸ್ತ್ರಗಳಿಗೆ ಪ್ರೋತ್ಸಾಹ ನೀಡಿದುದರಿಂದ, ಮತ್ಸ್ಯಾವತಾರಿ), ಭೂಮಿಯನ್ನು ರಕ್ಷಿಸಿದುದರಿಂದ ತನ್ನ ರಾಜ್ಯವನ್ನು ರಕ್ಷಿಸಿದುದರಿಂದ, ವರಾಹವತಾರಿ), ಸಂಸಾರವನ್ನು ಅಭಿವೃದ್ಧಿಗೊಳಿಸಿದುದರಿಂದ (ಬುದ್ಧಾವತಾರಿಯು), ಭಕ್ತರಿಗೆ ಆಹ್ಲಾದವನ್ನು ನೀಡಿದುದರಿಂದ (ಆಶ್ರಿತ ಜನರಿಗೆ ಸಂತೋಷವನ್ನು ನೀಡಿದುದರಿಂದ ನರಸಿಂಹಾವತಾರಿ), ದರ್ಪದಿಂದ ಕೂಡಿದ ಬಲಿಷ್ಠ ರಾಜರನ್ನು ನಾಶ ಮಾಡಿದುದರಿಂದ (ವಾಮನವತಾರಿಯೂ), ಶತ್ರುಗಳನ್ನು ನಾಶ ಮಾಡಿದುದರಿಂದ (ಪರಶುರಾಮ), ಸತ್ಯವಂತನಾದುದರಿಂದ (ಶ್ರೀರಾಮನು), ಮೇಚ್ಛರನ್ನು ನಾಶ ಮಾಡುವುದರಿಂದ (ಮುಸಲ್ಮಾನ ದೊರೆಗಳನ್ನು ಸೋಲಿಸಿದುದರಿಂದ ಕಲಿಯು), ಧರ್ಮವೆಂಬ ಗೋವನ್ನು ರಕ್ಷಿಸಿದುದರಿಂದ ಶ್ರೀಕೃಷ್ಣನು ಈ ರೀತಿಯಾಗಿ ಕಂಠೀರವನಲ್ಲಿ ಒಂದೇ ಕಡೆ ಹರಿಯ ಹತ್ತು ಅವತಾರಗಳು ಕಂಡುಬಂದವು.)

ಕರ್ನಾಟಕದ ಸಂಸ್ಕೃತ ಮತ್ತು ಕನ್ನಡ ಶಾಸನಗಳಲ್ಲಿ 'ವಿಷ್ಣು'ವು ಬಹಳವಾಗಿ ವರ್ಣಿತನಾಗಿದ್ದಾನೆ. ಸೃಷ್ಟಿ, ಸ್ಥಿತಿ ಮತ್ತು ಲಯಗಳೆಂಬ ಮೂರು ಅವಸ್ಥೆಗಳಲ್ಲಿ ಸ್ಥಿತಿಕಾರಕನಾದ ವಿಷ್ಣುವು ಎಲ್ಲಾ ರಾಜರ ಶಾಸನಗಳ ಪ್ರಾರಂಭದಲ್ಲಿ ಸ್ತುತನಾಗಿದ್ದಾನೆ. ಪಾಂಡವಪುರ ತಾಲೂಕು ಮೇಲು ಕೋಟೆಯಲ್ಲಿ ದೊರಕಿದಂತಹ ಮೈಸೂರು ಅರಸರ ಕಂಠೀರ ನರಸರಾಜನ ಕಾಲದ ತಾಮ್ರಶಾಸನವು ಹಲವಾರು ಕಾವ್ಯ ಅಂಶಗಳನ್ನು ಒಳಗೊಂಡಿದೆ. ವಿಷ್ಣುವಿನ ಹತ್ತು ಅವತಾರಗಳು ಪ್ರಸಿದ್ಧವಾಗಿದೆ. ವಿಷ್ಣುವಿನ ಹತ್ತು ವಿವಿಧ ಸಂದರ್ಭಗಳಲ್ಲಿ ಹತ್ತು ಅವತಾರ (ಬೇರೆ ಬೇರೆ ರೂಪಗಳಿಂದ) ಗಳಿಂದ ಭೂಮಿಗೆ ಇಳಿದು ಈ ಭೂಮಿಯ ಉದ್ಧಾರವನ್ನು ಮಾಡಿದುದನ್ನು. ವಿಷ್ಣುವು ಇದಕ್ಕಾಗಿ ಹತ್ತು ವಿವಿಧ ಅವತಾರಗಳನ್ನು ಧರಿಸಿ ಬಂದಿದ್ದರೆ ಕಂಠೀರವ ನರಸರಾಜನು ಈ ಎಲ್ಲಾ ಪರಾಕ್ರಮವನ್ನು ಒಮ್ಮೆಲೆ ಸಾಧಿಸಿದುದರಿಂದ ಅವನೊಬ್ಬನಲ್ಲಿಯೇ ಆ ಎಲ್ಲಾ ಅಂಶಗಳು ಕಂಡುಬಂದವು.

ಮೈಸೂರು ಒಡೆಯ ನರಸಿಂಹನ ಯುದ್ಧವೆಂಬ ಯಜ್ಞದ ವರ್ಣನೆಯು ಮನೋಜ್ಞವಾಗಿ ಒಂದು ಶಾಸನದಲ್ಲಿ[೬] ಈ ರೀತಿಯಾಗಿ ವರ್ಣಿತವಾಗಿದೆ.

ವಿಕ್ರಮ ಪಾಲ ಪಾಂಸ ಮಕರ ಪೋದ್ದಂಡ ಹೋಯಿಸಾರ್ಯ ಮಾ ।
ಯದ್ಯಜ್ಞೇ ಪಶವಃ ಶರಾಃ ಪರಿಧಯಃ ಸಂಗ್ರಾಮಭೂರ್ಮಂಟಪಃ ॥
ಸ್ವಕ್ರೋಧೋರಣಿ ರಿಧ್ಮಮುನದ್ದುರಿಪುಗ್ರಾಮಾಃ ಪ್ರತಾಪಾನಲೋ
ಮಂತ್ರಃ ಕೋಪಕರಾಳ ಕರ್ಕಶ ವಚೋ ಶ್ಚೋಲ ಪ್ರತಿಷಾ«ಫಲಂ ॥

(ನರಸಿಂಹನ ಯುದ್ಧವೆಂಬ ಯಜ್ಞಕ್ಕೆ ವಿಕ್ರಮಪಾಲ, ಪಾಂಸ, ಮಕರ ಮತ್ತು ಸೊಕ್ಕಿನ 'ಹೊಯಿಸಾರ್ಯಮ' ಮೊದಲಾದವರೇ ಪಶುಗಳು, ಬಾಣಗಳೇ ಪರಿಧಿಗಳು, ಯುದ್ಧಭೂಮಿಯೇ ಯಜ್ಞಮಂಟಪವು, ತನ್ನ ಕ್ರೋಧವೇ ಅರಣಿಯು, ಶತ್ರುಗಳ ಗ್ರಾಮಗಳೇ ಇಧ್ಮ(ಇಂಧನವು), ಆತನ ಪ್ರತಾಪವೇ ಬೆಂಕಿಯು, ಭಯಂಕರವಾದ ಕರ್ಕಶ ಮಾತುಗಳೇ ಮಂತ್ರಗಳು ಮತ್ತು ಚೋಳರನ್ನು ಪ್ರತಿಷೆ«ಗೊಳಿಸಿದುದೇ ಯಜ್ಞದ ಫಲವು.)

ಸಂಪೂರ್ಣವಾಗಿ ಒಂದು ಯಜ್ಞದಲ್ಲಿ ನಡೆಯುವಂತಹ ಘಟನೆಗಳನ್ನು ರಾಜನಿಗೆ ಹೋಲಿಸಲಾಗಿದೆ. ಚಿಕ್ಕದೇವರಾಜನನ್ನು ವರ್ಣಿಸುವಂತಹ ಒಂದು ಶ್ಲೋಕವು ಈ ರೀತಿಯಾಗಿದೆ.[೭]

ಸರ್ವಕ್ಷೋಣಿ ಭೃತಾಂ ಶಿರಸ್ಸುಕಲಯನ್ಪಾದಾರ್ಪಣಂ ಪ್ರತ್ಯಹಂ ।
ಪುಷ್ಣನ್ ಭೂರಿಕಲಾರ್ನಿಜೈರ್ವಸುಕಲೈರಾಶಾಃ ಪರಂಪೂರಯನ್ ।
ಸನ್ಮಾರ್ಗ ಪ್ರಥಯನ್ ಸದಾ ಕುವಲಯಾಮೋದಂ ಸಮಾಪಾದಯನ್।
ಪ್ರಾಯೇಣಾನುಕರೋತಿ ತಸ್ಯಚಿಕದೇದೇಂದ್ರಃ ಸುಧಾದೀಧಿತೇಃ ॥

(ಎಲ್ಲಾ ರಾಜರ ಶಿರೋಭಾಗದಲ್ಲಿ ಪಾದಾರ್ಪಣೆಯನ್ನು ಮಾಡುತ್ತಾ (ಎಲ್ಲಾ ಕ್ಷೋಣಿ = ಭೂಮಿ, ಭೃತ್ = ಧರಿಸಿರುವಂತಹ ಪರ್ವತಗಳ ಶಿಖರದಲ್ಲಿ ಪಾದಾರ್ಪಣೆ = ಕಿರಣಗಳನ್ನು ಪಸರಿಸುತ್ತಾ), ಪ್ರತಿನಿತ್ಯವೂ ತನ್ನ ಕಲಾಕೌಶಲದಿಂದ ಜನರ ಆಸೆ ಆಕಾಂಕ್ಷೆಗಳನ್ನು ಪರಿಪೂರ್ಣಗೊಳಿಸುತ್ತಾ (ತನ್ನ ೧೫ ಕಲೆಗಳಿಂದ ಮತ್ತು ಕಿರಣಗಳಿಂದ ಆಶಾ = ದಿಕ್ಕುಗಳನ್ನು ತುಂಬುತ್ತಾ), ಸನ್ಮಾರ್ಗದಲ್ಲಿ ನಡೆಯುತ್ತಾ ಕು=ಭೂಮಿ, ವಲಯ=ವಾಸಿಸುವವರಿಗೆ ಆನಂದವನ್ನು ಕೊಡುತ್ತಾ (ಆಕಾಶವೆಂಬ ಸನ್ಮಾರ್ಗದಲ್ಲಿ ಸಂಚರಿಸುತ್ತಾ ಭೂಮಿಯಲ್ಲಿ ನೈದಿಲೆಗಳನ್ನರಳಿಸುತ್ತಾ) ಪ್ರಾಯಶಃ ಚಿಕ್ಕ ದೇವರಾಜನು ಚಂದ್ರನನ್ನೇ ಅನುಕರಿಸುತ್ತಿರುವನು.)

ಈ ಶ್ಲೋಕವನ್ನು ಕನ್ನಡದಲ್ಲಿ ಅರ್ಥೈಸುವುದಕ್ಕಿಂತ ಸಂಸ್ಕೃತದಲ್ಲಿಯೇ ಓದುವಾಗ ಅದರ ಸ್ವಾರಸ್ಯವು ತಿಳಿಯುವುದು. ಇಲ್ಲಿ ಕ್ಷೋಣಿಭೃತ್ ಅಂದರೆ ರಾಜರು ಮತ್ತು ಪರ್ವತಗಳು ಎಂಬುವುದಾಗಿ,

ಆಶಾಃ ಎಂದರೆ ಆಸೆ ಆಕಾಂಕ್ಷೆಗಳು ಮತ್ತು ದಿಕ್ಕುಗಳು ಎಂಬುವುದಾಗಿ, ಕುವಲಯ ಎಂದರೆ ಭೂಮಿಯಲ್ಲಿ ವಾಸಿಸುವ ಜನರು ಮತ್ತು ನೈದಿಲೆಗಳೆಂಬುದಾಗಿ ಅರ್ಥ ಸ್ಪಷ್ಟವಾಗುತ್ತದೆ.

ಕಂಠೀರವ ನರಸರಾಜನ ಆಳ್ವಿಕೆ ನಡೆಸುತ್ತಿರಲು ಉಂಟಾದ ಪರಿಣಾಮಗಳನ್ನು ಒಂದು ಶ್ಲೋಕವು ಈ ರೀತಿಯಾಗಿ ವರ್ಣಿಸಿದೆ.[೮]

ಮಿತ್ರ ದ್ವೇಷಿತ್ವಂ ಮಿಂದಾವಧಿಕಚಪಲತಾ ಕಾಮಿನೀನಾಂ ಕಟಾಕ್ಷೇ
ಕಾಶ್ಯಂ ಮಧ್ಯೇಚ ಮಾಂದ್ಯಂ ವಿಲಸತಿ ಚ ಗತೌ ವಕ್ರತಾ ಕುಂತಲೇಷು
ಜಾತಿ ತ್ಯಾಗಂ ವಸಂತೇ ಸರಸಿ ನಿಚಯೇ ಕೋಶ ಸಂಕೋಚ ಯೋಗೋ
ನೈವಂ ಕಂಠೀರವ ಶ್ರೀ ನರಸನರಪತೌ ರಕ್ಷತೇ ತತ್ವಥಿವ್ಯಾಂ ॥

(ಚಂದ್ರನಲ್ಲಿ ಮಿತ್ರ ದ್ವೇಷಿತ್ವವೂ, ಕಾಮಿನಿಯರ ಕಟಾಕ್ಷದಲ್ಲಿ ಅಧಿಕ ಚಪಲತೆಯೂ, ಮಧ್ಯ ಭಾಗದಲ್ಲಿ ಕೃಶತ್ವವೂ, ಗತಿಯಲ್ಲಿ ಮಂದತ್ವವೂ, ಕೂದಲುಗಳಲ್ಲಿ ವಕ್ರತೆಯೂ, ವಸಂತ ಕಾಲದಲ್ಲಿ ಜಾತಿ ತ್ಯಾಗವೂ, ತಾವರೆಗಳಲ್ಲಿ ಅರಳುವಿಕೆ ಮತ್ತು ಮುದುಡುವಿಕೆಯೂ ಉಂಟಾಯಿತು, ಆದರೆ ಕಂಠೀರವ ನರಸರಾಜನು ಆಳುತ್ತಿರಲು ಅದಾವುವೂ ಸಂಭವಿಸಲಿಲ್ಲ.)

ಈ ಶ್ಲೋಕದಲ್ಲಿ ರಾಜನ ಪರಾಕ್ರಮವನ್ನು ಬೇರೆಯ ರೀತಿಯಲ್ಲಿ ಚಿತ್ರಿಸಿದ್ದಾನೆ. ರಾಜನು ಆಳ್ವಿಕೆ ನಡೆಸುತ್ತಿರಲು ಚಂಚಲತೆಯೂ, ಕೃಶತೆಯೂ, ಮಂದತ್ವವೂ ಮೊದಲಾದ ಯಾವುದೇ ಲಕ್ಷಣಗಳೂ ಕಂಡು ಬರಲಿಲ್ಲ. ಒಂದು ವೇಳೆ ಅಂತಹ ದೋಷಗಳು ಕಂಡು ಬಂದರೂ ಅವುಗಳು ಕೇವಲ ಮುಂದೆ ಹೇಳುವುದರಲ್ಲಷ್ಟೇ ಕಂಡು ಬಂದಿತು. ಚಂದ್ರನಲ್ಲಿ ಮಿತ್ರ ದ್ವೇಷಿತ್ವವು ಅಂದರೆ ಮಿತ್ರ ಅಂದರೆ ಸೂರ್ಯ ಅವನಿಗೆ ದ್ವೇಷಿತ್ವವಾಗಿರುವಿಕೆಯೆಂದರೆ ಅಧಿಕತಾಪಮಾನವಿರದೆ ತಂಪಾಗುವಿಕೆಯು ಉಂಟಾಯಿತು. ರಾಜನು ಯಾರನ್ನೂ ದ್ವೇಷಿಸುತ್ತಿರಲಿಲ್ಲ ಒಂದು ವೇಳೆ ದ್ವೇಷವೆಂಬ ಶಬ್ದವಿದ್ದರೆ ಅದು ಚಂದ್ರನಲ್ಲಿ ಮಾತ್ರ ಕಂಡುಬಂದಿತು. ಅಧಿಕ ಚಪಲತೆಯೂ ಕಾಮಿನಿಯರ ಕನ್ನೋಟದಲ್ಲೂ, ಕಾಠಿಣ್ಯವೆನ್ನುವುದು ಅವರ ನಡುಭಾಗದಲ್ಲೂ, ಮಂದತ್ವವೆನ್ನುವುದು ಅವರ ಗತಿಯಲ್ಲೂ, ವಕ್ರತೆಯೆನ್ನುವುದು ಅವರ ಕೂದಲುಗಳಲ್ಲಿ ಉಂಟಾಯಿತು. ಜಾತಿಯ ತ್ಯಾಗವೆನ್ನುವುದು ಎಲ್ಲೂ ಉಂಟಾಗಲಿಲ್ಲ, ಒಂದು ವೇಳೆ ಅದು ಉಂಟಾದರೂ ವಸಂತ ಕಾಲದಲ್ಲಿ ಜಾತಿ ಎಂಬಂತಹ ಪುಷ್ಪದ ಉದುರುವಿಕೆಯ ಮೂಲಕವಾಯಿತು. ಕೋಶ(ಸಂಪತ್ತು) ದ ವೃದ್ಧಿ ಮತ್ತು ಹ್ರಾಸವು ಉಂಟಾಗಲೇ ಇಲ್ಲ, ಒಂದೇ ರೀತಿಯಾಗಿತ್ತು. ಒಂದು ವೇಳೆ ಅದು ಉಂಟಾದರೂ ಅದು ತಾವರೆ ಪುಷ್ಪಗಳ ಕೋಶವೇನಿದೆಯೋ ಅದರಲ್ಲುಂಟಾಯಿತು.

ಸಂಸ್ಕೃತ ಶಾಸನಗಳಲ್ಲಿ ಭಯಾನಕ ದೃಶ್ಯಗಳನ್ನೂ ಕೂಡ ಬಹಳ ಸೊಗಸಾಗಿ ವರ್ಣಿಸುತ್ತಾರೆ. ಸಳನು ತನ್ನ ಎದುರಿಗೆ ಬಂದಂತಹ ಹುಲಿಯನ್ನು ಧೈರ್ಯದಿಂದ ಎದುರಿಸಿದನು. ಆಹುಲಿಯು

ಹೀಗೆ ಕಂಡು ಬರುತ್ತಿತ್ತು.

ವ್ಯಾಘ್ರಃ ಪಶ್ಚಾತ್ಕುತಶ್ಚಿತ್ಖರ ನಖರ ಶಖಾಭಿನ್ನ ಭೂಭೃನ್ನಿತಂಬ– ।
ಸ್ತ್ರೈಲೋಕ್ಯ ಗ್ರಾಸಕಾಂಕ್ಷಾ ವಿವೃತ ಮುಖದರೀ ನಿಃಸರದ್ದೀರ್ಘಜಿಹ್ವಃ ।
ಯನ್ನೇತ್ರ ಸ್ಫುಲಿಂಗೋ ಗಗನ ತಳ ಮಿಳತ್ಪುಚ್ಛ ಪಕ್ಷಾಗ್ರ ಕೋಟಿಃ ।
ಕ್ರೋಧೋದ್ಯತ್ಕಂಠ ಕಾಂಡಾರವಭರಿತ ದಿಶಾಚಕ್ರ ಸೀಮಾ ಸಮಾಗಾತ್ ॥

(ಬಹಳ ತೀಕ್ಷ್ಣವಾದ ಉಗುರುಗಳುಳ್ಳ, ಪರ್ವತದಂತಹ ನಿತಂಬವುಳ್ಳ, ಮೂರು ಲೋಕಗಳನ್ನೂ ತಿಂದು ಬಿಡಬೇಕೆಂಬ ಆಸೆ ಉಳ್ಳ, ವಿಕಾರವಾದ ಮುಖವುಳ್ಳ, ದಿಗಂತವನ್ನು ಮುಟ್ಟುತ್ತಿರುವಂತಹ ದೀರ್ಘವಾದ ಬಾಲವುಳ್ಳ, ಕಣ್ಣುಗಳಿಂದ ಬೆಂಕಿಯ ಕಿಡಿಗಳನ್ನು ಉಗುಳುತ್ತಿರುವ, ದಿಗಂತವನ್ನು ತುಂಬುವಷ್ಟು ಸಿಟ್ಟಿನಿಂದ ಕೂಡಿದ, ಎತ್ತಿದ ಕುತ್ತಿಗೆ ಉಳ್ಳ, ಭಯಂಕರವಾದ ಹುಲಿಯು ಎಲ್ಲಿಂದಲೋ ಬಂದೆರಗಿತು.)

ಸಂಸ್ಕೃತ ಶಾಸನಗಳಲ್ಲಿ ಹೆಚ್ಚಾಗಿ ರಾಜನು ಪುತ್ರರತ್ನನನ್ನು ಪಡೆದಾಗ ರಾಜನನ್ನು ಅಥವಾ ರಾಣಿಯರನ್ನು ದೈವೀ ಪುರುಷರಿಗೆ ಅಥವಾ ದೇವತೆಯರಿಗೆ ಹೋಲಿಸಿ ಆ ದೇವತೆಗಳು ಯಾವ ರೀತಿಯಾದ ಪುತ್ರ ರತ್ನರನ್ನು ಪಡೆದಿದ್ದರೋ ಅದೇ ರೀತಿಯಾಗಿ ಅವರ ಪುತ್ರ ರತ್ನನನ್ನು ಹೋಲಿಸುತ್ತಿದ್ದರು. ಲಕ್ಷ್ಮಭೂಪನ ಜನನವು ಈ ರೀತಿಯಾಗಿ ಆಯಿತು.[೧೦]

ರಾಮೋ ಯಥಾ ಕೋಸಲ ರಾಜ ಪುತ್ರ್ಯಾಂ ।
ವಿಷ್ಣುರ್ಯಥಾ ಕಶ್ಯಪ ಧರ್ಮ ಪತ್ನ್ಯಾಂ ।
ಕೃಷ್ಣೋಯಥಾ ದೇವಕ ನಂದನಾಯಾಂ ।
ಪದ್ಮಾಂಬಿಕಾಯಾಂ ವರಲಕ್ಷ್ಮಭೂಪಃ ॥

(ಕೋಸಲ ರಾಜ ಪುತ್ರಿ (ಕೌಶಲ್ಯ)ಯಲ್ಲಿ ರಾಮನು, ಕಶ್ಯಪನ ಧರ್ಮಪತ್ನಿಯಲ್ಲಿ ವಿಷ್ಣುವು, ದೇವಕನ ಪುತ್ರಿ (ದೇವಕಿ)ಯಲ್ಲಿ ಕೃಷ್ಣನು ಜನಿಸಿದಂತೆ, ಪದ್ಮಾಂಬಿಕೆಯಲ್ಲಿ ಲಕ್ಷ್ಮಭೂಪನು ಜನಿಸಿದನು.) ಕಂಠೀರವ ನರಸರಾಜನನ್ನು ವರ್ಣಿಸುವ ಶೈಲಿಯು ಈ ರೀತಿಯಾಗಿದೆ.[೧೧]

ಸೌಂದರ್ಯಂ ಮದನಸ್ಯ ಧರ್ಮಾಜನುಷಃ ಸತ್ಯಂ ಸುಭದ್ರಾಪತೇಃ ।
ಶೌರ್ಯಂ ಭಕ್ತಿಮಚಂಚಲಾಂ ಹರಿಪದಾಂಭೋಜೇಂಬರೀಷಸ್ಯ ಚ ।
ದಾನಂ ಭಾನುಸುತಸ್ಯ ನಿರ್ಜರಗುರೋ ರ್ವಾಕ್ಚಾತುರೀ ಸಂಗತಿಂ ।
ಪುಂಸ್ಯೇಕತ್ರ ಲಭೇತ ಚೇನ್ನರಸಭೂಪಾಲೇನ ತಸ್ಯೋಪಮಾ ॥

(ಸೌಂದರ್ಯದಲ್ಲಿ ಮದನನಂತಿರುವ, ಸತ್ಯದಲ್ಲಿ ಧರ್ಮರಾಜನಂತಿರುವ, ಶೌರ್ಯದಲ್ಲಿ ಸುಭದ್ರಾಪತಿಯಂತಿರುವ, ಹರಿಯ ಪಾದಾರವಿಂದಗಳಲ್ಲಿ ಅಚಲ ಭಕ್ತಿಯುಳ್ಳ ಅಂಬರೀಷನಂತಿರುವ, ದಾನದಲ್ಲಿ, ಕರ್ಣನಂತಿರುವ ಮತ್ತು ವಾಕ್ಚಾತುರ್ಯದಲ್ಲಿ ಬೃಹಸ್ಪತಿಯಂತಿರುವ ನರಸಭೂಪಾಲನಲ್ಲಿ ಎಲ್ಲಾ ಗುಣಗಳು ಒಂದೇ ಕಡೆ ಇರುವಾಗ ಅವನನ್ನು ಅವರೊಂದಿಗೆ ಹೋಲಿಸುವುದು ಸರಿಯೆ?)

ಹೊಯ್ಸಳ ರಾಜ ಸೋಮೇಶ್ವರನ ಬಾಲ್ಯ ಕಾಲದ ವರ್ಣನೆಯು ಹೊಯ್ಸಳರ ಶಾಸನದಲ್ಲಿ ಈ ರೀತಿಯಾಗಿದೆ.[೧೨]

ಕ್ರೀಡಾಜಾಯತ ಯಸ್ಯ ಬಾಲ್ಯ ಸಮಯೇ ಕ್ಷ್ಮಾಭೃಚ್ಛಿರಃ ಕಂದುಕೈ ।
ರ್ಲೀಲಾ ಭಗ್ನ ವಿರೋಧಿ ಸೌಧ ಶಿಖರ ಧ್ವಂಸೋದಿತೈಃ ಪಾಂಸುಭಿಃ ।
ನಿರ್ಭಿನ್ನಾರಿಶರೀರ ಶೋಣಿತ ಜಲ ಸ್ಫೀತೈರ್ಮಹೀಕರ್ದಮೈ– ।
ರ್ನಾನಾದುರ್ಗಮದುರ್ಗ ಸೈಕತದರೀ ಸೀಮಾ ಸಮುಲ್ಲಂಘನೈಃ ॥

ಈತನು ಬಾಲ್ಯ ಕಾಲದಲ್ಲಿ ಚೆಂಡಿನೊಂದಿಗೆ ಆಟವಾಡುತ್ತಿರುವಾಗ ತಮ್ಮ ಶರೀರದಿಂದ ಹರಿದ ಬೆವರು ಮತ್ತು ರಕ್ತಗಳಿಂದ ತೋಯ್ದ ಭೂಮಿಯುಳ್ಳ ಶತ್ರುಗಳ ಅರಮನೆಯ ಕಂಭಗಳಿಗೆ ಚೆಂಡುಗಳು ಬಡಿದು ಅವುಗಳು ಭಗ್ನವಾಗಿ ಎದ್ದಂತಹ ಧೂಳಿನಿಂದ ಈತನ ಶಿರಸ್ಸು ಮುಚ್ಚಿ ಹೋಗುತ್ತಿದ್ದವು ಮತ್ತು ಈತನ ಆಟದ ಚೆಂಡುಗಳು ಹಲವಾರು ರಾಜರ ಅರಮನೆಯನ್ನು ಪ್ರವೇಶಿಸುತ್ತಿದ್ದವು.

ವಿಜಯ ನಗರದರಸ ಕೃಷ್ಣದೇವರಾಯನು ಒಬ್ಬ ಅಪ್ರತಿಮ ರಾಜನಾಗಿದ್ದನು. ಈತನು ಸಾಹಿತ್ಯಾಭಿಮಾನಿಯಂತೆ ಶಾಸನಾಭಿಮಾನಿಯೂ ಆಗಿದ್ದನು. ಕರ್ನಾಟಕದಲ್ಲಿ ಒಬ್ಬ ರಾಜನ ಕುರಿತಾದ ಸಂಸ್ಕೃತ ಶಾಸನಗಳಲ್ಲಿ ಕೃಷ್ಣದೇವರಾಯನ ಕುರಿತಾದ ಶಾಸನಗಳು ಬಹಳ ದೊರೆಯುತ್ತದೆ. ವಿಜಯನಗರದರಸರು ತಾವು ನೀಡಿದಂತಹ ಅಗ್ರಹಾರಗಳಿಗೆ ತಮ್ಮ ವಂಶದವರ ಹೆಸರನ್ನು ನೀಡುತ್ತಿದ್ದರು. ಅಂತಹ ಒಂದು ಅಗ್ರಹಾರದ ಉಲ್ಲೇಖವು ತಿರುಮಕೂಡಲು ನರಸೀಪುರದಲ್ಲಿ ದೊರಕಿದ ಶಾಸನದಲ್ಲಿ[೧೩] ಉಲ್ಲೇಖ ಬರುತ್ತದೆ. ಈ ಶಾಸನದಲ್ಲಿ ರಾಮಚಂದ್ರಾಪುರವೆಂಬ ಅಗ್ರಹಾರವನ್ನು ಬ್ರಾಹ್ಮಣರಿಗೆ ವೃತ್ತಿಗಳನ್ನಾಗಿ ವಿಭಾಗಿಸಿ ನೀಡಿರುವನು. ಆದರೆ ಈ ಅಗ್ರಹಾರಗಳನ್ನು ದಾನ ನೀಡಿದಾಗ ಆ ಅಗ್ರಹಾರಗಳಿಗೆ ಬೇಕಾದಂತಹ ಇತರ ಸಲಕರಣೆಗಳನ್ನು ಒಟ್ಟಿಗೆ ನೀಡಿರುವುದು ವಿಶೇಷವಾಗಿದೆ. ಆ ಶಾಸನದಲ್ಲಿ ಈ ಅಗ್ರಹಾರದ ಸ್ವರೂಪವನ್ನು ಈ ರೀತಿಯಾಗಿ ಉಲ್ಲೇಖಿಸಲಾಗಿದೆ.

ಗೃಹಾನ್ವಿಧಾಯ ವಿಪುಲಾನ್ವ್ರತಿವೃತ್ತಿ ವಿಭಾಗತಃ ।
ಶೈಯೋಪಧಾನ ಪರ್ಯಂಕ ವಿಚಿತ್ತಸ್ತರಣಾಸನೈಃ ।
ದೇಮೋಪಕರಣೈರ್ಗೋಭಿ ಗೃಹೋಪಕರಣೈಸ್ತಥಾ ।
ಶಾಲಿ ತಂಡುಲ ಮುಖೈಶ್ಚ ಧನಧಾನ್ಯೈರ್ಗುಡೈ ರ್ಘೃತೈಃ ॥

ತೈಲಾದಿ ಸರ್ವ ಸಂಭಾರೈ ಸ್ಸಂಭೃತಾಂಸ್ತಾನ್ಸ ಹೋತ್ತಮಾನ್ ।
ಪ್ರವೇಶ್ಯ ದ್ವಿಜ ವರ್ಯಾಂಶ್ಚ ಪತ್ನೀ ಪುತ್ರಯುತಾನ್ಮುದಾ ।
ವಸ್ತ್ರಯುಗ್ಮಂ ಸೋಷ್ಣೀ ಷಂ ಕೌಶೇಯಂ ರತ್ನ ಕುಂಡಲೇ ।
ಅಂಗುಳೀಯಕ ಮುಖ್ಯಾನಿ ಕಲ್ಪಯಿತ್ವಾ ಪೃಥಕ್ ಪೃಥಕ್ ॥

ರಾಜನು, ಪ್ರತಿಯೊಂದು ವೃತ್ತಿಗನುಗುಣವಾಗಿ ಅಗ್ರಹಾರದಲ್ಲಿ ಮನೆಗಳನ್ನು ನಿರ್ಮಿಸಿ ಅದರಲ್ಲಿ ಮಲಗಲು ಮಂಚ, ಹಾಸಿಗೆ, ಹೊದಿಕೆ, ವಿಚಿತ್ರವಾದಂತಹ ಬಟ್ಟೆಗಳು, ದೇವ ಪೂಜೆಯ ಉಪಕರಣಗಳು, ಆಕಳು, ಗೃಹೋಪಕರಣಗಳಿಂದ, ಅಕ್ಕಿ, ಭತ್ತ ಮೊದಲಾದ ವಿವಿಧ ಧಾನ್ಯಗಳೂ, ಬೆಲ್ಲ, ತುಪ್ಪ, ಎಣ್ಣೆ ಮೊದಲಾದ ಎಲ್ಲಾ ವಿಧದ ಸಾಂಭಾರ ಪದಾರ್ಥಗಳಿಂದಲೂ ಕೂಡಿದ ಉತ್ತಮ ಗೃಹಗಳನ್ನು ವಿದ್ವಾಂಸರಿಂದ ಮತ್ತು ಅವರ ಪರಿವಾರದೊಂದಿಗೆ ಕೂಡಿದವನಾಗಿ ಪ್ರವೇಶಿಸಿ ಆ ವಿದ್ವಾಂಸರಿಗೆ ಎರಡು ಬಟ್ಟೆಗಳನ್ನು, ಮುಂಡಾಸು, ಶಾಲು, ರತ್ನಕುಂಡಲ, ಉಂಗುರ ಮೊದಲಾದ ಬೆಲೆಬಾಳುವ ವಸ್ತುಗಳನ್ನು ಪ್ರತಿಯೊಬ್ಬರಿಗೂ ಕಲ್ಪಿಸಿದನು.

ಸಾಧಾರಣವಾಗಿ ಅಗ್ರಹಾರಗಳನ್ನು ಸೂಚಿಸುವಾಗ ಅಗ್ರಹಾರದ ಸ್ಥಳ ಮತ್ತು ಅದರ ಸೀಮೆಗಳನ್ನಷ್ಟೇ ಹೇಳಿದರೆ ಈ ಶಾಸನದಲ್ಲಿ ಅಗ್ರಹಾರದ ವಿಶೇಷ ಸ್ವರೂಪವನ್ನು ಹೇಳಿರುವುದು ವಿಶೇಷವಾಗಿದೆ. ಅದೇ ರೀತಿಯಾಗಿ ಶ್ರೀ ಕೃಷ್ಣದೇವರಾಯನು ಆಳ್ವಿಕೆ ನಡೆಸುತ್ತಿರಲು ಉಂಟಾದ ಪರಿಣಾಮವನ್ನು ಒಂದು ಶಾಸನವು ಈ ರೀತಿಯಾಗಿ ವರ್ಣಿಸಿದೆ.[೧೪]

ಕೀರ್ತ್ಯಾ ಯಸ್ಯ ಸಮಂತತಃ ಪ್ರಸೃತಯಾ ವಿಶ್ವಂ ರುಚೈಕ್ಯಂ ವೃಜೇದಿತ್ಯಾಶಂಕ್ಯಾ ।
ಪುರಾ ಪುರಾರಿರಭವತ್ ಫಾಲೇಕ್ಷಣಃ ಪ್ರಾಯಶಃ ಪದ್ಮಾಕ್ಷೋಪಿ ಚತುರ್ಭುಜೋಜನಿ ।
ಚತುರ್ವಕ್ತ್ರೋ ಭವತ್ಪದ್ಮ ಭೂಃ ಕಾಳೀ ಖಡ್ಗ ಮದಾದ್ರಮಾಚ ಕಮಲಂ
ವೀಣಾಂಚ ವಾಣೀ ಕರೇ ॥

ಮೂರು ಲೋಕಗಳಲ್ಲಿಯೂ ಹರಡಿದಂತಹ ಶ್ರೀ ಕೃಷ್ಣದೇವರಾಯನ ಕೀರ್ತಿಯಿಂದಾಗಿ ಇಡಿಯ ವಿಶ್ವವು ಬಿಳಿಯ ಎಂಬ ಬಣ್ಣವನ್ನು ಪಡೆಯಿತು ಇದರಿಂದಲೋ ಏನೋ ಹಿಂದೆ

ಪುರಾರಿ (ಶಿವ)ಯು ಹಣೆಯಲ್ಲಿ ಕಣ್ಣುಳ್ಳವನೂ, ಪದ್ಮಾಕ್ಷ (ವಿಷ್ಣು)ನು ನಾಲ್ಕು ಭುಜಗಳುಳ್ಳವನೂ, ಪದ್ಮಭೂ (ಬ್ರಹ್ಮ)ವು ನಾಲ್ಕು ಮುಖಗಳುಳ್ಳವನೂ ಆದನು).

ಸಂಭಾಷಣಾತ್ಮಕವಾದ ಒಂದು ಶಾಪಾಶಯದ ಭಾಗವು ಒಂದು ಶಾಸನದಲ್ಲಿ ಈ ರೀತಿಯಾಗಿ ಕಂಡು ಬರುತ್ತದೆ.[೧೫]

ಇಂದ್ರಃ ಪೃಚ್ಛತಿ ಚಂಡಾಲೀಂ ಕಿಮಿದಂ ಪಚ್ಯತೇ ಶುಭೇ
ಶ್ವಮಾಂಸಂ ಸುರಯಾಸಿಕ್ತಂ ಕಪಾಲೇನ ಚಿತಾಗ್ನಿನಾ
ಕಿಮರ್ಥಂ ವದಕಲ್ಯಾಣಿ ಚರ್ಮಣಾ ಪಿಹಿತಂ ತ್ವಯಾ
ಬ್ರಹ್ಮಸ್ವಂ ಬ್ರಾಹ್ಮಣ ಕ್ಷೇತ್ರಂ ಹಾರಯಂತಿ ಹರಂತಿಯೇ
ತೇಷಾಂ ಪಾದರಜೋಭೀತ್ಯಾ ಚರ್ಮಣಾ ಪಿಹಿತಂ ಮಯಾ

(ಇಂದ್ರನು ಚಾಂಡಾಲಿಯ ಬಳಿಯಲ್ಲಿ ಕೇಳುವನು– "ಹೇ ಶುಭಳೇ– ನೀನು ಏನು ಬೇಯಿಸುತ್ತಿರುವಿ."

ಚಾಂಡಾಲಿ ಹೇಳುವಳು – "ನಾಯಿಯ ಮಾಂಸವನ್ನು ಸುರೆಯಲ್ಲಿ ಮುಳುಗಿಸಿ ತಲೆಬುರುಡೆಯಲ್ಲಿಟ್ಟು ಚಿತಾಗ್ನಿಯಲ್ಲಿ ಬೇಯಿಸುತ್ತಿರುವೆನು."

ಇಂದ್ರ – "ಹೇ ಕಲ್ಯಾಣಿಯೇ ಅದನ್ನು ನೀನು ಚರ್ಮದಿಂದ ಏಕೆ ಮುಚ್ಚಿರುವೇ."

ಚಾಂಡಾಲಿ – "ಬ್ರಹ್ಮಸ್ವವನ್ನು, ಬ್ರಾಹ್ಮಣರ ಕ್ಷೇತ್ರವನ್ನು ಯಾರು ಅಪಹರಿಸುತ್ತಾರೋ, ಅಥವಾ ಅಪಹರಿಸಲು ಪ್ರೇರೇಪಿಸುತ್ತಾರೋ ಅಂತಹವರ ಪಾದದ ಧೂಳು ಬೀಳಬಾರದೆಂದು ಚರ್ಮದಿಂದ ಮುಚ್ಚಿರುವೆನು".)

ಇಂದ್ರ ಮತ್ತು ಚಾಂಡಾಲಿಯ ನಡುವೆ ನಡೆದಂತಹ ಈ ಸಂಭಾಷಣಾತ್ಮಕವಾದ ಶ್ಲೋಕವು ಮೈಸೂರು ಅರಸರ ಶಾಸನಗಳ ಶಾಪಾಶಯದ ಭಾಗದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಬ್ರಹ್ಮಸ್ವವನ್ನು, ಬ್ರಾಹ್ಮಣರ ಭೂಮಿಯನ್ನು ಅಪಹರಿಸಿದವರಿಗೆ ಎಷ್ಟು ಕಠಿಣವಾದ ಶಿಕ್ಷೆಯೆಂಬುವುದನ್ನು ವ್ಯಂಗ್ಯವಾಗಿ ಹೇಳಲಾಗಿದೆ. ಚಾಂಡಾಲಿಯು ತನ್ನ ಅಡುಗೆಗೆ ಬ್ರಾಹ್ಮಣರ ಕ್ಷೇತ್ರವನ್ನು ಅಪಹರಿಸಿದಂತಹ ಪಾಪಿಗಳ ಕಾಲಿನ ಧೂಳು ಬೀಳಬಾರದೆಂದು ಚರ್ಮದಿಂದ ಮುಚ್ಚಿರುವೆನೆಂದು ಹೇಳಿರುವುದನ್ನು ಗಮನಿಸಿದಾಗ ಅಂತಹ ಪಾಪಿಗಳಿಗೆ ಮರಣದ ನಂತರ ಯಾವ ರೀತಿಯ ಲೋಕ ಪ್ರಾಪ್ತವಾಗುತ್ತದೆಂದು ವ್ಯಂಗ್ಯವಾಗಿ ಹೇಳಲಾಗಿದೆ. ಚಾಂಡಾಲಿಯರಿರುವಂತಹ ಆ ಪಾಪ ಲೋಕದ ಚಿತ್ರಣವೂ ಕೂಡ ಬಹಳ ಭಯಾನಕವಾಗಿ ನಮಗೆ ಗೋಚರವಾಗುತ್ತದೆ. ಈ ಶ್ಲೋಕದಲ್ಲಿ ಕಾವ್ಯ ವಿನೋದವನ್ನು ನೋಡಬಹುದಾಗಿದೆ.

ಕನ್ನಡ ಶಾಸನಗಳಲ್ಲಿ ಸಂಸ್ಕೃತದ ಛಾಯೆ ಇದ್ದೇ ಇದೆ. ಆದರೆ ಕನ್ನಡ ಶಾಸನಗಳ ವಿಷಯಾನುಪೂರ್ವಿಯಲ್ಲಿ ವ್ಯತ್ಯಾಸವಿದೆ. ಹೆಚ್ಚಾಗಿ ಸಂಸ್ಕೃತ ಶಾಸನಗಳಲ್ಲಿ ಪ್ರಾರ್ಥನಾಶ್ಲೋಕ, ವಂಶಾವಳಿ, ಕಾಲದ ಉಲ್ಲೇಖ, ದಾನದ ವಿಚಾರ, ಸ್ಥಳನಾಮ ಮತ್ತು ಶಾಪಾಶಯವಿದ್ದರೆ, ಕನ್ನಡ ಶಾಸನಗಳಲ್ಲಿ ಕೆಲವೊಂದು ವ್ಯತ್ಯಾಸವಿರುತ್ತದೆ. ಹೆಚ್ಚಾಗಿ ಕನ್ನಡ ಶಾಸನಗಳಲ್ಲಿ ವಂಶಾವಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡದೇ ನೇರವಾಗಿ ವಿಷಯಕ್ಕೆ ಪ್ರವೇಶ ಪಡೆದು ದಾನದ ಉದ್ದೇಶವನ್ನು ನೀಡಲಾಗಿದೆ. ಕನ್ನಡ ಶಾಸನಗಳಲ್ಲಿ ಶಕವರ್ಷವನ್ನು ಅಂಕೆಯಲ್ಲೇ ಸೂಚಿಸುತ್ತಾರೆ. ಸಂಸ್ಕೃತ ಶಾಸನಗಳಲ್ಲಿರುವ ಆದಿ ಮತ್ತು ಅಂತ್ಯದ ಭಾಗಗಳು ಹಾಗೆಯೇ ಕನ್ನಡ ಶಾಸನಗಳಲ್ಲಿ ಪುನರಾವರ್ತನೆಯಾಗಿದೆ. ಕನ್ನಡ ಶಾಸನಗಳು ಕದಂಬರ ಮತ್ತು ಗಂಗರ ಕಾಲದಲ್ಲಿದ್ದಂತಹ ಸಂಸ್ಕೃತ ಶಾಸನಗಳ ಗದ್ಯಶೈಲಿಯನ್ನೇ ಅನುಕರಿಸುವಂತಿದೆ. ಗಂಗರ ಕನ್ನಡ ಶಾಸನಗಳಲ್ಲಿ ಕಂಡುಬರುವ ಷಕಟರೇಫವು ಸಂಸ್ಕೃತ ಶಾಸನಗಳಲ್ಲೂ ಕಂಡುಬರುತ್ತದೆ. ಕೆಲವೊಮ್ಮೆ ಕನ್ನಡ ಶಾಸನಗಳಲ್ಲಿ ಸಂಸ್ಕೃತವು ಬೆರೆತು ಹೋಗಿರುವಂತೆ ಕಂಡುಬರುತ್ತದೆ. ಉದಾ : "ಅಪ್ಪಿಗಾಲ್ನಾಮ ಗ್ರಾಮ ಸರ್ವಬಾದು ಪರಿಹಾರ ವೊರ್ಕರ್ತುಗೊಟ್ಟಂ ತಸ್ಯ ಸೀಮಾಂತರೇ..."

ಸಾಮಾನ್ಯವಾಗಿ ಗಮನಿಸಿದಾಗ ಕನ್ನಡ ಶಾಸನಗಳಿಗಿಂತ ಸಂಸ್ಕೃತ ಶಾಸನಗಳು ವ್ಯವಸ್ಥಿತವಾಗಿರುವಂತೆ ಕಂಡುಬರುತ್ತದೆ. [೧]ಕನ್ನಡ ಶಾಸನಗಳಲ್ಲಿ ನಿವರ್ತನ, ಗದ್ಯಾಣ ಇತ್ಯಾದಿಗಳನ್ನು ಅಂಕೆಯ ಮೂಲಕ ತೋರಿಸಲಾಗಿದೆ. ಇನ್ನೊಂದು ಗಮನಾರ್ಹ ವಿಷಯವೆಂದರೆ ಸಂಸ್ಕೃತದ 'ಔ' ಕಾರವನ್ನು ಕನ್ನಡ ಶಾಸನಗಳಲ್ಲಿ ಬರೆಯುವಾಗ ಸ್ವರೂಪವನ್ನು ಬದಲಾಯಿಸಲಾಗಿದೆ. ಸಂಸ್ಕೃತದಲ್ಲಿ 'ಪೌರ್ಣ್ಣಮಿ' ಎಂಬ ಶಬ್ದವು ಕನ್ನಡ ಶಾಸನಗಳಲ್ಲಿ 'ಪ ಉರ್ಣ್ಣಮಿ'ಯಾಗಿದೆ. ಕೆಲವೊಮ್ಮೆ 'ಶಾಲಿವಾಹನ ಶಕವರ್ಷ'ದ ಬದಲಿಗೆ 'ಶಾಲಿಬೂಪನ ಶಕವರ್ಷ'ವೆಂಬ ಉಲ್ಲೇಖ ಬಂದಿದೆ. ಕಾಲ ಉಲ್ಲೇಖ ಮಾಡುವಾಗ ಸಂಸ್ಕೃತ ಶಾಸನಗಳಲ್ಲಿ ತಿಥಿಯನ್ನು ಪ್ರಥಮಾ, ದ್ವಿತೀಯಾ, ದ್ವಾದಶೀ ಈ ರೀತಿಯಾಗಿ ಶಬ್ದರೂಪದಲ್ಲೇ ಹೇಳಿದರೆ ಕನ್ನಡ ಶಾಸನಗಳಲ್ಲಿ ಅಂಕಿಯಲ್ಲಿ ಅಂದರೆ ೧=ಪ್ರತಿಪತ್ , ೨ =ಬಿದಿಗೆ ಈ ರೀತಿಯಾಗಿ ಹೇಳಲಾಗಿದ್ದು, ಕೃಷ್ಣ ಪಕ್ಷವನ್ನು ಬಹುಳವೆಂತಲೂ, ಶುಕ್ಲಪಕ್ಷವನ್ನು ಶುದ್ಧವೆಂತಲೂ ಕರೆಯಲಾಗಿದೆ. ರಾಜರ ಬಿರುದನ್ನು ಹೇಳುವಾಗ ಕನ್ನಡ ಶಾಸನಗಳಲ್ಲಿ ಸಂಸ್ಕೃತ ಶಬ್ದವನ್ನೇ ಬಳಸಿ ಕೊನೆಗೆ ಕನ್ನಡದ ಪ್ರತ್ಯಯವನ್ನು ಸೇರಿಸಲಾಗಿದೆ. ಸಂಸ್ಕೃತ ವರ್ಣಮಾಲೆಯಲ್ಲಿರುವ ಋ, ಒ, ಓ, ಶ, ಷ, ಕ್ಷ, ಳ, ವಿಸರ್ಗ ಉಪಧ್ಮಾನೀಯ ಮತ್ತು ಜಿಹ್ವಾ ಮೂಲೀಯ ವರ್ಣಗಳ ಬಳಕೆಯು ಕನ್ನಡ ಭಾಷೆಯಲ್ಲಿ ಕಡಿಮೆ ಇರುವಂತೆ ಕನ್ನಡ ಶಾಸನಗಳಲ್ಲೂ ಇದರ ಬಳಕೆ ಕಡಿಮೆಯಿದೆ. ಆದರೆ ಸಂಸ್ಕೃತದ ಎ, ಒ ವರ್ಣಗಳು ಅಧಿಕವಾಗಿ ಬಳಕೆಯಾಗಿದೆ. ಹಿಂದಿನ ಅಧ್ಯಾಯದಲ್ಲಿ ತಿಳಿಸಿದಂತೆ ಸಂಸ್ಕೃತ ಮತ್ತು ಕನ್ನಡ ಭಾಷೆಗೆ ಬಹಳ ನೆಂಟಸ್ಥಿಕೆ ಇದ್ದಂತೆ ಕಾಣುತ್ತದೆ. 'ಮಣಿ ಪ್ರವಾಳ ಕಾವ್ಯಂ' ಎಂಬಂತಹ ಕಾವ್ಯಶೈಲಿಯಂತೆ ಸಂಸ್ಕೃತ ಮತ್ತು ಕನ್ನಡ ಶ್ಲೋಕಗಳು

ಶಾಸನಗಳಲ್ಲಿ ಕಂಡುಬಂದಿವೆ. ಜಿನವಲ್ಲಭನ ಕುರಿಕ್ಯಾಲ ಶಾಸನವು ಇದಕ್ಕೆ ಉದಾಹರಣೆಯಾಗಿದೆ. ಈ ಶಾಸನವು ಕನ್ನಡ ಶಾಸನವಾಗಿದ್ದರೂ ಸಂಭಾಷಣಾತ್ಮಕವಾದ ಒಂದು ಸಂಸ್ಕೃತ ಶ್ಲೋಕವು ಇಲ್ಲಿ ಕಂಡುಬರುತ್ತದೆ. ತೀರ್ಥಹಳ್ಳಿಯ ವಿರುಪಾಪುರದ ಒಂದು ಶಾಸನದಲ್ಲಿ ಕನ್ನಡದ ಸ್ಥಳನಾಮವನ್ನು ಸಂಸ್ಕೃತಕ್ಕೆ ಪರಿವರ್ತಿಸಿ ನೀಡಲಾಗಿದೆ. ಉದಾ : ಹುಣಸೆವಳ್ಳಿ - 'ತ್ರಿಂತ್ರಿಣೀ ಪಳ್ಳಿ'

ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಸ್ವೀಕರಣ ಮಾಡಿಕೊಂಡು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಕನ್ನಡದಲ್ಲಿ ಪ್ರಯುಕ್ತವಾಗಿದೆ. ಚಾಳುಕ್ಯರ ಕನ್ನಡ ಶಾಸನಗಳಲ್ಲಿ 'ಸಳುಕಿ' ಎಂದು 'ಚಳುಕಿ' ಶಬ್ದವನ್ನು ಸಂಬೋಧಿಸಲಾಗಿದೆ. ಅದೇ ಸಂಸ್ಕೃತ ಶಾಸನಗಳಲ್ಲಿ ಸಕಾರದ ಬದಲು ಚಕಾರವೇ ಹೆಚ್ಚು ಪ್ರಯುಕ್ತವಾಗಿದೆ. ಕೆಲವು ಶಬ್ದಗಳನ್ನು ಗಮನಿಸಿದಾಗ ಸಂಸ್ಕೃತ ಶಬ್ದಗಳು ಸಂಸ್ಕೃತದಿಂದ ಪ್ರಾಕೃತಕ್ಕೆ ಪರಿವರ್ತಿತವಾಗಿ ನಂತರ ಕನ್ನಡ ಶಾಸನಗಳಲ್ಲಿ ಪ್ರಯುಕ್ತವಾದಂತೆ ಕಂಡುಬರುತ್ತದೆ. ಉದಾ : ರಾಜ ಶಬ್ದವು ಪ್ರಾಕೃತದಲ್ಲಿ ರಾಯನೆಂಬ ರೂಪವನ್ನು ಪಡೆದು ಕನ್ನಡದಲ್ಲಿ ಅದುವೇ ಹೆಚ್ಚಾಗಿ ಬಳಕೆಯಾಗಿದೆ.

ಇನ್ನು ಛಂದಸ್ಸು ಮತ್ತು ಅಲಂಕಾರಗಳನ್ನು ಗಮನಿಸಿದಾಗ ಸಂಸ್ಕೃತ ಭಾಷೆಯ ಪ್ರಭಾವವಿರುವುದು ಸ್ಪಷ್ಟವಾಗಿ ಕಂಡುಬರುವುದು. ಕನ್ನಡ ಭಾಷೆಯಲ್ಲಿ ಅಲಂಕಾರದಿಂದ ಭೂಯಿಷ್ಠವಾದ ಶಾಸನಗಳು ಹೆಚ್ಚು ದೊರಕುವುದಿಲ್ಲ. ಸಂಧಿ ಮತ್ತು ಸಮಾಸಗಳ ನಿಯಮವಂತು ಸಂಸ್ಕೃತ ಭಾಷೆಯ ನಿಯಮಗಳನ್ನು ಬಿಟ್ಟಿಲ್ಲ.

ಈ ರೀತಿಯಾಗಿ ಗಮನಿಸಿದಾಗ ಸಂಸ್ಕೃತ ಶಾಸನಗಳ ವಿಷಯಾನು ಪೂರ್ವಿಯು ಕನ್ನಡ ಶಾಸನಗಳಲ್ಲಿ ಭಿನ್ನವಾಗಿದ್ದರೂ ವಿಷಯ ಮಾತ್ರ ಒಂದೇ ಆಗಿದೆ. ಸಂಸ್ಕೃತ ಶಾಸನಗಳು ಪ್ರಧಾನ ರಾಜನಂತಿದ್ದರೆ ಕನ್ನಡ ಶಾಸನಗಳು ಸಾಮಂತ ಅರಸನಂತೆ ಸಂಸ್ಕೃತವನ್ನೇ ಆಶ್ರಯಿಸಿಕೊಂಡಿದೆ.

ಅಡಿಟಿಪ್ಪಣಿಗಳು

೧. ಹಳೆಯ ಇ.ಸಿ.ಸಂ. ೯, ನೆಲಮಂಗಲ, ಸಂ. ೬೦

೨. ಅದೇ

೩. ಇ.ಸಿ.ಸಂ. ೧೧, ಶೃಂಗೇರಿ, ಸಂ. ೩೨

೪. ಇ.ಸಿ.ಸಂ. ೬, ಪಾಂಡವಪುರ, ತೊಣ್ಣೂರು ಸಂ. ೯೯

೫. ಇ.ಸಿ.ಸಂ. ೬, ಪಾಂಡವಪುರ, ಮೇಲುಕೋಟೆ ಸಂ. ೨೧೪

೬. ಇ.ಸಿ.ಸಂ. ೬, ಕೃಷ್ಣರಾಜಪೇಟೆ, ಗೋವಿನಂದನಹಳ್ಳಿ ಸಂ. ೩೯

೭. ಇ.ಸಿ.ಸಂ. ೬, ಶ್ರೀರಂಗಪಟ್ಟಣ, ಸಂ. ೨೪

೮. ಇ.ಸಿ.ಸಂ. ೬, ಪಾಂಡವಪುರ ಸಂ. ೨೧೪

೯. ಇ.ಸಿ.ಸಂ. ೬, ಕೃಷ್ಣರಾಜಪೇಟೆ, ಗೋವಿನಂದನಹಳ್ಳಿ ಸಂ. ೩೯

೧೦. ಇ.ಸಿ.ಸಂ. ೮, ಅರಕಲಗೋಡು, ಹೆಬ್ಬಾಲೆ ಸಂ. ೧೬

೧೧. ಅದೇ

೧೨. ಇ.ಸಿ.ಸಂ. ೮, ಹೊಳೆನರಸೀಪುರ, ಅನೆಕನ್ನಂಬಾಡಿ, ಸಂ. ೧೧೯

೧೩. ಇ.ಸಿ.ಸಂ. ೫, ತಿರುಮಕೂಡಲು ನರಸಿಪುರ ಸಂ. ೧೬

೧೪. ಇ.ಸಿ.ಸಂ. ೩. ಗುಂಡ್ಲುಪೇಟೆ ೧

೧೫. ಇ.ಸಿ.ಸಂ. ೬, ಪಾಂಡವಪುರ, ೭೫

೧೬. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ ಪುಟ ಸಂ. ೪

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಕರ್ನಾಟಕವು ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳ ನೆಲೆವೀಡಾಗಿದೆ. ಈ ಎಲ್ಲಾ ವಿಷಯಗಳನ್ನು ಶಾಸನಗಳಿಂದ ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಕೆಲವು ಐತಿಹಾಸಿಕ ದೃಷ್ಟಿಯಿಂದ ಮಹತ್ವವನ್ನು ಪಡೆದಿದ್ದು ಕರ್ನಾಟಕದ ಗತ ವೈಭವವನ್ನು ತೋರಿಸುವಲ್ಲಿ ಶಾಸನಗಳು ವಹಿಸಿದಷ್ಟು ಪಾತ್ರವನ್ನು ಬೇರೆ ಯಾವುದೇ ಪುರಾತತ್ವ ಆಕರಗಳು ವಹಿಸಿಲ್ಲ. ಅಂತಹ ವಿಷಯ ವೈವಿಧ್ಯವನ್ನು ನಾವು ಸಂಸ್ಕೃತ ಶಾಸನಗಳಲ್ಲೂ ಕಾಣಬಹುದಾಗಿದೆ.

ಕರ್ನಾಟಕದ ಸಂಸ್ಕೃತ ಶಾಸನಗಳು ಸಂಸ್ಕೃತ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದೆ. ಇಲ್ಲಿ ಸಂಧಿ ಸಮಾಸಗಳಿಂದ ಕೂಡಿದ ಅತ್ಯುತ್ತಮ ಗದ್ಯರಚನೆಯೂ, ಅಲಂಕಾರ, ಛಂದಸ್ಸುಗಳಿಂದ ಕೂಡಿದ ಉತ್ತಮ ಪದ್ಯರಚನೆಗಳು ಕಂಡುಬರುತ್ತದೆ. ಶಾಪಾಶಯದ ಭಾಗಗಳು ಉತ್ತಮ 'ಸುಭಾಷಿತ ಭಾಂಡಾಗಾರ'ವಾಗಿದೆ. ಪ್ರಾರ್ಥನಾ ಶ್ಲೋಕಗಳು ಭಕ್ತಭಾವವನ್ನು ಕುದುರಿಸುತ್ತವೆ. ಕ್ಲಿಷ್ಟಕರವಾದ ವಿಷಯವನ್ನು ಬಹಳ ಸುಂದರವಾಗಿ ಕಾವ್ಯಾತ್ಮಕವಾಗಿ ವರ್ಣಿಸಿದೆ.

ಕರ್ನಾಟಕದ ಸಂಸ್ಕೃತಿಯು ಪುರಾತನವಾದುದು. ಕರ್ನಾಟಕವು ಭಾರತದಲ್ಲಿ ಐತಿಹಾಸಿಕವಾಗಿ ಮಾತ್ರವಲ್ಲದೇ ಎಲ್ಲಾ ರಂಗಗಳಲ್ಲೂ ಮಂಚೂಣಿಯಲ್ಲಿದೆ. ಇಲ್ಲಿನ 'ಸಾಹಿತ್ಯ ಪ್ರಪಂಚವು ಉಜ್ವಲ ಭೂತ ಕಾಲವನ್ನು ಹೊಂದಿತ್ತು, ವರ್ತಮಾನದಲ್ಲೂ ಹೊಂದಿದೆ. ಸಾಮ್ರಾಜ್ಯಗಳ ನಿರ್ಮಾಣ ಮತ್ತು ಅವುಗಳ ವ್ಯವಸ್ಥೆಯಲ್ಲಿ ಧಾರ್ಮಿಕತೆ, ಸಾಹಿತ್ಯತೆ ಮತ್ತು ಸಾಮಾಜಿಕತೆಗಳು ಸಾರ್ಥಕತೆಯನ್ನು ಹೊಂದಿದೆ. ಇಲ್ಲಿನ ಸಂಪ್ರದಾಯ, ರೀತಿ ನೀತಿ, ಕಲೆ, ಸಂಸ್ಕೃತಿಗಳು ಪುರಾತನವಾದುದು, ಇಂತಹ ಸಂಪ್ರದಾಯ, ರೀತಿ ನೀತಿ, ಸಂಸ್ಕೃತಿಗಳನ್ನು ನಾವು ಶಾಸನವೆಂಬ ಮಾಧ್ಯಮದ ಮೂಲಕವೂ ಚೆನ್ನಾಗಿ ನೋಡಬಹುದಾಗಿದೆ. ಅದರಲ್ಲೂ ಸಂಸ್ಕೃತ ಶಾಸನಗಳಲ್ಲಿ ಇದೆಲ್ಲವನ್ನೂ 'ಇದಮಿತ್ಥಂ' ಎಂಬಂತೆ ನೋಡಬಹುದಾಗಿದೆ.

ಶಾಸನಗಳು ಮೂಲತಃ ಧಾರ್ಮಿಕ ವಿಚಾರಗಳನ್ನು ತಿಳಿಯಪಡಿಸಲು ಪ್ರಾರಂಭವಾಗಿ ಅನೇಕ ರೂಪಾಂತರಗಳನ್ನು ಪಡೆದು ಆಯಾಯಾ ಸ್ಥಳಗಳಿಗೆ ಮಹತ್ವವಾದ ಕೊಡುಗೆಯನ್ನು ನೀಡಿದೆ. 'ಶಾಸನಗಳು ರಾಜರ ಆಡಂಬರದ ಜೀವನವನ್ನು ಪ್ರದರ್ಶಿಸುವ ಸಾಧನವಾಗಿದೆ, ಎಂಬ ತಪ್ಪು ಕಲ್ಪನೆಯಿದೆ. ಕರ್ನಾಟಕದ ಶಾಸನಗಳನ್ನು ಅಧ್ಯಯನ ಮಾಡಿದರೆ ಈ ತಪ್ಪು ಗ್ರಹಿಕೆಯು ದೂರವಾಗುವುದು. ಕರ್ನಾಟಕದ ಶಾಸನಗಳಲ್ಲಿ ಧಾರ್ಮಿಕತೆ, ಸಾಮಾಜಿಕತೆ ಮತ್ತು ಸಾಹಿತ್ಯದ ಅಂಶಗಳು ತುಂಬಿ ತುಳುಕುತ್ತಿವೆ.

ಸಂಸ್ಕೃತ ಶಾಸನಗಳು ಇಂತಹ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ಅಂಶಗಳನ್ನು ಬಲಪಡಿಸುವಲ್ಲಿ ಪ್ರಧಾನ ಪಾತ್ರವಹಿಸಿದೆ. ಅಂತಹ ಅಂಶಗಳನ್ನು ಕ್ರೋಢೀಕರಿಸುವುದರಲ್ಲಿ ಈ

ಅಧ್ಯಯನವು ಸಫಲತೆಯನ್ನು ಪಡೆದಿದೆ. ಈ ಅಧ್ಯಯನವನ್ನು ಆರು ಅಧ್ಯಾಯಗಳನ್ನಾಗಿ ವಿಭಾಗಿಸಿ ಸಂಸ್ಕೃತ ಶಾಸನಗಳ ಆವಿರ್ಭಾವ, ವಿಕಾಸ, ವೈಶಿಷ್ಟ್ಯತೆ ಮತ್ತು ಪ್ರಭಾವವೆಂಬುದಾಗಿ ವಿಭಾಗಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವಗಳನ್ನು ತಿಳಿಸಲಾಗಿದೆ. ೨ನೆಯ ಅಧ್ಯಾಯದಲ್ಲಿ ಸಂಸ್ಕೃತ ಶಾಸನಗಳ ಆವಿರ್ಭಾವ, ಭಾರತದಲ್ಲಿ ಸಂಸ್ಕೃತ ಶಾಸನಗಳ ವಿಕಾಸ, ಕರ್ನಾಟಕದ ಶಾಸನಗಳ ಮೇಲೆ ಅದರ ಪ್ರಭಾವ ಮತ್ತು ಸಂಸ್ಕೃತ ಶಾಸನಗಳ ವಿಕಾಸದ ವಿವಿಧ ಹಂತಗಳನ್ನು ಚರ್ಚಿಸಲಾಗಿದೆ. ೩ನೆಯ ಅಧ್ಯಾಯದಲ್ಲಿ ಸಂಸ್ಕೃತ ಶಾಸನಗಳ ಸಾಮಾನ್ಯ ಸ್ವರೂಪವನ್ನು ಚರ್ಚಿಸಲಾಗಿದೆ. ೪ನೆಯ ಅಧ್ಯಾಯದಲ್ಲಿ ಕರ್ನಾಟಕದ ರಾಜಮನೆತನಗಳ ಕಾಲದಲ್ಲಿ ಸಂಸ್ಕೃತ ಶಾಸನಗಳು ಹೇಗೆ ವಿಕಾಸ ಹೊಂದಿದವು ಎಂದು ವಿಸ್ತಾರವಾಗಿ ಚರ್ಚಿಸಲಾಗಿದೆ. ಈ ಅಧ್ಯಾಯವು ಅಧ್ಯಯನದ ದೃಷ್ಟಿಯಿಂದ ಮಹತ್ವವಾಗಿದ್ದು, ವಿಸ್ತಾರವಾಗಿ ಶಾಸನದ ವಿಕಾಸವನ್ನು ತಿಳಿಯಪಡಿಸಿದೆ. ಕಾಲದ ದೃಷ್ಟಿಯಿಂದ ನಾಲ್ಕು ವಿಭಾಗಗಳನ್ನಾಗಿ ಮಾಡಿಕೊಂಡು ಆ ಹಂತದಲ್ಲಿ ಶಾಸನಗಳ ಸ್ವರೂಪದ ವಿಕಾಸವನ್ನು ತಿಳಿಸಲಾಗಿದೆ. ಈ ಅಧ್ಯಾಯದಲ್ಲಿ ವಿಶೇಷವಾಗಿ ಮಹತ್ವವನ್ನು ಪಡೆದಂತಹ ಶಾಸನಗಳ ಸ್ವರೂಪವನ್ನು ಹೇಳಲಾಗಿದೆ, ಮತ್ತು ಆ ಹಂತದಲ್ಲಿ ಪ್ರಸಿದ್ಧಿಗೆ ಬಂದಂತಹ ಸಾಹಿತ್ಯ ಗ್ರಂಥಗಳ ಮಾಹಿತಿಯನ್ನು ನೀಡಲಾಗಿದೆ. ಕರ್ನಾಟಕದಲ್ಲಿ ಮಹಾಮಂಡಳೇಶ್ವರರು, ಸಾಮಂತ ಅರಸರ ಕಾಲದಲ್ಲೂ ಸಂಸ್ಕೃತ ಶಾಸನಗಳು ಕಂಡು ಬರುತ್ತವೆ. ಅವುಗಳ ಮಹತ್ವ ಮತ್ತು ಸ್ವರೂಪವನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

೫ನೆಯ ಅಧ್ಯಾಯದಲ್ಲಿ ಸಂಸ್ಕೃತ ಶಾಸನಗಳ ಕಾವ್ಯ ಚಮತ್ಕಾರ ಗುಣಗಳನ್ನು ಮತ್ತು ಗದ್ಯ ಚಮತ್ಕಾರದ ಅಂಶಗಳನ್ನು ವಿಶೇಷವಾಗಿ ಚರ್ಚಿಸಲಾಗಿದ್ದು, ಸಂಸ್ಕೃತ ಶಾಸನಗಳು ಕನ್ನಡ ಶಾಸನಗಳ ಮೇಲೆ ಬೀರಿದಂತಹ ಪ್ರಭಾವ ಮತ್ತು ಪರಿಣಾಮವನ್ನು ವರ್ಣಿಸಲಾಗಿದೆ. ಅಧ್ಯಯನ ದೃಷ್ಟಿಯಿಂದ ಈ ಅಧ್ಯಾಯವು ಕೂಡಾ ಮಹತ್ವವಾಗಿದೆ.

ಪ್ರಧಾನವಾಗಿ ಈ ಅಧ್ಯಯನಕ್ಕೆ ಎಫಿಗ್ರಾಫಿಯಾ ಕರ್ನಾಟಿಕಾ, ಎಫಿಗ್ರಾಫಿಯಾ ಇಂಡಿಕಾ ಮತ್ತು ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳನ್ನು ಬಳಸಲಾಗಿದೆ. ಈ ಅಧ್ಯಯನವು ಪ್ರಕಟಿತ ಶಾಸನಗಳ ಅಧ್ಯಯನವಾದುದರಿಂದ ಯಾವುದೇ ಕ್ಷೇತ್ರಕಾರ್ಯದ ಅವಶ್ಯಕತೆ ಉಂಟಾಗಲಿಲ್ಲ. ಅಧ್ಯಯನದ ಕೊನೆಯಲ್ಲಿ ಕರ್ನಾಟಕದಲ್ಲಿ ಸಂಸ್ಕೃತ ಶಾಸನಗಳು ದೊರಕುವ ಸ್ಥಳಗಳನ್ನು ಗುರುತಿಸಿದರುವ ನಕ್ಷೆಯನ್ನು ನಿಡಲಾಗಿದೆ. ಪ್ರಧಾನವಾದಂತಹ ಶಾಸನಗಳ ಛಾಯಚಿತ್ರವನ್ನು ನೀಡಲಾಗಿದೆ.

ಅಧ್ಯಯನವು ವಿಷಯ ದೃಷ್ಟಿಯಿಂದ ವಿಶಾಲವಾಗಿದ್ದು, ಇನ್ನೂ ಅಧಿಕ ಅಧ್ಯಯನವನ್ನು ಮಾಡಬಹುದಾಗಿದೆ. ಈ ಅಧ್ಯಯನವು ಕೇವಲ ಶಾಸನಗಳ ಸ್ವರೂಪವನ್ನಷ್ಟೇ ಪ್ರಧಾನವಾಗಿರಿಸಿ ಕೊಂಡಿದೆ. ಇನ್ನೂ ಸಾಂಸ್ಕೃತಿಕವಾಗಿ ಶಾಸನಗಳ ಅಧ್ಯಯನ ಮಾಡುವಂತಹ ವಿಪುಲವಾದ ಅವಕಾಶವಿದೆ.

ಅನುಬಂಧಗಳು

೧. ಗ್ರಂಥಋಣ

೨. ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

೧.	ಇತಿಹಾಸ ದರ್ಶನ ಸಂಪುಟಗಳು	ಇತಿಹಾಸ ಅಕಾಡೆಮಿ ಬೆಂಗಳೂರು
೨.	ಕನ್ನಡ ಲಿಪಿ ವಿಕಾಸ	ಡಾ। ಎಂ. ಜೆ ಮಂಜುನಾಥ ಮತ್ತು ಜೆ. ಕೆ. ದೇವರಾಜ ಸ್ವಾಮಿ ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಮಂತ್ರಾಲಯ.
೩.	ಕನ್ನಡ ಶಾಸನ ಶಿಲ್ಪ	ಡಾ। ಪರಮಶಿವಮೂರ್ತಿ ಡಿ. ವಿ. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
೪.	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ	ಚಿದಾನಂದ ಮೂರ್ತಿ ಸಪ್ನಾ ಬುಕ್ ಹೌಸ್, ಬೆಂಗಳೂರು
೫.	ಕನ್ನಡ ಶಾಸನಗಳ ಅಧ್ಯಯನ	ಭಗವತಿ ಎಸ್. ಎಸ್. ವಿದ್ಯಾನಿಧಿ ಪ್ರಕಾಶನ ಗದಗ, ೨೦೦೪
೬.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು – ೧, ೨, ೩, ೭, ೮	ಡಾ. ದೇವರ ಕೊಂಡಾರೆಡ್ಡಿ, ಡಾ. ಭಟ್ಸೂರಿ ಕೆ.ಜಿ, ಡಾ. ಪರಮಶಿವಮೂರ್ತಿ ಡಿ.ವಿ, ಶ್ರೀ ಕಲವೀರ ಮನ್ವಾಚಾರ್ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.
೭.	ಕನ್ನಡ ನಾಡಿನ ಶಾಸನ ಕವಿಗಳು	ಮೇವುಂಡಿ ಮಲ್ಲಾರಿ ಪ್ರತಿಭಾ ಗ್ರಂಥ ಮಾಲ–ಧಾರವಾಡ
೮.	ಕರ್ನಾಟಕದ ಗತ ವೈಭವ	ಆಲೂರು ವೆಂಕಟರಾಯರು ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.
೯.	ಕರ್ನಾಟಕ ಇತಿಹಾಸ ದರ್ಶನ	ಡಾ. ಕೃಷ್ಣರಾವ್ ಎಂ. ವಿ. ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು
೧೦.	ಕಲ್ಬುರ್ಗಿ ಜಿಲ್ಲೆಯ ಶಾಸನಗಳು	ಹನುಮಾಕ್ಷಿ ಗೋಗಿ ಶಿವಚಂದ್ರ ಪ್ರಕಾಶನ, ಹುಬ್ಬಳ್ಳಿ
೧೧.	ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ	ಶೈಲಜಾ. ಟಿ. ವರ್ಮಾ ಜ್ಞಾನೋದಯ ಪ್ರಕಾಶನ, ಮಂಗಳೂರು.
೧೨.	ನ್ಯಾಯ ಪ್ರದೀಪ	ಸರಕಾರಿ ಪುಸ್ತಕ ಮುದ್ರಣಾಲಯ, ಮೈಸೂರು.
೧೩.	ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ	ನೇಗಿನಹಾಳ ಎಂ. ಬಿ. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಧಾರವಾಡ.
೧೪.	ಬನವಾಸಿ ಕದಂಬರು	ಬಾ.ರಾ ಗೋಪಾಲ್ ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ, ಶಿರಸಿ.

೧೫. ಭಾರತೀಯ ಕಾವ್ಯ ಶಾಸ್ತ್ರ ಪರಿಭಾಷೆ — ವೆಂಕಟೇಶ್ ಜಿ. ಮಲ್ಲೇಪುರಂ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಮಾರ್ಗದರ್ಶಿ ಅಭ್ಯಾಸ ಪಾಠಗಳು — ದೂರ ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ವಿಜಯನಗರ ಅಧ್ಯಯನ – ಸಂಪುಟಗಳು — ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೧೮. ಲಿಪಿಯ ಹುಟ್ಟು ಮತ್ತು ಬೆಳವಣಿಗೆ — ಡಾ। ದೇವರಕೊಂಡಾರೆಡ್ಡಿ, ಕನ್ನಡ ಪುಸ್ತಕಪ್ರಾಧಿಕಾರ, ಬೆಂಗಳೂರು.

೧೯. ಶಾಸನ ಶಾಸ್ತ್ರ ಪರಿಚಯ — ಶಾಸನ ನಿರ್ದೇಶಾನಾಲಯ, ಮೈಸೂರು.

೨೦. ಶಾಸನ ಪರಿಭಾಷೆ — ಹಿರೇ ಮಠ ಎಸ್.ಎಂ., ವಿದ್ಯಾನಿಧಿ ಪ್ರಕಾಶನ, ಗದಗ.

೨೧. ಶಾಸನ ಶಾಸ್ತ್ರ ಪ್ರವೇಶ — ಸಿ.ಪಿ.ಕೆ, ಚೇತನಾ ಬುಕ್ ಹೌಸ್, ಮೈಸೂರು.

೨೨. ಶಾಸನ ಸಂಗ್ರಹ — ಅಣ್ಣಿಗೇರಿ ಎಂ.ಎಂ., ಡಾ. ಶೇಷಶಾಸ್ತ್ರಿ ಆರ್., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೩. ಸಂಸ್ಕೃತ ಕನ್ನಡ ನಿಘಂಟು — ಬಲದೇವ ಉಪಾಧ್ಯಾಯ ಆಚಾರ್ಯ, ಪ್ರಸಾರಂಗ– ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೪. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳು ೧ ರಿಂದ ೧೩ — ಸ್ಟೇಟ್ ಆರ್ಕಿಯೋಲಾಜಿಕಲ್ ಡಿಪಾರ್ಟಮೆಂಟ್ ಮೈಸೂರು

ENGLISH BOOKS

1. **A Corpus of Inscriptions in Kannada Districts of Hyderabad States** — **P. B. Desai**, Archaeological Department of Hyderabad

2. **Epigraphia Indica Volumes (1-42)** — Archaeological Survey of India, N. Delhi

3. **Inscriptions of Western Gangas** — **Ramesh K.V.**, I.C.H.R., New Delhi.

4. **Uttankita Sanskrit Vidyaranya Epigraphs Vol - 1-4** — **Uttankita Vidya Aranya** Trust, mysore - 2006

5. **Karnataka Inscriptions, Vol 1-6 ,** — **Annigeri A.M,** Karnataka Research Institute, Dharwar.

6. **Indian Epigraphy** — **Sarcar D.C.** Motilal Banarasi Das, New Delhi.

ಐಹೊಳೆ ಶಾಸನ


ಕೃಪೆ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೯

೧ ಜಯತಿ ಭಗವಜ್ಜಿನೇನ್ದ್ರೋ [ವೀ]ತಜ[ರಾಮ]ರಣ ಜನ್ಮನೋ ಯಸ್ಯ ಜ್ಞಾನಸಮುದ್ರಾನ್ತರ್ಗ್ಗ
[ತ]ಮಖಿಳಞ್ಜಗದನ್ತರೀಪಮಿವ ॥ ತದನು ಚಿರಮಪರಿಮೇಯಶ್ಚಲುಕ್ಯ
ಕುಲ ವಿಪುಲ ಜಲನಿಧಿರ್ಜ್ಜಯತಿ ॥ ಪೃಥಿವೀ ಮೌಲಿಲಲಾಮ್ನಾಯತ್ಪ್ರಭವನ್ತಿ ಪುರುಷ
ರತ್ನಾನಾಮ್ ॥ ಶೂರೇ ವಿದುಷಿ ಚ ವಿಭಜನ್ದಾನಮ್ಮಾನಞ್ಚ ಯುಗಪದೇಕತ್ರ ॥
೨ ಅವಿಹಿತ ಯಥಾ ಸಂ[ಖ್ಯೋ ಜ]ಯತಿ ಚ ಸತ್ಯಾಶ್ರಯಶ್ಚಿರಮ್ ॥ ಪೃಥಿವೀವಲ್ಲಭ ಶಬ್ದೋ
ಯೇಷಾಮನ್ವರ್ತ್ಥತಾಞ್ಚಿರಞ್ಜಾತಃ ತದ್ವಂಶೇಷು ಜಿಗೀಷುಷು ತೇಷು ಬಹುಷ್ವಪ್ಯತೀ
ತೇಷು ॥ ನಾನಾಹೇತಿ ಶತಾಭಿಘಾತ ಪತಿತ ಭ್ರಾನ್ತಾಶ್ವಪತ್ತಿದ್ವಿಪೇ ನೃತ್ಯದ್ಭೀಮ
ಕವನ್ಧ ಖಡ್ಗಕಿರಣ ಜ್ವಾಲಾ ಸಹಸ್ರೇ ರಣೇ
೩ ಲಕ್ಷ್ಮೀರ್ಭಾವಿತ ಚಾಪಲಾಪಿ ಚ ಕೃತಾ ಶೌರ್ಯ್ಯೇಣ ಯೇನಾತ್ಮಸಾತ್ ರಾಜಾಸೀಜ್ಜಯಸಿಂಹ
ವಲ್ಲಭ ಇತಿ ಖ್ಯಾತಶ್ಚಲುಕ್ಯಾನ್ವಯಃ ॥ ತದಾತ್ಮಜೋಭೂದ್ರಣರಾಗ ನಾಮಾ
ದಿವ್ಯಾನುಭಾವೋ ಜಗದೇಕನಾಥಃ ಅಮಾನುಷತ್ವಂ ಕಿಲಯಸ್ಯ ಲೋಕಃ ಸುಪ್ತಸ್ಯ
ಜಾನಾತಿ ವಪುಃಪ್ರಕರ್ಷಾತ್ ತಸ್ಯಾಭವತ್ತನೂಜಃ ಪೊಲೆಕೇಶಿಯಃ ಶ್ರಿತೇನ್ದುಕಾನ್ತಿರಪಿ
೪ ಶ್ರೀ ವಲ್ಲಭೋಪ್ಯಯಾಸೀದ್ವಾತಾಪಿಪುರೀವಧೂವರತಾಮ್ ॥ ಯತ್ತ್ರಿವರ್ಗ್ಗ ಪದವೀಮಲಂ
ಕ್ಷಿತೌ ನಾನುಗನ್ತುಮಧುನಾಪಿ ರಾಜಕಮ್ ಭೂಶ್ಚಯೇನ ಹಯಮೇಧಯಾಜಿನಾ
ಪ್ರಾಪಿತಾವಭೃಥಮಜ್ಜನಾ ಬಭೌ ನಳ ಮೌರ್ಯ್ಯ ಕದಮ್ಬ ಕಾಳರಾತ್ರಿಸ್ತನಯ
ಸ್ತಸ್ಯ ಬಭೂವ ಕೀರ್ತ್ತಿವರ್ಮ್ಮಾ ಪರದಾರ ನಿವೃತ್ತ ಚಿತ್ತವೃತ್ತೇರಪಿ ಧೀರ್ಯ್ಯಸ್ಯ
ರಿಪುಶ್ರೀ
೫ ಯಾನುಕೃಷ್ಟಾ ॥ ರಣಪರಾಕ್ರಮ ಲಬ್ಧ ಜಯಶ್ರಿಯಾ ಸಪದಿ ಯೇನವಿರುಗ್ಣಮಶೇಷತಃ
ನೃಪತಿಗನ್ಧಗಜೇನ ಮಹೌಜಸಾ ಪೃಥು ಕದಮ್ಬ ಕದಮ್ಬ ಕದಮ್ಬಕಮ್ ತಸ್ಮಿನ್ಸುರೇಶ್ವರ
ವಿಭೂತಿ ಗತಾಭಿಲಾಷೇ ರಾಜಾಭವತ್ತದನುಜx˚ಲ ಮಙ್ಗಲೀಶಃ ಯಃಪೂರ್ವ್ವ ಪಶ್ಚಿಮ
ಸಮುದ್ರತಟೋಷಿತಾಶ್ವ ಸೇನಾರಜಃಪಟ ವಿನಿರ್ಮ್ಮಿತ ದಿಗ್ವಿತಾನಃ ಸ್ಫುರನ್ಮಯೂಖೈರ
ಸಿ ದೀಪಿಕಾಶತೈಃ
೬ ವ್ಯುದಸ್ಯ ಮಾತಙ್ಗ ತಮಿಸ್ರ ಸಞ್ಚಯಮ್ ಅವಾಪ್ತವಾನ್ಯೋ ರಣರಙ್ಗಮನ್ದಿರೇ ಕಟಚ್ಚುರಿ
ಶ್ರೀಲಲನಾ ಪರಿಗ್ರಹಮ್ ॥ ಪುನರಪಿ ಚ ಜಿಘೃಕ್ಷೋಸ್ಸೈನ್ಯಮಾಕ್ರಾನ್ತಸಾಲಮ್
ರುಚಿರ ಬಹುಪತಾಕಂ ರೇವತೀದ್ವೀಪಮಾಶು ಸಪದಿ ಮಹದುದನ್ವತ್ತೋಯ
ಸಂಕ್ರಾನ್ತಬಿಮ್ಬಮ್ ವರಣ ಬಲಮಿವಾಭೂದಾಗತಂ ಯಸ್ಯ ವಾಚಾ ॥
ತಸ್ಯಾಗ್ರಜಸ್ಯ ತನಯೇ ನಹುಷಾನುಭಾಗೇ ಲಕ್ಷ್ಮ್ಯಾ ಕಿಲಾಭಿ
೭ ಲಷಿತೇ ಪೊಲೆಕೇಶಿನಾಮ್ನಿ ಸಾಸೂಯಮಾತ್ಮನಿ ಭವನ್ತಮತಃ ಪಿತೃವ್ಯಂ ಜ್ಞಾತ್ವಾಪರುದ್ಧಚರಿತ
ವ್ಯವಸಾಯ ಬುದ್ಧೌ ಸ ಯದುಪಚಿತ [ಮ]ನ್ತ್ರೋತ್ಸಾಹ ಶಕ್ತಿ ಪ್ರಯೋಗ ಕ್ಷಪಿತ
ಬಲವಿಶೇಷೋ ಮಙ್ಗಲೇಶಸ್ಸಮನ್ತಾತ್ ಸ್ವ ತನಯ ಗತರಾಜ್ಯಾರಮ್ಭ ಯತ್ನೇನ ಸಾರ್ದ್ಧಂ
ನಿಜಮತನು ಚ ರಾಜ್ಯಞ್ಜೀವಿತಞ್ಚೋಜ್ಝತಿ ಸ್ಮ ॥ ತಾವತ್ತಚ್ಛತ್ರ ಭಙ್ಗೇ ಜಗದಖಿಲ
ಮರಾತ್ಯನ್ಧಕಾರೋಪರುದ್ಧಂ
೮ ಯಸ್ಯಾಸಹ್ಯ ಪ್ರತಾಪದ್ಯುತಿ ತತಿಭಿರಿವಾಕ್ರಾನ್ತಮಾಸೀತ್ಪ್ರಭಾತಮ್ ನೃತ್ಯದ್ವಿದ್ಯುತ್ಪತಾಕೈಃಪ್ರಜವಿನಿ
ಮರುತಿ ಕ್ಷುಣ್ಣ ಪರ್ಯ್ಯನ್ತ ಭಾಗೈರ್ಗ್ಗರ್ಜ್ಜದ್ಭಿರ್ವ್ವಾರಿವಾಹೈರಳಿ ಕುಲ ಮಲಿನಂ
ವ್ಯೋಮ ಯಾತಂ ಕದಾ ವಾ ॥ ಲ[ಬ್ಧ್ವಾ] ಕಾಲಂ ಭುವಮುಪಗತೇ
ಜೇತುಮಾಪ್ಪಾಯಿಕಾಖ್ಯೇ ಗೋವಿನ್ದೇ ಚ ದ್ವಿರದ ನಿಕರೈರುತ್ತರಾಮ್ಭೈಮರಥ್ಯಾಃ
ಯಸ್ಯಾನೀಕೈರ್ಯ್ಯುಧಿ ಭಯ ರಸಜ್ಞತ್ವಮೇಕಃಪ್ರಯಾತಸ್ತತ್ರಾವಾಪ್ತಮ್ಫಲಮುಪಕೃತಸ್ಯಾ

೯ ಪರೇಣಾಪಿ ಸದ್ಯಃ ॥ ವರದಾತುಙ್ಗತರಙ್ಗರಙ್ಗವಿಲಸದ್ಧಂಸಾವಳೀ ಮೇಖಲಾಂ ವನವಾಸೀಮ
ವಮೃದ್ನತಸ್ಸುರಪುರಪ್ರಸ್ಪರ್ದ್ಧಿನೀಂ ಸಮ್ಪದಾ ಮಹತಾ ಯಸ್ಯ ಬಲಾರ್ಣ್ಣವೇನ
ಪರಿತಸ್ಸಞ್ಛಾದಿತೋರ್ವ್ವೀ ತಲಂ । ಸ್ಥಲದುರ್ಗ್ಗಂ ಜಲದುರ್ಗ್ಗತಾಮಿವ ಗತಂ ತತ್ತತ್ಕ್ಷಣೇ
ಪಶ್ಯತಾಮ್ ಗಙ್ಗಾಳುಪೇನ್ದ್ರಾ ವ್ಯಸನಾನಿ ಸಪ್ತ ಹಿತ್ವಾ ಪುರೋಪಾರ್ಜ್ಜಿತ ಸಮ್ಪದೋಪಿ
ಯಸ್ಯಾನುಭಾವೋಪನತಾಸ್ಸದಾಸನ್ನಾ
೧೦ ಸನ್ನ ಸೇವಾಮೃತಪಾನ ಶೌಣ್ಡಾಃ ಕೊಙ್ಕಣೇಷು ಯದಾದಿಷ್ಟ ಚಣ್ಡ ದಣ್ಡಾಮ್ಬುವೀಚಿಭಿಃ
ಉದಸ್ತಾಸ್ತರಸಾ ಮೌರ್ಯ್ಯ ಪಲ್ವಲಾಂಬು ಸಮೃದ್ಧಯಃ । ಅಪರ ಜಲಧೇರ್ಲ್ಲಕ್ಷ್ಮೀ[೦]
ಯಸ್ಮಿನ್ಪುರೀಮ್ಪುರಭಿತ್ಪ್ರಭೇ ಮದಗಜ ಘಟಾಕಾರೈರ್ನ್ನಾವಾಂ ಶತೈರವಮೃದ್ನತಿ
ಜಲದ ಪಟಲಾನೀಕಾಕೀರ್ಣ್ಣನ್ನವೋತ್ಪಲಮೇಚಕಞ್ಜಲನಿಧಿರಿವ ವ್ಯೋಮ ವ್ಯೋಮ್ನಸ್ಸ
೧೧ ಮೋಭವದಮ್ಬುಧಿಃ ಪ್ರತಾಪೋಪನತಾ ಯಸ್ಯ ಲಾಟ ಮಾಳವ ಗೂರ್ಜ್ಜರಾಃ
ದಣ್ಡೋಪನತ ಸಾಮನ್ತ ಚರ್ಯ್ಯಾಚರ್ಯ್ಯ ಇವಾಭವನ್ ॥ ಅಪರಿಮಿತ
ವಿಭೂತಿ ಸ್ಫೀತ ಸಾಮನ್ತ ಸೇನಾ ಮಕುಟಮಣಿ ಮಯೂಖಾಕ್ರಾನ್ತ ಪಾದಾರವಿನ್ದಃ
ಯುಧಿ ಪತಿತ ಗಜ(ಜೇ)ನ್ದ್ರಾನೀಕ ವೀಭತ್ಸಭೂತೋ ಭಯವಿಗಳಿತ ಹರ್ಷೋ
ಯೇನ ಚಾಕಾರಿ ಹರ್ಷಃ ॥ ಭುವಮುರುಭಿರನೀಕೈಶ್ಶಾ
೧೨ ಸತೋ ಯಸ್ಯ ರೇವ್ವೋ ವಿವಿಧ ಪುಳಿನಶೋಭಾವನ್ಧ್ಯವಿನ್ಧ್ಯೋಪಕಣ್ಠಃ ಅಧಿಕತರಮರಾಜತ್ಸ್ವೇನ
ತೇಜೋ ಮಹಿಮ್ನಾ ಶಿಖರಿಭಿರಿಭ ವರ್ಜ್ಯಾ ವರ್ಷ್ಮಣಾ ಸ್ಪರ್ದ್ಧಯೇವ ವಿಧಿ
ವದುಪಚಿತಾಭಿಶ್ಶಕ್ತಿಭಿಶ್ಶಕ್ರಕಲ್ಪಸ್ತಿಸೃಭಿರಪಿ ಗುಣೌಘೈಸ್ಸ್ವೈಶ್ಚ ಮಹಾಕುಲಾದ್ಯೈಃ
ಅಗಮದಧಿಪತಿತ್ವಂ ಯೋ ಮಹಾರಾಷ್ಟ್ರಕಾಣಾಂ ನವನವತಿ ಸಹಸ್ರ
ಗ್ರಾಮ ಭಾಜಾಂ ತ್ರಯಾಣಾಂ ಗೃಹಿಣಾಂ ಸ್ವ
೧೩ ಸ್ವ ಗುಣೈಸ್ತ್ರಿವರ್ಗ್ಗ ತುಙ್ಗಾ ವಿಹಿತಾನ್ಯಕ್ಷಿತಿಪಾಲ ಮಾನಭಙ್ಗಾ[ಃ] ಅಭವನ್ನುಪಜಾತ
ಭೀತಿಲಿಙ್ಗಾ ಯದನೀಕೇನ ಸ ಕೋ[ಸ]ಲಾx ಲಿಙ್ಗಾ[ಃ] ಪಿಷ್ಟಂ ಪಿಷ್ಟಪುರಂ
ಯೇನ ಜಾತಂ ದುರ್ಗಮದುರ್ಗ್ಗಮಞ್ಚಿತ್ರಂ ಯಸ್ಯ ಕಲೇರ್ವೃತ್ತಮ್ ಜಾತಮ್
ದುರ್ಗ್ಗಮ ದುರ್ಗ್ಗಮಮ್ । ಸನ್ನದ್ಧ ವಾರಣ ಘಟಾ ಸ್ಥಗಿತಾನ್ತರಾಳಮ್ ನಾನಾಯುಧ
ಕ್ಷತ ನರ ಕ್ಷತಜಾಙ್ಗರಾಗಂ ಆಸೀಜ್ಜಲಂ ಯದವಮರ್ದಿತಮಭ್ರಗರ್ಭಂ ಕೌನಾಳಮ
೧೪ ಮ್ಬರಮಿವೋ[ಜಿ]ತ ಸಾನ್ಧ್ಯರಾಗಮ್ ॥ ಉದ್ಧೂತಾಮಲ ಚಾಮರಧ್ವಜ ಶತಚ್ಛತ್ರಾನ್ಧಕಾರೈರ್ವ್ವಲೈಃ
ಶೌರ್ಯ್ಯೋತ್ಸಾಹ ರಸೋದ್ಧತಾರಿ ಮಥನೈರ್ಮ್ಮೌಲದಿಭಿಷ್ಷಡ್ವಿಧೈಃ ಆಕ್ರಾನ್ತಾತ್ಮ ಬಲೋನ್ನತಿಂ
ಬಲರಜಸ್ಸಞ್ಛನ್ನ ಕಾಞ್ಚೀಪುರಃ ಪ್ರಾಕಾರಾನ್ತರಿತ ಪ್ರತಾಪಮಕರೋದ್ಯಃ ಪಲ್ಲವಾನಾ
ಮ್ಪತಿಮ್ ॥ ಕಾವೇರೀ ದ್ರುತಶಫರೀ ವಿಲೋಲನೇತ್ರಾ ಚೋಳಾನಾಂ ಸಪದಿ
ಜಯೋದ್ಯತಸ್ಯ ಯಸ್ಯ ಪ್ರಶ್ಚ್ಯೋತನ್ಮದಗಜ ಸೇ
೧೫ ತು ರುದ್ಧನೀರಾ ಸಂಸ್ಪರ್ಶಂ ಪರಿಹರತಿ ಸ್ಮ ರತ್ನರಾಶೇಃ । ಚೋಳ ಕೇರಳ ಪಾಣ್ಡ್ಯಾನಾಮ್
ಯೋಭೂತ್ತತ್ರ ಮಹರ್ದ್ಧಯೇ ಪಲ್ಲವಾನೀಕ ನೀಹಾರ ತುಹಿನೇತರದೀಧಿತಿಃ ॥
ಉತ್ಸಾಹ ಪಭು ಮನ್ತ್ರಶಕ್ತಿ ಸಹಿತೇ ಯಸ್ಮಿನ್ಸಮಸ್ತಾದಿಶೋ ಜಿತ್ವಾ ಭೂಮಿ ಪತೀನ್ವಿಸೃಜ್ಯ
ಮಹಿತಾನಾರಾಧ್ಯ ದೇವದ್ವಿಜಾನ್ ವಾತಾಪೀನ್ನಗರೀಮ್ಪ್ರವಿಶ್ಯ ನಗರೀಮೇಕಾಮಿವೋರ್ವ್ವಿ
ಮಿಮಾಮ್ ಚಞ್ಚನ್ನೀರಧೀ ನೀಲನೀರ ಪರಿಖಾಂ
೧೬ ಸತ್ಯಾಶ್ರಯೇ ಶಾಸತಿ ॥ ತ್ರಿಂಶತ್ಸು ತ್ರಿಸಹಸ್ರೇಷು ಭಾರತಾದಾಹವಾದಿತಃ ಸಪ್ತಾಬ್ದ
ಶತಯುಕ್ತೇಷು ಶತೇಷ್ವಬ್ದೇಷು ಪಞ್ಚಸು ಪಞ್ಚಾಶತ್ಸು ಕಲೌ ಕಾಲೇ ಷಟ್ಸು
ಪಞ್ಚ ಶತಾಸು ಚ ಸಮಾಸು ಸಮತೀತಾಸು ಶಕಾನಾಮಪಿ ಭೂಭುಜಾಮ್
ತಸ್ಯಾಮ್ಬುಧಿ ತ್ರಯ ನಿವಾರಿತ ಶಾಸನಸ್ಯ
೧೭ ಸತ್ಯಾಶ್ರಯಸ್ಯ ಪರಮಾಪ್ತವತಾ ಪ್ರಸಾದಂ ಶೈಲಞ್ಜಿನೇನ್ದ್ರ ಭವನಮ್ಭವನಮ್ಮಹಿಮ್ನಾ
ನಿರ್ಮ್ಮಾಪಿತಮ್ಮತಿಮತಾ ರವಿಕೀರ್ತಿನೇದಮ್ ॥ ಪ್ರಶಸ್ತೇರ್ವ್ವಸತೇಶ್ಚಾಸ್ಯಾಃ
ಜಿನಸ್ಯ ತ್ರಿಜಗದ್ಗುರೋxರ್ತ್ತಾ ಕಾರಯಿತಾ ಚಾಪಿ ರವಿಕೀರ್ತ್ತಿxರ್ತ್ತೀ
ಸ್ವಯಮ್ ॥ ಯೇನಾಯೋಜಿ ನವೇಶ್ಮಸ್ಥಿರಮರ್ತ್ಥವಿಧೌ ವಿವೇಕಿನಾ ಜಿನವೇಶ್ಮ
ಸ ವಿಜಯತಾಂ ರವಿಕೀರ್ತ್ತಿxವಿತಾ
೧೮ ಶ್ರಿತ ಕಾಳಿದಾಸ ಭಾರವಿಕೀರ್ತ್ತಿಃ ◎ ಮೂಲವಳ್ಳಿ ವೆಳ್ಪಟಿಕವಾಡ ಮಚ್ಚನೂರ್ಗಜವೂರ್ಪುಳಿಗೆರೆ
ಗಣ್ಣವಗ್ರಾಮ ಇತಿ ಅಸ್ಯ ಭುಕ್ತಿ[ಃ] ಗಿರಿಸ್ತಟಾತ್ಪಶ್ಚಿಮಾಭಿಗತ ನಿಮ್ಬ
ವಾರಿಯಾರ್ವ[ತ್ತ್] ಮಹಾಪಥಾನ್ಯಪುರಸ್ಯ ಸೀಮಾ ಉತ್ತರತಃ ದಕ್ಷಿಣತೋ
೧೯ . . ಗ ನಾ . ನ ಡ


ಚಾಲುಕ್ಯ ವಲ್ಲಭೇಶ್ವರನ ಬಾದಾಮಿ ಶಾಸನ

ಕೃಪೆ : ಇ.ಐ. ೨೭




ಕಳಚೂರಿಸಿಂಘಣ ಇಟಗಿ ತಾಮ್ರ ಶಾಸನ

ಕೃಪೆ : A Corpus of Inscriptions in the Kannada Districts of Hyderabad State No. 18




ಕಳಚೂರಿಸಿಂಘಣ ಇಟಗಿ ತಾಮ್ರ ಶಾಸನ

ಕೃಪೆ : A Corpus of Inscriptions in the Kannada Districts of Hyderabad State No. 18




ಗೋವದ ಮಾಧವ ರಾಜನ ಕುಕ್ಕೆ ತಾಮ್ರ ಶಾಸನ

ಕೃಪೆ : Epigraphia Indica Vol. XLI




ಗೋವದ ಮಾಧವ ರಾಜನ ಕುಕ್ಕೆ ತಾಮ್ರ ಶಾಸನ

ಕೃಪೆ : Epigraphia Indica Vol. XLI




ಗೋವದ ಮಾಧವ ರಾಜನ ಕುಕ್ಕೆ ತಾಮ್ರ ಶಾಸನ

ಕೃಪೆ : Epigraphia Indica Vol. XLI



ಗೋವದ ಮಾಧವ ರಾಜನ ಕುಕ್ಕೆ ತಾಮ್ರ ಶಾಸನ

ಕೃಪೆ : Epigraphia Indica Vol. XLI



ತಿರುಮಲರಾಯನ ತಾಮ್ರ ಶಾಸನ

ಕೃಪೆ : ಮಾಧ್ವ ಮಠಗಳ ಶಾಸನಗಳು ಸಂ- ೧



ಕರ್ನಾಟಕದಲ್ಲಿ ಹೆಚ್ಚಾಗಿ ಸಂಸ್ಕೃತ ಶಾಸನಗಳು ದೊರಕುವ ಸ್ಥಳಗಳು

